
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/-
ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ-06 • ಸಂಚಿಕೆ-03 • ಆಗಸ್ಟ್ 2024



ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು

ಕರ್ನಾಟಕ ಗಾಂಧಿ
ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English
Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations,** Bangalore

ರೂ. 28/– **BAAPU PRAPANCHA**

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–06 • ಸಂಚಿಕೆ–03 • ಆಗಸ್ಟ್ 2024

ಪತ್ರಗಳು

ಮಾನ್ಯರೆ ,

ಗಾಂಧಿ ಅಂಬೇಡ್ಕರ್ ಜುಗಲ್ ಬಂದಿ ಲೇಖನ ಗಾಂಧಿ ಅಂಬೇಡ್ಕರ್ ಅಭಿಮಾನಿಗಳಿಬ್ಬರೂ ಓದಲೇ ಬೇಕಾದ ಲೇಖನ. ಇಬ್ಬರೂ ಮಹಾನ್ ಚೇತನಗಳು. ಗಾಂಧಿ ಒಟ್ಟು ಭಾರತದ ಚಿಂತನೆ ನಡೆಸಿದರೆ ಅಂಬೇಡ್ಕರ್ ತಮ್ಮ ತಳ ಸಮುದಾಯದ ಸಾಮಾಜಿಕ ಉನ್ನತಿಗೆ ಹಾತೊರೆದರು. ಅಂಬೇಡ್ಕರ್ ಅವರಿಗೆ ಇದೇ ಮೊದಲ ಆದ್ಯತೆ ಆಗಿತ್ತು. ಭಾರತ ಸಾಮಾಜಿಕ ಪಿಡುಗಿನಿಂದ ಪಾರಾಗಲು ಕಾನೂನು ಮೂಲಕ ಮಾತ್ರ ಸಾಧ್ಯ ಎನ್ನುವುದು ಅವರ ನಿಲುವಾಗಿತ್ತು. ವ್ಯಕ್ತಿಯ ಮನ ಪರಿವರ್ತನೆಯಿಂದ ಸಾಮಾಜಿಕ ಸುಧಾರಣೆ ಸಾಧ್ಯ ಎನ್ನುವುದರಲ್ಲಿ ಗಾಂಧಿಗೆ ನಂಬಿಕೆ ಇತ್ತು.

ಸಾವಿರ ವರ್ಷ ಕಳೆದರೂ ಮನುಷ್ಯ ಜಾತಿ ತರತಮದಿಂದ ಹೊರ ಬಂದಿಲ್ಲ . ಇದಕ್ಕೆ ಮದ್ದು ಕಾನೂನಿನ ಮೂಲಕವೇ ಆಗ ಬೇಕು . ಅದಕ್ಕೆ ತಕ್ಕುದಾದ ಸಂವಿಧಾನ ರಚನೆ ಆಗ ಬೇಕು ಎಂದು ಹೋರಾಟ ನಡೆಸಿ ಅಂಬೇಡ್ಕರ್ ಗೆದ್ದರು . ಗಾಂಧಿ ಇವರ ಬೆನ್ನಿಗೆ ನಿಂತು ಅಂಬೇಡ್ಕರ್ ಆಶಯದ ಸಂವಿಧಾನ ರಚನೆಗೆ ಸಹಕರಿಸಿದರು. ಪರಸ್ಪರ ಗೌರವ ಇಟ್ಟುಕೊಂಡಿದ್ದ ಈ ಎರಡೂ ಚೇತನಗಳಿಗೆ ಶರಣು ಶರಣು.

ಗೌತಮ, ಕೆಂಗೇರಿ, ಬೆಂಗಳೂರು

* * *

ಮಾನ್ಯರೆ,

ಗಾಂಧಿಯನ್ನು ಯುವ ಪೀಳಿಗೆಗೆ ಹೇಗೆ ತಲುಪಿಸ ಬೇಕು ಎನ್ನುವುದು ಈಗ ದೊಡ್ಡ ಸವಾಲಾಗಿದೆ. ಇದರ ಬಗ್ಗೆ ಬೆಳಕು ಚೆಲ್ಲುವ ಲೇಖನಗಳು ಬಾಪು ಪ್ರಪಂಚದಲ್ಲಿ ಬರಲಿ . ಮುಂದಿನ ಪೀಳಿಗೆಗೆ ಗಾಂಧಿಯನ್ನು ತಲುಪಿಸುವ ಗುರುತರ ಜವಾಬ್ದಾರಿ ಗಾಂಧಿ ಪ್ರಣೀತ ಸಂಘ ಸಂಸ್ಥೆಗಳ ಮೇಲಿದೆ . ಗಾಂಧಿ ಸ್ಮಾರಕ ನಿಧಿ ಈ ಜವಾಬ್ದಾರಿ ನಿರ್ವಹಿಸಲಿ.


ಮಾಲಿನಿ, ಮೈಸೂರು

* * *

ಮಾನ್ಯರೆ,

ಗಾಂಧಿ ಸ್ಮಾರಕ ನಿಧಿಗೆ 75 ವರ್ಷ ತುಂಬಿರುವ ಈ ಸಂದರ್ಭದಲ್ಲಿ ಅದರ ಸಾರ್ಥಕ ಸೇವೆಯನ್ನು ಸ್ಮರಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳಿಗೆ ಶುಭ ಹಾರೈಸುತ್ತೇವೆ . 21 ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ ಯಶಸ್ವಿಯಾಗಲಿ.

ರವಿಚಂದ್ರ, ಹಾವೇರಿ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.



ಗಾಂಧಿ ಗ್ರಾಮಸ್ವರಾಜ್ ಮತ್ತು ಪ್ರಕೃತಿ ಉಳಿವಿನ ದಾರಿ

- ರೂಪಾ ಹಾಸನ

ಗಾಂಧೀಜಿ ಗ್ರಾಮಸ್ವರಾಜ್ಯದ ಕನಸು ಕಂಡಾಗ ಭಾರತ, ಸುಮಾರು ಶೇಕಡಾ 80ರಷ್ಟು ಹಳ್ಳಿಗಳ ನಾಡಾಗಿತ್ತು. ಈಗಲೂ ಶೇಕಡಾ 60ರ ಆಸುಪಾಸಿನಷ್ಟು ನಮ್ಮದು ಹಳ್ಳಿಗಳ ನಾಡೆ. ದಿನದಿನಕ್ಕೂ ಈ ಪ್ರಮಾಣ ಕ್ಷೀಣಿಸುತ್ತಿರಬಹುದು. ಆದರೆ ಭಾರತ ಹಳ್ಳಿಗಳ ನಾಡೆಂಬುದು ಈ ದೇಶದ ವಾಸ್ತವ. ಅಭಿವೃದ್ಧಿಯ ಹೆಸರಲ್ಲಿ, ಹೆಚ್ಚೆಚ್ಚು ನಗರ ಕೇಂದ್ರಿತವಾದ ವ್ಯವಸ್ಥೆಯನ್ನು ನಾವು ರೂಪುಗೊಳಿಸುತ್ತಿದ್ದೇವೆ. ಇದು ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೋ ಎಂದು ಗಾಬರಿಯಾಗುತ್ತಿದೆ. ಏಕೆಂದರೆ ನಗರಗಳು ಜನಸಂದಣಿಯ ಹೆಚ್ಚಳದಿಂದಾಗಿ ಉಸಿರುಕಟ್ಟುತ್ತಿವೆ. ಇಲ್ಲಿಯೂ ಜನರಿಗೆ ಸಮರ್ಪಕ ನಾಗರಿಕ ವ್ಯವಸ್ಥೆಯನ್ನು ರೂಪಿಸುವುದು ಅತ್ಯಂತ ಕಷ್ಟದ ಕೆಲಸವೇ. ಜೊತೆಗೆ ನಗರಗಳಲ್ಲಿ ಬೃಹತ್ ಕಟ್ಟಡಗಳ ಪಕ್ಕದಲ್ಲೇ ಬೃಹದಾಕಾರವಾಗಿ ಬೆಳೆಯುತ್ತಿರುವ ಕೊಳಚೆಪ್ರದೇಶಗಳು[ಸ್ಲಮ್] ಏನನ್ನು ಸೂಚಿಸುತ್ತಿವೆ? ತಿರಸ್ಕೃತ ಹಳ್ಳಿಯ ಪ್ರತಿರೂಪವನ್ನೇ ಅಲ್ಲವೇ? ವೇದನೆಯಾಗುತ್ತದೆ. ನಗರಕ್ಕೆ ನಿತ್ಯ ಉದ್ಯೋಗ ಹುಡುಕಿ ಬರುತ್ತಿರುವ ಜನರು ನಿರಾಶ್ರಿತರೂ, ಪರಿತ್ಯಕ್ತರೂ ಆಗಿ ಭವ್ಯ ಭಾರತದ ಕಹಿ ಸತ್ಯವಾಗಿ ಇಲ್ಲಿ ವಾಸಿಸುತ್ತಿದ್ದಾರೆ. ಇವರ ಸ್ಥಿತಿಯಂತೂ ಯಾತನಾದಾಯಕ. ಹೀಗೆಂದೇ ಇಂದು ಗಾಂಧೀಜಿಯ ಗ್ರಾಮ ಸ್ವಾವಲಂಬನೆಯ ಚಿಂತನೆ ಮತ್ತೆ ಮತ್ತೆ ನೆನಪಾಗುತ್ತದೆ. ಭಾರತ ಸ್ವಾತಂತ್ರ್ಯದ ಈ 75 ವರ್ಷಗಳಲ್ಲಿ ನಮ್ಮ ಜನನಾಯಕರು ಇಚ್ಛಾಶಕ್ತಿ ತೋರಿಸಿದ್ದರೆ, ಗಾಂಧೀಜಿಯ ಗ್ರಾಮಸ್ವರಾಜ್ ಕನಸು ಸ್ವಲ್ಪವಾದರೂ ನನಸಾಗಿ, ಹಳ್ಳಿಗಳು ನಳನಳಿಸುತ್ತಿದ್ದವು. ಆದರೆ ಈಗ ಹಿಂದಿರುಗಿ ನೋಡಿ ಆತ್ಮಾವಲೋಕನ ಮಾಡಿಕೊಂಡರೆ, ಗಾಂಧೀಜಿಯ ಗ್ರಾಮ ಭಾರತದ ಕನಸಿನ ಪಥದಲ್ಲಿ ನಾವು ಹಿಮ್ಮುಖ ಚಲನೆಯಲ್ಲಿದ್ದೇವೇನೋ ಎನ್ನಿಸುತ್ತದೆ.

ಭಾರತ ಹಳ್ಳಿಗಳ ನಾಡೆಂಬುದು ವಾಸ್ತವ ಎಂಬಂತೆಯೇ, ಜಾತಿ ವ್ಯವಸ್ಥೆ ಮತ್ತದರ ಅಪಸವ್ಯಗಳು ಕೂಡ ನಮ್ಮ ಗ್ರಾಮಗಳ ಕಟು ವಾಸ್ತವ! ಹೀಗೆಂದೇ ಸಮಾನತೆಯ ಪ್ರತಿಪಾದಕರಾದ ಡಾ.ಬಿ.ಆರ್.ಅಂಬೇಡ್ಕರ್ ಹಳ್ಳಿಗಳನ್ನು ತಿರಸ್ಕರಿಸುತ್ತಾರೆ. ಆದರೆ ಗಾಂಧಿ– ಒಂದು ಹಳ್ಳಿಯ ಜನರು ಪರಸ್ಪರ ಪ್ರೀತಿ ಮತ್ತು ಸಹಕಾರದಿಂದ ಹೊಂದಾಣಿಕೆ ಮಾಡಿಕೊಳ್ಳುವಂತಹ ಆಡಳಿತ ವ್ಯವಸ್ಥೆಯೂ ಇಲ್ಲಿರಬೇಕೆಂದು ಕೂಡ ಆಶಿಸಿದ್ದರು. ಹೀಗೆಂದೇ ಎಲ್ಲ ಜಾತಿಯ ಜನರನ್ನೂ ಕೂಡಿಸುವ ಎಳೆಯಾಗಿ ಕೂಡ ಗ್ರಾಮಸ್ವರಾಜ್ಯವನ್ನು ಅತ್ಯಂತ ಸೂಕ್ಷ್ಮ ಮತ್ತು ಸಂವೇದನಾಶೀಲವಾಗಿ ಮರುರೂಪಿಸಬೇಕಿದೆ. ಗಾಂಧೀಜಿಯ ದೃಷ್ಟಿಯಲ್ಲಿ ಹಳ್ಳಿಗಳು ಆಡಳಿತದ ಪ್ರಾಥಮಿಕ ಘಟಕಗಳಾಗಬೇಕಿತ್ತು. ತನ್ಮೂಲಕ ಕೆಳಗಿನಿಂದ ಮೇಲಿನವರೆಗಿನ ಅಧಿಕಾರವನ್ನು ನಿಯಂತ್ರಿಸುವುದು ಮತ್ತು ನಿರ್ವಹಿಸುವುದು ಗ್ರಾಮಸ್ವರಾಜ್ಯದ ಉದ್ದೇಶ ಆಗಿತ್ತು. ಎಲ್ಲಕ್ಕಿಂತಾ ಮುಖ್ಯವಾಗಿ ಪ್ರತಿ ಗ್ರಾಮದ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಹೀನಾಯ ಸ್ಥಿತಿಯಲ್ಲಿರುವವರ ಉದ್ಧಾರಕ್ಕೆ, ಅವರ ಮಾತಲ್ಲೇ ಹೇಳುವುದಾದರೆ 'ಅಂತ್ಯೋದಯ'ಕ್ಕೆ ಮೊದಲ ಆದ್ಯತೆ. ಅಂದರೆ ಸಾಮಾಜಿಕ ಹಾಗೂ ಆರ್ಥಿಕವಾಗಿ ಕೊನೆಯ



ಹಂತದಲ್ಲಿರುವವರನ್ನು ಕೇಂದ್ರೀಕರಿಸಿಯೇ ಗ್ರಾಮಸ್ವರಾಜ್ ರೂಪುಗೊಳ್ಳಬೇಕು! ಇದು ಸಾಕಾರವಾದರೆ ಬಹುಶಃ ಅಂಬೇಡ್ಕರ್ ಅವರಿಗೆ ಹಳ್ಳಿಗಳ ಬಗ್ಗೆ ತಕರಾರು ಇರಲಾರದೇನೋ?

ಭಾರತದಲ್ಲಿ ಕೈಗಳು ಅಪಾರ ಪ್ರಮಾಣದಲ್ಲಿದೆ. ಹೀಗಾಗಿ ವ್ಯಾಪಕ ಯಾಂತ್ರೀಕರಣ, ದೇಶಕ್ಕೆ ಒಂದು ಅನಿಷ್ಠ ಎಂದವರು ಬಗೆದಿದ್ದರು. ಜೊತೆಗೆ ಮಾನವ ಸಂಬಂಧಗಳಲ್ಲಿನ ಆಪ್ತತೆಯನ್ನು ಯಂತ್ರಗಳು ನಾಶ ಮಾಡುತ್ತದೆಂಬುದೂ ಅವರ ನಂಬಿಕೆ. ಆದ್ದರಿಂದ ಹಳ್ಳಿಗರಿಗೆ ಪರಂಪರಾಗತವಾಗಿ ನಡೆಸಿಕೊಂಡು ಬಂದ ಗುಡಿಕೈಗಾರಿಕೆಗಳ ಮೂಲಕ ಕೆಲಸ ಸೃಷ್ಟಿಸಬೇಕೆಂದವರು ಬಲವಾಗಿ ನಂಬಿದ್ದರು. ಸ್ಥಳೀಯ ಕೃಷಿ ಸಂಪನ್ಮೂಲಗಳ ಬಳಕೆ ಇದ್ದಲ್ಲೇ ಆಗಿ, ವ್ಯಾಪಾರ ವಹಿವಾಟು ಬೃಹದಾಕಾರವಾಗಿ ಬೆಳೆಯದೇ, ಪ್ರಾಕೃತಿಕ ಸಂಪನ್ಮೂಲಗಳ ಅಲ್ಪ ಪ್ರಮಾಣದ ಬಳಕೆಯಿಂದ ಮಿತಿಯಲ್ಲೇ ಆಗಬೇಕೆಂದು ಬಯಸಿದ್ದರು. 'ಇದಾಗದೇ ಹೋದರೆ ಹಳ್ಳಿಗಳು ನಾಶವಾಗುತ್ತದೆ. ಆ ಮೂಲಕ ಭಾರತದ ಆತ್ಮ ನಾಶವಾಗುತ್ತದೆ. ಆಗ ಭಾರತ ತನ್ನ ನಿಜ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ದೊಡ್ಡ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಯಾದಾಗ ಪೈಪೋಟಿ ಮತ್ತು ಲಾಭ ಮುಖ್ಯವಾಗಿ, ಗ್ರಾಮೀಣರ ಪ್ರತ್ಯಕ್ಷ ಅಥವಾ ಪರೋಕ್ಷ ಶೋಷಣೆ ನಡೆಯುತ್ತದೆ. ಆದ್ದರಿಂದ ಹಳ್ಳಿಗಳು ತನ್ನಷ್ಟಕ್ಕೇ ಸ್ವಯಂ ಪರಿಪೂರ್ಣವಾಗುವಂತೆ, ತನ್ನ ಉಪಯೋಗಕ್ಕಾಗಿ ಮಾತ್ರ ಪದಾರ್ಥಗಳನ್ನು ತಯಾರಿಸಿಕೊಳ್ಳುವಂತೆ, ಹೆಚ್ಚಾದ ಕೆಲ ಅಂಶವನ್ನು ಮಾತ್ರ ಮಾರಾಟಕ್ಕಾಗಿ ಬಳಸಲು ಗಮನ ಹರಿಸಬೇಕು' ಎಂದವರು ದೂರದೃಷ್ಟಿಯಿಂದ ಪ್ರತಿಪಾದಿಸಿದ್ದರು.

ಆ ಕಾಲಕ್ಕೇ ಗಾಂಧೀಜಿ, ಭಾರತದಲ್ಲಿ ನಗರಗಳ ಪ್ರಭಾವ ಹೆಚ್ಚುತ್ತಿರುವುದನ್ನು ಆತಂಕದಿಂದ ಕಂಡಿದ್ದರು. 'ನಗರಗಳು ಹಳ್ಳಿಗಳ ರಸವನ್ನು ಹೀರುತ್ತಾ, ಅವುಗಳನ್ನು ನಿಃಸತ್ವಗೊಳಿಸುತ್ತವೆ. ಹಳ್ಳಿಗಳ ಶೋಷಣೆಯೂ ಕೂಡ ವ್ಯವಸ್ಥಿತವಾದಂತಹಾ ಹಿಂಸೆಯೇ. ಅಹಿಂಸೆಯ ಆಧಾರದ ಮೇಲೆ ನಾವು ಸ್ವರಾಜ್ಯವನ್ನು ಕಟ್ಟಬೇಕಾಗಿದ್ದರೆ ಹಳ್ಳಿಗಳಿಗೆ ತಕ್ಕ ಸ್ಥಾನವನ್ನ ಕೊಡಲೇಬೇಕು' ಎನ್ನುತ್ತಿದ್ದರು. ಇಂದು ನಗರಗಳನ್ನು ಅಭಿವೃದ್ಧಿಯ ಹೆಸರಲ್ಲಿ 'ಸಿಂಗಾಪುರ' ಮಾಡುವ ಭರದಲ್ಲಿ, ಹಳ್ಳಿಗಳನ್ನು, ನಗರವಾಸಿಗಳು ಉತ್ಪಾದಿಸುವ ಕಸಕ್ಕೆ 'ಡಸ್ಟ್‌ಬಿನ್' ಮಾಡುತ್ತಿರುವ ಕಾಲಘಟ್ಟದಲ್ಲಿ, ಹೆಚ್ಚಿನ ಹಳ್ಳಿಗಳು ಸಮರ್ಪಕವಾದ ಮೂಲಸೌಕರ್ಯವೂ ಇಲ್ಲದೇ ತತ್ತರಿಸಿರುವ ಈ ಸನ್ನಿವೇಶದಲ್ಲಿ... ಈ ಕುರಿತು ನಾವು ಇನ್ನೂ ಹೆಚ್ಚು ತೀವ್ರವಾಗಿ ಯೋಚಿಸಬೇಕಿದೆಯೆನಿಸುತ್ತದೆ. 'ಹಳ್ಳಿಗಳ ಸಾಮುದಾಯಿಕ ಬಾವಿಗಳು, ಕೆರೆ, ಕಟ್ಟೆ, ದೇವಾಲಯ, ಸಂತೆ, ಗೋಮಾಳ, ಸಹಕಾರಿ ತತ್ವದಲ್ಲಿ ಪದಾರ್ಥಗಳ ಕೊಡು ಕೊಳುವಿಕೆ, ಶಾಲೆ... ಈ ಎಲ್ಲವೂ ಜಾತಿ/ಧರ್ಮ/ಲಿಂಗದ ಭೇದವಾಗಲೀ, ತಾರತಮ್ಯವಾಗಲೀ ಇಲ್ಲದೇ ಎಲ್ಲರನ್ನೂ ಒಳಗೊಳ್ಳುವಂತಾಗಬೇಕು' ಎನ್ನುವುದವರ ಮಹತ್ತರ ಆಶಯ.

ಗಾಂಧಿ ಹಾಗೂ ಅಂಬೇಡ್ಕರ್ ಇಬ್ಬರ ಚಿಂತನೆಯ ಸಾರದ ಆಧಾರದಲ್ಲಿ, ಮೀಸಲಾತಿಯನ್ನೂ ಅಳವಡಿಸಿಕೊಂಡು, ಆಧುನಿಕ ಸಮಾಜದ ಅವಶ್ಯಕತೆಗಳ ಅನುಸಾರವಾಗಿ, ಎಲ್.ಎಂ.ಸಿಂಘ್ವಿ ಸಮಿತಿಯು 1986ರಲ್ಲಿ ನೀಡಿದ ವರದಿಯನ್ನು ಆಧರಿಸಿ ಸಂವಿಧಾನಕ್ಕೆ 73ನೇ ತಿದ್ದುಪಡಿಯನ್ನು ತರುವ ಮೂಲಕ 1992ರಲ್ಲಿ ದೇಶದೆಲ್ಲೆಡೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಧಿಕೃತವಾಗಿ ಜಾರಿಗೆ ತರಲಾಯ್ತು. ಶಿಕ್ಷಣ, ನೈರ್ಮಲ್ಯ, ಆರೋಗ್ಯದ ಅವಶ್ಯಕತೆ, ಕೆರೆ ಕಟ್ಟೆಗಳ ಶುಚಿತ್ವ ಮತ್ತು ದೇಖರೇಕಿ ಮತ್ತು ದಮನಿತ ಜನರ ಉದ್ಧಾರಕ್ಕಾಗಿ ನಿತ್ಯ ಶ್ರಮ ಇವು ಪಂಚಾಯತ್ ರಾಜ್‌ನ ಮೂಲತತ್ವವಾಗಿತ್ತು. ಆ ಮೂಲಕ ನಿಧಾನವಾಗಿಯಾದರೂ ಗ್ರಾಮಗಳಲ್ಲಿ ಮೇಲ್ಮಟ್ಟದ ಗುರುತರ ಬದಲಾವಣೆಗಳಾದುದನ್ನು ತಳ್ಳಿ ಹಾಕುವಂತಿಲ್ಲ. ಮೂಲಸೌಕರ್ಯದ ಹೆಸರಿನಲ್ಲಿ ಆರೋಗ್ಯ, ಶಿಕ್ಷಣ, ನೀರು, ವಿದ್ಯುತ್, ಚರಂಡಿ ವ್ಯವಸ್ಥೆ, ರಸ್ತೆ/ಬಸ್ ಸಂಪರ್ಕ, ವೈಯಕ್ತಿಕ ಶೌಚಾಲಯ, ಅಂಚಿಗೊತ್ತರಿಸಲ್ಪಟ್ಟವರ ಉದ್ಧಾರದ ಹೆಸರಲ್ಲಿ ನೂರಾರು ಯೋಜನೆಗಳಿಗಾಗಿ ಕೋಟಿಗಟ್ಟಲೆ ಹಣ– ಹಳ್ಳಿಗಳಿಗಾಗಿ ವ್ಯಯವಾಗಿದೆ. ಆಗುತ್ತಿದೆ. ಆದರೆ ನಗರಗಳಿಗೆ ಹೋಲಿಸಿದರೆ ಬಹುಶಃ ನಮ್ಮ ಹಳ್ಳಿಗಳು ಅಭಿವೃದ್ಧಿಯಿಂದ ಒಂದು ಶತಮಾನದಷ್ಟು ಹಿಂದೆ ಬಿದ್ದಿವೆ! ಒಂದು ಉದಾಹರಣೆಯನ್ನು ನೋಡುವುದಾದರೆ, 4–5 ವರ್ಷಗಳ ಹಿಂದೆಯೇ ಅಕ್ಟೋಬರ್ ಎರಡರ ಗಾಂಧಿ ಜಯಂತಿಯಂದು ನಮ್ಮ ಪ್ರಧಾನಿಗಳಾದ

ಮೋದಿಯವರು ಇಡೀ ದೇಶವನ್ನು ಬಯಲುಶೌಚ ಮುಕ್ತ ದೇಶವೆಂದು ಘೋಷಿಸಿದರು. ಆದರೆ ವರದಿಗಳಲ್ಲಿ ದಾಖಲಾದಂತೆ, ವಾಸ್ತವದಲ್ಲಿ ಕಾಣುತ್ತಿರುವಂತೆ, ಈ ಇಪ್ಪತ್ತೊಂದನೆಯ ಶತಮಾನದ ರಾಕೆಟ್ ಯುಗದಲ್ಲೂ, ಇಂದಿಗೂ ಗ್ರಾಮೀಣ ಪ್ರದೇಶದ ಶೇಕಡಾ 35ರಷ್ಟು ಮನೆಗಳಲ್ಲಿನ್ನೂ ಶೌಚಾಲಯ ವ್ಯವಸ್ಥೆ ಇಲ್ಲದೇ ಬಯಲನ್ನೇ ಅವಲಂಬಿಸಿದ್ದಾರೆ ಎಂದರೆ, ಅದಿನ್ನೆಂತಹ ನಾಚಿಕೆಗೇಡಿನ, ಅನಾಗರಿಕ ಗ್ರಾಮ ಜಗತ್ತಿನಲ್ಲಿ ನಾವಿದ್ದೇವೆ ಎಂದು ಖೇದವಾಗುತ್ತದೆ.

ಗ್ರಾಮೀಣ ಭಾರತವನ್ನು ಉದ್ದೇಶಿಸಿ ವಿವರಿಸಿಕೊಳ್ಳುವಾಗ ಕೃಷಿ ಕೇಂದ್ರಿತವಾದ ನಮ್ಮ ರೈತ ಭಾರತಕ್ಕೇ ಮೊದಲ ಆದ್ಯತೆ. ಅನಾದಿಯಿಂದ ರೈತ, ತನ್ನ ಬೇಸಾಯ ಬದುಕಿಗೆ ಸ್ವಯಂಭುವಾಗಿದ್ದ. ಬೀಜ, ನೀರು, ಗೊಬ್ಬರ, ಬೆಳೆದ ಉತ್ಪನ್ನಗಳ ಮಾರಾಟ ಎಲ್ಲವೂ ರೈತನ ಹಿಡಿತದಲ್ಲಿತ್ತು. ಪ್ರಾಕೃತಿಕ ಸಂಪತ್ತು ಹಾಗೂ ದೇಶದ ಆರ್ಥಿಕತೆಗಳೆರಡೂ ಪೂರಕವಾಗಿ ಚಲಿಸುತ್ತಿತ್ತು. ಮುಖ್ಯವಾಗಿ ದಾಹವಿರಲಿಲ್ಲ! ಇವೆಲ್ಲವೂ ಗಾಂಧೀಜಿಯ ಆಶಯಕ್ಕೆ ಹತ್ತಿರದ ವಾಸ್ತವಗಳು. ಆದರೆ ನಿಧಾನಕ್ಕೆ ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು ಭಾರತವನ್ನು ಪ್ರವೇಶಿಸಿದಂತೆ, ಲಾಭ ಕೇಂದ್ರಿತವಾದ ಅನೈಸರ್ಗಿಕ/ಅವೈಜ್ಞಾನಿಕ ಬೇಸಾಯ ಪದ್ಧತಿ, ಸರ್ಕಾರಗಳ ಕೃಷಿ ವಿರೋಧಿ ನೀತಿಗಳು, ಅಂತರಾಷ್ಟ್ರೀಯ ಮಟ್ಟದ ಕೃಷಿ ಒಪ್ಪಂದಗಳು, ವ್ಯಾಪಕ ಪ್ರಕೃತಿ ನಾಶದಿಂದಾದ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಂದಾಗಿ ಕಳೆದ 3–4 ದಶಕಗಳಿಂದ ಕೃಷಿ ಕ್ಷೇತ್ರದ ಮೇಲೆ ಅಗಾಧವಾದ ಪರಿಣಾಮಗಳಾಗುತ್ತಿವೆ. ಅದುವರೆಗೆ ಸ್ಥಳೀಯ ಮಟ್ಟದಲ್ಲಿದ್ದ ಕೃಷಿ, ಜಾಗತಿಕ ಮಟ್ಟವನ್ನು ಸೇರಿ ಪರಿಸರ ಮತ್ತು ಆರ್ಥಿಕತೆ ಎರಡೂ ವಿರುದ್ಧ ದಿಕ್ಕಿನಲ್ಲಿ ಚಲಿಸಲಾರಂಭಿಸಿಬಿಟ್ಟಿವೆ! ಆರ್ಥಿಕವಾಗಿ ಅಭಿವೃದ್ಧಿಹೊಂದುವ ಭರದಲ್ಲಿ ನೈಸರ್ಗಿಕ ಸಂಪತ್ತನ್ನು ಎಗ್ಗಿಲ್ಲದಂತೆ ಬಳಸುತ್ತಾ ಹೋದಂತೆಲ್ಲಾ ಭೂಮಿ, ಅವನತಿಯ ಹಾದಿಯನ್ನು ಹಿಡಿಯುತ್ತಿದೆ! ಎಲ್ಲ ಮಾಲಿನ್ಯವೂ ಮುಗಿಲಿನೆತ್ತರಕ್ಕೆ ಏರಿಬಿಟ್ಟಿವೆ. ಬರ ಮತ್ತು ಪ್ರವಾಹಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ, ಎಗ್ಗಿಲ್ಲದೇ ಕೊರೆದ ಕೊಳವೆ ಬಾವಿಗಳಿಂದಾಗಿ ಅಂತರ್ಜಲ ಮಟ್ಟ ಕುಸಿದು ಹೋಗಿ ಗ್ರಾಮಗಳು ತೀವ್ರ ನೀರಿನ ಕೊರತೆಯನ್ನು ಎದುರಿಸುವಂತಾಗಿವೆ. ಕುಡಿಯಲೇ ನೀರಿಲ್ಲದ ಸ್ಥಿತಿಯೂ ಅನೇಕ ಹಳ್ಳಿಗಳಲ್ಲಿರುವಾಗ ಇನ್ನು ಕೃಷಿಗೆಲ್ಲಿಂದ ನೀರು ತರುವುದು? ಜೊತೆಗೆ ಕೃಷಿಗೆ ಬಳಕೆ ಮಾಡುವ ನೀರಿಗೆ ಯಾವುದೇ ಲೆಕ್ಕಾಚಾರವಾಗಲೀ, ಮಾನದಂಡವಾಗಲಿ ಇಲ್ಲ! ಒಂದೆಡೆ ವಿಪರೀತ ದುಂದು, ಇನ್ನೊಂದೆಡೆ ಹನಿ ನೀರೂ ಇಲ್ಲ. ಇದೆಲ್ಲದರಿಂದ ರೈತ ಬದುಕಲಾರದ ಸ್ಥಿತಿಗೆ ತಲುಪಿ, ಅನಿವಾರ್ಯವಾಗಿ ಸಾಲ ಮಾಡಬೇಕಾಗಿದೆ. ಅದನ್ನು ತೀರಿಸಲಾಗದಂತಹ ಪರಿಸ್ಥಿತಿ ಎದುರಾದಾಗ, ಆತ್ಮಹತ್ಯೆಯ ಹಾದಿಯನ್ನೂ ತುಳಿಯುತ್ತಿದ್ದಾನೆ. ಜೊತೆಗೆ ಇದು ಕುಟುಂಬದ ಆರೋಗ್ಯ, ಆರ್ಥಿಕತೆ, ಸಾಮಾಜಿಕತೆ... ಹೀಗೆ ಎಲ್ಲದರ ಮೇಲೂ ಪರಿಣಾಮ ಬೀರುತ್ತಿದೆ. ಗ್ರಾಮೀಣ ಯುವಜನರಿಗೆ ಈಗ ಮಾಡಲು ಗ್ರಾಮಗಳಲ್ಲಿ ಉದ್ಯೋಗವಿಲ್ಲ! ಹೀಗಾಗಿ ನಗರಕ್ಕೆ ವಲಸೆ ಹೋಗುವುದು ಅನಿವಾರ್ಯವಾಗುತ್ತಿದೆ.



'ಪ್ರಕೃತಿ ಮನುಷ್ಯನ ಅವಶ್ಯಕತೆಗಳನ್ನು ಪೂರೈಸಬಲ್ಲದು ಆದರೆ ದುರಾಸೆಯನ್ನಲ್ಲ' ಎನ್ನುವ ಗಾಂಧೀಜಿಯ ವಿವೇಕದ ಮಾತುಗಳನ್ನು ನಿರ್ಲಕ್ಷಿಸಿ, 'ಅಭಿವೃದ್ಧಿ' ಹೆಸರಿನಲ್ಲಿ ಭೂಮಿ, ಅರಣ್ಯ, ನದಿ, ಖನಿಜ, ಮರಳು, ಅಂತರ್ಜಲ... ಎಲ್ಲವನ್ನೂ ಮಾರುಕಟ್ಟೆಯ ಸರಕಾಗಿ ಪರಿವರ್ತಿಸಿ, ಪ್ರಾಕೃತಿಕ ಸಂಪತ್ತನ್ನೆಲ್ಲಾ ಎಗ್ಗಿಲ್ಲದೇ ಲೂಟಿ ಹೊಡೆದಿದ್ದರಿಂದಲೇ ಇಂದು, ಭೂಮಿ ವಿನಾಶದ ದಾರಿಯಲ್ಲಿ ಸಾಗುತ್ತಿದೆ. ಸರ್ಕಾರಗಳು ಬಂಡವಾಳಶಾಹಿಗೆ ಹಸಿರು ನಿಶಾನೆ ತೋರಿ, ಎಲ್ಲ ಅಕ್ರಮಗಳಿಗೆ ಎಗ್ಗಿಲ್ಲದೇ ಪರವಾನಗಿ ನೀಡುತ್ತಿವೆ. ಇದೆಲ್ಲದರಿಂದ ಒಂದೆಡೆ ದೇಶದ ಆರ್ಥಿಕ ಅಭಿವೃದ್ಧಿ ದರ ಏರುತ್ತಿದೆ. ಆದರೆ ಅದೇ ಹೊತ್ತಿನಲ್ಲಿ ಪ್ರಕೃತಿ ಸಂಪತ್ತು ನಿಧಾನಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. ಅನೈಸರ್ಗಿಕ ಮೂರ್ಖ ಯೋಜನೆಗಳ ಹೊಡೆತಕ್ಕೆ ಸಿಕ್ಕಿ ಪ್ರತಿ ದಿನ ಕಾಡು ಒತ್ತುವರಿಯಾಗುತ್ತಿದೆ ಮತ್ತು ನಾಶವಾಗುತ್ತಿದೆ. ಒಂದೆಡೆ ನಮ್ಮ ದೇಶದ ಹೆಚ್ಚಿನ ಕೃಷಿಭೂಮಿ ನಿಧಾನಕ್ಕೆ ಬಂಡವಾಳಶಾಹಿಗಳ ಪಾಲಾಗುತ್ತಿದೆ. ಇನ್ನೊಂದೆಡೆ ಮಿತಿ ಮೀರಿದ ರಾಸಾಯನಿಕ, ರಸಗೊಬ್ಬರ, ಕ್ರಿಮಿನಾಶಕ, ಶಿಲೀಂಧ್ರನಾಶಕಗಳ ಬಳಕೆಯಿಂದ, ಬರ, ಪ್ರವಾಹಗಳ ಸಂಕಷ್ಟದಿಂದ, ಭೂಮಿ ತನ್ನ ಫಲವಂತಿಕೆಯನ್ನು ಕಳೆದುಕೊಳ್ಳುತ್ತಿದೆ. ಹಾಗೂ ವ್ಯಾಪಕ ಕೈಗಾರೀಕರಣದಿಂದಾಗಿ ಕೃಷಿ ಭೂಮಿಯ ಪ್ರಮಾಣ ಕೂಡ ತಗ್ಗುತ್ತಿದೆ. ಜೊತೆಗೆ ನಿರಾಶ್ರಿತವಾಗಿ ನಾಡಿಗೆ ನುಗ್ಗುತ್ತಿರುವ ಕಾಡುಪ್ರಾಣಿಗಳ ನಿರಂತರ ದಾಳಿ ಬೇರೆ. ಹೀಗಾಗಿ ಪರ್ಯಾಯ ಬದುಕಿನ ಸ್ವಯಂ ಉದ್ಯೋಗದ ದಾರಿಗಳಿಲ್ಲದೇ, ಗುಡಿಕೈಗಾರಿಕೆಗಳಿಲ್ಲದೇ, ಗ್ರಾಮೀಣ ಬದುಕು ಇಂದು ವಿನಾಶದ ಹಾದಿಯನ್ನು ತಲುಪಿದೆ.

ಇಷ್ಟೆಲ್ಲದರ ಮಧ್ಯೆ ಕೂಡ, ಬೃಹತ್ ಕಾಡಿಗೇ ಬೆಂಕಿ ಬಿದ್ದಾಗ ಗುಬ್ಬಚ್ಚಿ ತನ್ನ ಪುಟ್ಟ ಕೊಕ್ಕಿನಲ್ಲಿ ಹನಿ ಹನಿ ನೀರು ತಂದು ಬೆಂಕಿಯನ್ನು ನಂದಿಸುವ ಪ್ರಯತ್ನವನ್ನು

ಮಾಡುವ ರೀತಿಯಲ್ಲಿ, ಗಾಂಧೀಜಿಯ ಗ್ರಾಮಸ್ವರಾಜ್ ಆಶಯದ ದಾರಿಯಲ್ಲಿ ದೇಶದಲ್ಲಿ ಹಲವಾರು ರಚನಾತ್ಮಕ ಪ್ರಯೋಗಗಳು ಅಲ್ಲಿಲ್ಲಿ ಆಗಿವೆ. ಬಹಳಷ್ಟು ಪ್ರಯೋಗಗಳು, ವೈಯಕ್ತಿಕ ನೆಲೆಯಲ್ಲಿ ಮತ್ತು ಸಾಂಸ್ಥಿಕವಾಗಿ ಸಣ್ಣ ಪ್ರಮಾಣದಲ್ಲಿ ಆಗಿವೆ. ಕೆಲವು ಪ್ರಯೋಗಗಳು ಮಾತ್ರ, ಸಮುದಾಯವನ್ನು ಒಳಗೊಂಡು ಆಂದೋಲನದ ರೂಪದಲ್ಲಿ ವ್ಯಾಪಕವಾಗುವ ಪ್ರಯತ್ನಗಳಾಗಿವೆ. ಅದರಲ್ಲಿ ನನ್ನ ಗಮನಕ್ಕೆ ಬಂದಂತೆ, ಕರ್ನಾಟಕದಲ್ಲಿ ಒಂದು ಬಹು ಮುಖ್ಯವಾದ ಸಾಮುದಾಯಿಕ ನೆಲೆಯ ರಚನಾತ್ಮಕ ಪ್ರಯತ್ನವಾಗಿದೆ. ಸಾಮಾಜಿಕ ಹೋರಾಟಗಾರರಾದ ಎಸ್.ಆರ್.ಹಿರೇಮಠ ಮತ್ತು ಶ್ಯಾಮಲಾ ದಂಪತಿಗಳು ಅಮೇರಿಕಾದಿಂದ ತಮ್ಮ ಕೆಲಸವನ್ನು ಬಿಟ್ಟು ವಾಪಸ್ ಭಾರತಕ್ಕೆ ಬಂದು 80ರ ದಶಕದಲ್ಲಿ ರಾಣಿಬೆನ್ನೂರು ತಾಲ್ಲೂಕಿನ ಮೆಡ್ಲೇರಿ ಗ್ರಾಮದಲ್ಲಿ ನೆಲೆ ನಿಂತು, ಗಾಂಧೀಜಿಯ ಗ್ರಾಮಸ್ವರಾಜ್ ಪರಿಕಲ್ಪನೆಯನ್ನು ಮುಂದಿಟ್ಟುಕೊಂಡು ಇಂಡಿಯಾ ಡೆವಲಪ್‌ಮೆಂಟ್ ಸರ್ವೀಸ್ ಸಂಸ್ಥೆಯ ಮೂಲಕ ತಮ್ಮ ಮಿತ್ರ ಬಳಗದೊಂದಿಗೆ ಮಾಡಿದ ಪ್ರಯತ್ನ, ದೇಶಕ್ಕೇ ಮಾದರಿ ಎಂದು ಪ್ರಶಂಸೆಗೆ ಒಳಗಾಗಿದೆ. ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದ ಮೆಡ್ಲೇರಿ ಸುತ್ತಮುತ್ತಲ ನೂರಾರು ಗ್ರಾಮಗಳಲ್ಲಿ ಪರಿಸರ ಕೇಂದ್ರಿತವಾಗಿ ಮಾಡಿದ ವ್ಯಾಪಕ ಗ್ರಾಮೀಣಾಭಿವೃದ್ಧಿ ಕಾರ್ಯಗಳು, ಹೋರಾಟಗಳು ಹಳ್ಳಿಗಳಲ್ಲಿ ಬದಲಾವಣೆಯನ್ನು ತಂದು, ಮಾದರಿಯಾಗಿ ನಿಂತಿವೆ. ಗ್ರಾಮದ ಆರ್ಥಿಕವಾಗಿ ಹಿಂದುಳಿದ ಜನರು ಮತ್ತು ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿ ಅನೇಕ ಪ್ರಯೋಗಗಳನ್ನು ಮಾಡಲಾಗಿದೆ. ಜನರಿಗೆ ಆರೋಗ್ಯ ಮತ್ತು ಶಿಕ್ಷಣವನ್ನು ಕೊಟ್ಟು ಜನರ ಸ್ಥಿತಿಗತಿ ಸುಧಾರಿಸುವ ಜೊತೆಗೆ, ಸ್ಥಳೀಯ ಗುಡಿಕೈಗಾರಿಕೆಗಳಾದ ಕುಂಬಾರಿಕೆ, ಮೇದಾರಿಕೆ, ಚಪ್ಪಲಿ ತಯಾರಿಕೆ, ಹೈನುಗಾರಿಕೆ ಮತ್ತು ಕುರಿಸಾಕಾಣಿಕೆಗೆ, ಕೃಷಿಗೆ... ಮೂಲಮಟ್ಟದಲ್ಲಿ ಬೆಂಬಲ ಪ್ರೋತ್ಸಾಹ ನೀಡಿದ್ದರಿಂದ ಇಂದು ಆ ಕಸುಬುಗಳಿಂದಲೇ ಜನ ತಮ್ಮ ಬದುಕು ಕಟ್ಟಿಕೊಂಡಿದ್ದಾರೆ.




ಅಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ಮಾಡಿ, ಅವರಿಂದ ಉಳಿತಾಯ ಮಾಡಿಸಿ, ಅವರ ಆದಾಯ ಹೆಚ್ಚಿಸಲಾಗಿದೆ. ಗ್ರಾಮಪಂಚಾಯಿತಿಗಳು ಇಂದು ಮಾಡುತ್ತಿರುವ ಕೆಲಸಗಳನ್ನು ಆ ಕಾಲಕ್ಕೇ ಜನರಿಗೆ ಸಿಕ್ಕ ಉತ್ಕೃಷ್ಟ ನಾಯಕತ್ವದ ತರಬೇತಿಯಿಂದ, ಅಹಿಂಸಾತ್ಮಕ ಹೋರಾಟಗಳಿಂದ ಹೆಚ್ಚು ಸಶಕ್ತವಾಗಿ ಮತ್ತು ಸಮಗ್ರವಾಗಿ ಮಾಡಿಕೊಳ್ಳಲು ಸಾಧ್ಯವಾಗಿದೆ. ಜನಸಮುದಾಯ ಮತ್ತು ಅರಣ್ಯ ಇಲಾಖೆಯ ಜಂಟಿ ಪರಿಶ್ರಮದ ಮೂಲಕ ಅನೇಕ ಗ್ರಾಮಗಳಲ್ಲಿ ಸ್ಥಾಪಿಸಿದ ಗ್ರಾಮ ಅರಣ್ಯ ಸಮಿತಿಗಳಿಂದ ಆದ ಅರಣ್ಯ ಸಂರಕ್ಷಣೆಯ ಕೆಲಸಗಳು ಉತ್ತಮ ಪ್ರತಿಫಲವನ್ನು ನೀಡಿವೆ. ಮುಖ್ಯವಾಗಿ ಜಾತಿ ತಾರತಮ್ಯ ಮತ್ತು ಅಸಮಾನತೆಯನ್ನು ನೀಗಿಸಲು ತಳಸಮುದಾಯದ ಜನರನ್ನು ಕೇಂದ್ರೀಕರಿಸಿ ಇವರು ಒಳಗೊಂಡಿದ್ದ ಗ್ರಾಮಗಳಲ್ಲಿ ನಡೆದ ಪ್ರಯೋಗಗಳು, ನಮ್ಮ ಇಡೀ ಗ್ರಾಮ ಭಾರತಕ್ಕೆ ಕಣ್ಣು ನೀಡುವಂತವು. ಜನರು ಇಂದು ಹಳ್ಳಿಗಳನ್ನು ತೊರೆದು ನಗರಕ್ಕೆ ವಲಸೆ ಹೋಗುತ್ತಿರುವ ಈ ಸಂದರ್ಭದಲ್ಲಿ, ದಶಕಗಳ ಹಿಂದೆ ಇಲ್ಲಿ ನಡೆದ ಪ್ರಯೋಗಗಳಿಂದಾಗಿ ಜನರು ನಗರಗಳಿಂದ ವಾಪಸ್ ಈ ಹಳ್ಳಿಗಳಿಗೆ ಬಂದು ತಮ್ಮ ಬದುಕನ್ನು ಸಮೃದ್ಧವಾಗಿ ಕಟ್ಟಿಕೊಂಡಿದ್ದಾರೆ! ಇದು ನಿಜಕ್ಕೂ ಅನನ್ಯ ಮತ್ತು ಮಹತ್ವದ ಪ್ರಯೋಗ.

ಗ್ರಾಮಮಟ್ಟದಲ್ಲಿಯೇ ಅಧಿಕಾರವನ್ನು ಪ್ರಶ್ನಿಸುವುದು ಮತ್ತು ಅದನ್ನು ಪಳಗಿಸುವ ಧೈರ್ಯ ಜನರಿಗೆ ಬರಬೇಕು. ಆಗಿರುವ ಕೆಲಸಗಳು, ಆಗದೇ ಉಳಿದಿರುವುದರ ತಾಳೆ ನೋಡಲು 'ಸಾಮಾಜಿಕ ಲೆಕ್ಕಪರಿಶೋಧನೆ' ನಿರಂತರವಾಗಿ ನಡೆಯಬೇಕು. ಇದಾಗದೇ ಗ್ರಾಮಭಾರತಕ್ಕೆ ಉಳಿಗಾಲವಿಲ್ಲ. ಗಾಂಧಿ ನಮ್ಮ ಮುಂದೆ ಒಂದು ಪರಿಪೂರ್ಣ, ಆರೋಗ್ಯಪೂರ್ಣ ಗ್ರಾಮ ಸಮಾಜದ ಬೆಳಕನ್ನಿಟ್ಟು ಅದನ್ನು ಅನುಸರಿಸಲು ದಾರಿ ತೋರಿದ್ದಾರೆ. ಅಂಬೇಡ್ಕರ್ ತಾರತಮ್ಯ ಹಾಗೂ ಅಸ್ಪೃಶ್ಯತೆರಹಿತ ತೀವ್ರ ಆಶಯದೊಂದಿಗೆ ನಮ್ಮ ಹೃದಯದೊಳಗೆ ಸಮಾನತೆಯ ಕನಸಿನ ಬೆಳಕನ್ನಿಟ್ಟು, ದಾರಿಗಳನ್ನು ವಿವೇಕಯುತವಾಗಿ ವಿಶಾಲಗೊಳಿಸಿಕೊಳ್ಳುವ ಕಣ್ಣುಗಳನ್ನು ನೀಡಿದ್ದಾರೆ. ಇವರಿಬ್ಬರ ಚಿಂತನೆಗಳ ಬಿತ್ತನೆಗಳನ್ನು ಕಸಿ ಮಾಡಿ ಗ್ರಾಮಗಳಲ್ಲಿ ರಚನಾತ್ಮಕ ಕೆಲಸಗಳ ಮೂಲಕ ಬಿತ್ತಿದರೆ, ಖಂಡಿತಾ ಭಾರತದ ಆತ್ಮವಾದ ಗ್ರಾಮಗಳೂ ಉಳಿಯುತ್ತವೆ, ಪ್ರಕೃತಿಯೂ ಉಳಿಯುತ್ತದೆ ಮತ್ತು ಆ ಮೂಲಕ ದೇಶ ಕೂಡ ಉಳಿಯುತ್ತದೆ.

"ನನಗೆ ಗೊತ್ತು ಆದರ್ಶ ಗ್ರಾಮವನ್ನು ರೂಪಿಸುವುದು ತುಂಬಾ ಕಷ್ಟ. ಆದರೆ ಭಾರತವೊಂದು ಆದರ್ಶ ದೇಶವಾಗಬೇಕು ಎಂದರೆ ಪ್ರತಿಗ್ರಾಮವೂ ಆದರ್ಶ ಗ್ರಾಮವಾಗಬೇಕು. ಆಗ ಮಾತ್ರ ಅದು ವಿಶ್ವಕ್ಕೇ ಆದರ್ಶಪ್ರಾಯವಾಗುತ್ತದೆ" ಎಂದ ಗಾಂಧೀಜಿಯ, ಪರಿಸರ ಕೇಂದ್ರಿತ ಸ್ವಾವಲಂಬಿ ಗ್ರಾಮಸ್ವರಾಜ್ಯದ ಮಾದರಿ, ವಿಕೇಂದ್ರೀಕೃತವಾಗಿ ಅನುಷ್ಠಾನಗೊಂಡರೆ– ನಮ್ಮ ಹಳ್ಳಿಗಾಡನ್ನುಳಿಸುವ ಒಂದು ಸಶಕ್ತ ದಾರಿ ಗೋಚರಿಸುತ್ತದೆ. ತನ್ಮೂಲಕ ಪ್ರಕೃತಿಯ ಸಮಸ್ಥಿತಿಯೂ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ತುರ್ತಾಗಿ ಅಧ್ಯಯನ, ಹಿರಿಯರ, ತಜ್ಞರ ಅನುಭವ, ಸಲಹೆ, ಮಾರ್ಗದರ್ಶನದಿಂದ ಸಂಪೂರ್ಣ ಗ್ರಾಮಾಭಿವೃದ್ಧಿಯ ಕನಸಿನೊಂದಿಗೆ, ಪರಿಸರವನ್ನು ಯಥಾವತ್ ಉಳಿಸಿಕೊಂಡು ಅದನ್ನು ಕೇಂದ್ರವಾಗಿರಿಸಿಕೊಂಡು ಇನ್ನಾದರೂ ಪ್ರಕೃತಿಯನ್ನು ಮರು ಸೃಷ್ಟಿಸುವ ಮಾದರಿಯ ಸರಳ ವಿಧಾನಗಳನ್ನು ಹುಡುಕಿಕೊಳ್ಳುತ್ತಾ ಹೋಗಬೇಕಾಗಿದೆ. ■

Karnataka Gandhi Smarak Nidhi
Gandhi Bhavan, Bengaluru



International Seminar to commemorate

75th Anniversary of the Central Gandhi Smarak Nidhi, New Delhi

MAHATMA GANDHI FOR THE 21ST CENTURY

Building A Future of Peace, Justice, Fraternity and Sustainable Development

24-25 August 2024

Gandhi Bhavan
Kumara Park East, Bengaluru - 560 001

The Gandhi Smarak Nidhi Karnataka is greatly pleased to invite you to a two-day International Seminar in Bengaluru, India on 24-25 August 2024. We are hosting this seminar to commemorate the 75th anniversary of the Central Gandhi Smarak Nidhi, a pre-eminent Gandhian organisation founded in 1949.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ

ಕೆಂಪೇಗೌಡ ಅಂತರ ರಾಷ್ಟ್ರೀಯ ಪ್ರಶಸ್ತಿ..



ರಾಜೀವ್ ಗಾಂಧೀ ಆರೋಗ್ಯ ವಿಶ್ವವಿದ್ಯಾಲಯ ಬೆಂಗಳೂರು ಮತ್ತು ರಾ.ಸೇ.ಯೋ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತ ಆಶ್ರಯ್ರದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇತ್ತೀಚಿಗೆ ತರಬೇತಿ ಶಿಬಿರ ಏರ್ಪಡಿಸಿತ್ತು. ಈ ಕಾರ್ಯಕ್ರಮದಲ್ಲಿ
" ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ" ಕುರಿತು ಮಾಜಿ ಸಚಿವರು, ಕರ್ನಾಟಕ ಚಿತ್ರಕಲಾ ಪರಿಷತ್ ನ ಅಧ್ಯಕ್ಷರಾದ ಡಾ.ಬಿ. ಎಲ್ ಶಂಕರ್ ಅವರು ಉದ್ಘಾಟನಾ ನುಡಿಗಳನ್ನು ಆಡಿದರು .

"ಗಾಂಧೀ ಭವನ ಸಂಸ್ಥೆಯ ಪಾರದರ್ಶಕತೆ, ಸಮಾಜಮುಖಿ ಕೆಲಸದಲ್ಲಿನ ಪರಿಶ್ರಮಕ್ಕಾಗಿ ಪ್ರಸಕ್ತ ಸಾಲಿನ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡ ಅಂತರಾಷ್ಟ್ರೀಯ ಪ್ರಶಸ್ತಿ ಸಂದಿರುವುದು ಜನಪ್ರಿಯತೆಯೊಂದಿಗೆ ಪ್ರಶಸ್ತಿಯ ಮೌಲ್ಯವನ್ನು ಹೆಚ್ಚಿಸಿದೆ . ಇದು ಹೆಮ್ಮೆ ಪಡುವ ಸಂಗತಿ. ಗಾಂಧೀ ಚಿಂತನೆಗಳನ್ನು ಪಸರಿಸುವ ಮೂಲಕ ಸಮಾಜದಲ್ಲಿ ಮೌಲ್ಯ ಶಿಕ್ಷಣವನ್ನು ಬಹಳಷ್ಟು ಪರಿಣಾಮಕಾರಿಯಾಗಿ ನೀಡುತ್ತಾ ಗಾಂಧೀಭವನವು ಒಳ್ಳೆಯ ಹೆಸರು ಗಳಿಸಿದೆ .ರಾ.ಸೇ.ಯೋ ಸಹಕಾರದೊಂದಿಗೆ ಇಂತಹ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಯುವಕರಲ್ಲಿ ಉನ್ನತ ವಿಚಾರಗಳ ಆಸಕ್ತಿ ಮೂಡಿಸಿ, ನಾಯಕತ್ವ ಗುಣಗಳನ್ನು ಬೆಳೆಸಿ ಸೇವಾ ಮನೋಭಾವವನ್ನು ಉತ್ತೇಜಿಸಿ, ಉತ್ತಮ ಅಭ್ಯಾಸಗಳ ಮೂಲಕ ಯುವ ಪೀಳಿಗೆಯನ್ನು ಭವಿಷ್ಯದ ನಾಯಕರನ್ನಾಗಿಸುವ ಸಂಕಲ್ಪ ಇಟ್ಟು ಕೊಂಡಿರುವ ಗಾಂಧಿ ಭವನದ ಯೋಜನೆಗಳು ಯಶಸ್ವಿಯಾಗಲಿ " ಎಂದು ಶಂಕರ್ ಅವರು ಹಾರೈಸಿದರು.

ಗಾಂಧೀ ಎಂದರೆ ಹಲವು ಮೌಲ್ಯ , ಅಂತಹ ಮೌಲ್ಯ ಶಿಕ್ಷಣದ ಜೊತೆಗೆ ಉತ್ತಮ ಮಾರ್ಗದರ್ಶನ ದೊರೆತರೆ ಯುವಕರ ಜೀವನದಲ್ಲಿ ಅಚ್ಚರಿ ಘಟಿಸಬಹುದು . ಇಂತಹ ವಿಶಿಷ್ಟ ಕಾರ್ಯಕ್ರಮಗಳು ಬದುಕಿನಲ್ಲಿ ಮುಖ್ಯವಾದ ಪಾತ್ರ ವಹಿಸುತ್ತವೆ . ಆದರ್ಶ ಪುರುಷರು, ಸಮಾಜ ಸುಧಾರಕರು ಸಹ ನಮ್ಮ ನಿಮ್ಮಂತೆ ಅನೇಕ ಭಾವನೆಗಳಲ್ಲಿ ಸಿಲುಕಿದವರೇ ಆಗಿದ್ದರು. ಆದರೆ ಅದನ್ನೆಲ್ಲಾ ಮೀರಿ ತಮ್ಮ ಜೀವಿತೋದ್ದೇಶವನ್ನು ಗುರುತಿಸಿ ಅದನ್ನು ಸಾಕಾರಗೊಳಿಸಿಕೊಂಡು ಲೋಕಕ್ಕೆ ಮಾದರಿ ಆದರೆಂಬುದು ಯುವಕರಿಗೆ ಅರ್ಥವಾಗ ಬೇಕು





. ನಾವು ವ್ಯಕ್ತಿಗಳನ್ನು ದೇವರಾಗಿಸಿ ಪೂಜಿಸುವುದಕ್ಕಿಂತ ಹೆಚ್ಚಿನ ಗಮನವನ್ನು ಅವರ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವ ಕಡೆಗೆ ಗಮನ ಹರಿಸ ಬೇಕು . ಆರಾಧಿಸುವುದಕ್ಕಿಂತ ಅವರ ಕನಸುಗಳನ್ನು ಸಾಕಾರಗೊಳಿಸುವ ಕಡೆ ಹೆಜ್ಜೆ ಇಡಬೇಕು. ಬದುಕಿನಲ್ಲಿ ಬರುವ ಎಲ್ಲ ಗೊಂದಲಗಳಿಗೂ ಗಾಂಧೀ ಚಿಂತನೆಗಳು ಪರಿಹಾರದ ಭಾಗವಾಗುತ್ತವೆ . ಇಂತಹ ಒಳ್ಳೆಯ ಚಿಂತನೆಗಳನ್ನು ಎಲ್ಲ ಕಡೆಗೂ ತಲುಪಿಸ ಬೇಕು.ವ್ಯವಸ್ಥೆ ಕೆಟ್ಟಿದೆ ಎಂದು ಶಪಿಸಿದರೆ ಸಾಲದು ಸದ್ದಿಲ್ಲದೇ ಅದನ್ನು ಸರಿಪಡಿಸಲು ಪ್ರಯತ್ನಿಸ ಬೇಕು . ಸಮಾಜ ಸುಧಾರಕರ ಬಗ್ಗೆ ಓದಿ ಕೊಳ್ಳ ಬೇಕು . ಇದರಿಂದ ವೈಯಕ್ತಿಕ ಬದುಕೂ ಕೂಡ ಹಸನಾಗುತ್ತದೆ. ಸಮ ಸಮಾಜದ ನಿರ್ಮಾಣವೂ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇಂತಹ ಅನೇಕ ಕಾರ್ಯಗಾರಗಳನ್ನು ಆಯೋಜಿಸಿ ಯುವಕರನ್ನು ತರಬೇತಿ ಗೊಳಿಸುವ ಪ್ರಯತ್ನ ಸದಾ ಆಗುತ್ತಲೇ ಇರಬೇಕು .ಗಾಂಧೀಯವರ ಬದುಕಿನ ಕುರಿತಾದ ಅಪಹಾಸ್ಯ, ಟೀಕೆ , ಟಿಪ್ಪಣಿಗಳ ಸುಳ್ಳು ಸುದ್ದಿಯನ್ನು ಹರಡಿಸುವವರ ನಡುವೆ ಅವರ ಬದುಕಿನ ನಿಜವಾದ ದೃಷ್ಟಿಯನ್ನು ನೀಡ ಬೇಕಿದೆ. ಅನೇಕ ಮಹಾಪುರುಷರು ಸಮಾಜಕ್ಕಾಗಿ ತಮ್ಮ ಬದುಕನ್ನೇ ಸವೆಸಿದ್ದಾರೆ. ದುರದೃಷ್ಟ ವೆಂದರೆ ಅಂತಹವರ ಬದುಕನ್ನು ತಮಗೆ ಬೇಕಾದಂತೆ ತಿರುಚಿ ಪ್ರಸ್ತುತ ಪಡಿಸುವ ಕೆಲಸ ನಡೆಯುತ್ತಲಿದೆ. ಇಂತಹ ಸಂದರ್ಭದಲ್ಲಿ ವಿಚಾರಗಳನ್ನು ಯಥಾವತ್ತಾಗಿ ಮುಂದಿನ ಪೀಳಿಗೆಗೆ ದಾಟಿಸುವ ಪ್ರಯತ್ನ ಆಗಬೇಕಿದೆ. ಇದರ ಹೊಣೆಗಾರಿಕೆ ನಮ್ಮೆಲ್ಲರದ್ದು ಆಗಿದೆ .

ಈ ಕಾರ್ಯಗಾರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಭಾಗಿತ್ವವು ನಿಜಕ್ಕೂ ಸಂತಸ ಪಡುವ ವಿಚಾರ . ಮುಂದಿನ ದಿನಗಳಲ್ಲಿ ಇವರೆಲ್ಲರೂ ಸಹಾನುಭೂತಿವುಳ್ಳ ಪರಿಣಾಮಕಾರಿ ವೃತ್ತಿಪರರಾಗಿಯೂ ಸಮುದಾಯದ ಸೇವೆಯಲ್ಲಿ ಬದ್ಧತೆಯೊಂದಿಗೆ ತೊಡಗಿಸಿಕೊಳ್ಳುವ ಮೂಲಕ ತಮ್ಮನ್ನು ತಾವು ಉತ್ತಮ ಪಡಿಸಿಕೊಂಡು ದೈಹಿಕ –ಮಾನಸಿಕ ಆರೋಗ್ಯದೊಂದಿಗೆ ಸಮಾಜದ ಸ್ವಾಸ್ಥ್ಯ ವನ್ನು ಸಹ ಕಾಪಾಡುವರೆಂಬ ನಂಬಿಕೆ ನನ್ನಲ್ಲಿ ಮೂಡಿದೆ ಎಂದು ನುಡಿದರು.

ಗಾಂಧಿ ಮತ್ತು ಕರ್ನಾಟಕ

ಭಾಗ – 15



ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲಿ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

(ಹಿಂದಿನ ಸಂಚಿಕೆಯಿಂದ)

ಅಖಿಲ ಭಾರತ ಹಿಂದೂಸ್ತಾನೀ ಪರಿಷತ್ತಿನಲ್ಲಿ ಗಾಂಧೀಜಿಯ ಭಾಷಣ

30–12–1924

ಈ ಪರಿಷತ್ತಿಗೆ ಅಧ್ಯಕ್ಷರು ಶ್ರೀ ನರಸಿಂಹ ಚಿಂತಾಮಣಿ ಕೇಳ್ಕರರು. ಗಾಂಧೀಜಿ ಕೂಡಲೆ ಹೊರಡಬೇಕಾಗಿದ್ದುದರಿಂದ ಅಧ್ಯಕ್ಷರು ಗಾಂಧೀಜಿಯನ್ನು ಒಂದೆರಡು ಮಾತು ಹೇಳಲು ಕೇಳಿಕೊಂಡರು.

ಗಾಂಧೀಜಿಯ ಭಾಷಣ :

ಕಳೆದ ಕೆಲವುದಿನಗಳಲ್ಲಿ ನೀವು ನನಗೆ ತೋರಿಸಿದ ಪ್ರೀತಿಯಲ್ಲಿ ನಾನು ಮಿಂದು ಹೋಗಿದ್ದೇನೆ. ಇವತ್ತು ನಿಮ್ಮ ಅಧ್ಯಕ್ಷರು, ಅಧ್ಯಕ್ಷ ಭಾಷಣವನ್ನು ಮುಂದಕ್ಕೆ ಹಾಕಿ, ನನಗೆ ಮಾತಾಡಲು ಒಂದು ಅವಕಾಶ ಕೊಟ್ಟದ್ದು ಅದಕ್ಕೆ ಮತ್ತೊಂದು ಸಾಕ್ಷಿ. ನಾನು ಒಂದು ಸಂಸ್ಥಾನಿ ಗ್ರಾಮದಲ್ಲಿ ಹುಟ್ಟಿದೆ ಎಂಬುದು ನಿಮಗೆ ಗೊತ್ತಿರಬೇಕು. ಕಾಠೇವಾಡದ ಸಂಸ್ಥಾನಗಳನ್ನು ನಾನು ಬಲ್ಲೆ. ನನ್ನ ಮತ್ತು ಅವುಗಳ ಸಂಬಂಧ ಚೆನ್ನಾಗಿದೆ. ನಾನು ಹೆಚ್ಚು ಹೇಳದಿದ್ದರೂ ಸಂಸ್ಥಾನಗಳಲ್ಲಿ ನಡೆಯುವ ಚಟುವಟಿಕೆಗಳನ್ನು ನಿರೀಕ್ಷಿಸುತ್ತಲೇ ಇದ್ದೇನೆ. ಕಾಂಗ್ರೆಸ್ ಅಧ್ಯಕ್ಷ ಭಾಷಣದಲ್ಲಿ ಸಂಸ್ಥಾನಗಳ ಪ್ರಸ್ತಾಪ ಬಂದಿದೆ. ಬೊಂಬಾಯಿಯಲ್ಲಿ ಇತ್ತೀಚೆಗೆ ನಡೆದ ಸರ್ವಪಕ್ಷ ಸಮ್ಮೇಳನ, ಸ್ವರಾಜ್ಯಕ್ಕಾಗಿ ಒಂದು ಯೋಜನೆಯನ್ನು ತಯಾರಿಸಲು ಒಂದು ಸಮಿತಿಯನ್ನು ನೇಮಿಸಿದೆ. ನನ್ನ ಅಧ್ಯಕ್ಷ ಭಾಷಣದಲ್ಲಿ ಬರೆದಿರುವ ಸ್ವರಾಜ್ಯದ ರೂಪುರೇಷೆಗಳನ್ನು ನನ್ನ ಅಭಿಪ್ರಾಯದಂತೆ ತೋರಿಸಿದ್ದೇನೆ. ಆದಷ್ಟು ಸಂಗ್ರಹವಾಗಿ ಹೇಳಬೇಕಾಗಿತ್ತಾದ್ದರಿಂದ ಭಾರತೀಯ ಸಂಸ್ಥಾನಗಳ ಬಗ್ಗೆ ಕೆಲವೇ ವಾಕ್ಯಗಳನ್ನು ಹೇಳಿದ್ದೇನೆ. ನನ್ನ ವಕೀಲ ಗೆಳೆಯರು ಕೆಲವರು ಆತ ದೇಶೀ ಸಂಸ್ಥಾನಗಳ ಬಗ್ಗೆ ನನ್ನ ಪ್ರಸ್ತಾಪವನ್ನು ಕುರಿತು ಏನೋ ಹೇಳ ಬಯಸಿದ್ದಾರೆ.


ಭಾರತೀಯ ರಾಜರ ಪ್ರಮುಖರ ಸ್ಥಾನಮಾನದ ಬಗ್ಗೆ ನಾನು ಹೇಳಿದ್ದೇನೆ ವಿನಃ ತಮ್ಮ ಪ್ರಜೆಗಳ ಬಗ್ಗೆ ಅವರ ಜವಾಬ್ದಾರಿ ಏನು ಎಂಬುದನ್ನು ಹೇಳಿಯೇ ಇಲ್ಲ ಎನ್ನುತ್ತಾರೆ. ಈ ಗೆಳೆಯರಿಗೆ ನಾನು ನೆನಪು ಕೊಡಬೇಕಾಗಿಲ್ಲ, – ಹಕ್ಕುಗಳ ಜೊತೆಗೆ ಅವುಗಳಿಗೆ ಸಂಬಂಧಿಸಿದ ಹೊಣೆಗಾರಿಕೆಗಳು ಬರುತ್ತವೆ. ಭಾರತೀಯ ಸ್ವರಾಜ್ಯದ ನನ್ನ ಯೋಜನೆಯಲ್ಲಿ ಸಂಸ್ಥಾನಗಳನ್ನು ನಿರ್ನಾಮಗೊಳಿಸುವ ಕಲ್ಪನೆ ಇಲ್ಲ. ಈ ವಿಚಾರವನ್ನು ಸಾರ್ವಜನಿಕರ ಮುಂದೆ ಪ್ರಧಾನವಾಗಿ ನಾನು ಮಂಡಿಸಬೇಕಾಗಿತ್ತು. ಯಾರಾದರೂ ಸಂಸ್ಥಾನಿ ಪ್ರಜೆಗಳು ಸಂಸ್ಥಾನಾಧೀಶರ ದೌರ್ಜನ್ಯದಿಂದ ಬ್ರಿಟಿಷ್ ಭಾರತದ ಪ್ರದೇಶಕ್ಕೆ ಓಡಿಬಂದರೆ ಯಾವ ಕಾರಣದಿಂದಲೇ ಆಗಲಿ, ಸ್ವರಾಜ್ಯ ಸರಕಾರ ಮತ್ತೆ ಆ ಸಂಸ್ಥಾನಿಕರಿಗೆ ಅಂಥವರನ್ನು ಒಪ್ಪಿಸಿಕೊಡುವುದಿಲ್ಲ . ಸಂಸ್ಥಾನ ಪ್ರಜೆಗಳಿಗೆ ಕೊಟ್ಟ ಈ ಭರವಸೆ ಮತ್ತು ಸಂಸ್ಥಾನಿಕರಿಗೆ ಅವರ ಸ್ಥಾನಮಾನದ ಬಗ್ಗೆ ಕೊಟ್ಟ ಭರವಸೆ ಇವುಗಳಿಂದ ಭಾರತೀಯ ಸಂಸ್ಥಾನಗಳಲ್ಲಿ ಒಳ್ಳೆಯ ಸರಕಾರ ನಡೆದಾವೆಂದು ಭಾವಿಸಬಹುದು.

ರೇಖಾ ಗಣಿತದಲ್ಲಿ ಕೆಲವು ಸಿದ್ಧಾಂತಗಳಿವೆ. ರಾಜ್ಯಶಾಸ್ತ್ರದಲ್ಲಿಯೂ ಹೀಗೆಯೇ ಕೆಲವು ಇವೆ. ರಾಜರಿಗೆ ತಮ್ಮ ಸ್ಥಾನದ ಬಗ್ಗೆ ಭರವಸೆ ಕೊಟ್ಟದ್ದೇ ಆದರೆ ತಮ್ಮ ಪ್ರಜೆಗಳ ಮೇಲೆ ಪ್ರಗತಿದಾಯಕ, ಜ್ಞಾನದಾಯಕ ಸರಕಾರವನ್ನು ನಡೆಸುತ್ತಾರೆಂದು ನಂಬಬಹುದಾಗಿದೆ. ಇಷ್ಟರಲ್ಲೇ ಭಾವನಗರದಲ್ಲಿ ಕಾಠೇವಾಡ ಸಂಸ್ಥಾನಗಳ ಪರಿಷತ್ತು ನಡೆಯಲಿದೆ. ಅದಕ್ಕೆ ನಾನು ಅಧ್ಯಕ್ಷ.

ಭಾರತೀಯ ಸಂಸ್ಥಾನಗಳ ಬಗ್ಗೆ ನಾನು ಹೇಳಬೇಕಾದ ವಿವರಗಳನ್ನೆಲ್ಲ ಆ ಸಂದರ್ಭಕ್ಕಾಗಿ ಕಾದಿರಿಸಿಕೊಂಡಿದ್ದೇನೆ. ಈ ಪರಿಷತ್ತಿಗೆ ಅಧ್ಯಕ್ಷನಾಗಲು ಎಷ್ಟೋ ಹಿಂದೆ ನನಗೆ ಕರೆ ಬಂದಿತ್ತು. ಆದರೆ ನನ್ನ ಜೈಲುವಾಸಕ್ಕೆ ಮೊದಲು ನಾನು ಸತ್ಯಾಗ್ರಹದ ಬಾವುಟವನ್ನು ಹಾರಿಸಿದ್ದೆ. ಆ ವೇಳೆಯಲ್ಲಿ ನಾನು ಇಂಥ ಪರಿಷತ್ತು ಸಮ್ಮೇಲನಗಳ ಅಧ್ಯಕ್ಷತೆಯನ್ನು ಒಪ್ಪಿಕೊಂಡರೆ, ಸಂಸ್ಥಾನಿಕರ ಸ್ಥಾನಮಾನಗಳಿಗೆ ಅಪಾಯ ಬಂದೀತೆಂದುಕೊಂಡೆ. ಅವರನ್ನು ವಿಷಮ ಸಂಕಟಕ್ಕೆ ಸಿಲುಕಿಸಿ ನನಗೂ ಅವರಿಗೂ ಇದ್ದ ಮಧುರ ಬಾಂಧವ್ಯವನ್ನು ಕೆಡಿಸಿಕೊಳ್ಳಲು ನನಗೆ ಇಷ್ಟವಿರಲಿಲ್ಲ. ನಾನು ಹೇಳಿ ಕೇಳಿ ಸಂಪೂರ್ಣ ಅಹಿಂಸಾವಾದಿ. ಸಂಸ್ಥಾನಿಕರಿಗೂ ಅವರ ಪ್ರಜೆಗಳಿಗೂ ಇದ್ದ ಮಧುರ ಬಾಂಧವ್ಯವನ್ನು ಕಹಿಗೊಳಿಸಲು ನನಗೆ ಇಷ್ಟವಿರಲಿಲ್ಲ. ಅದು ನನ್ನ ತತ್ವಕ್ಕೇ ವಿರುದ್ಧ, ಆದರೆ ಈ ಸಂಸ್ಥಾನೀ ಪ್ರಜೆಗಳನ್ನೂ ಅವರ ನ್ಯಾಯವಾದ ಬೇಡಿಕೆಗಳನ್ನೂ ಜಾಸ್ ಎಂದಿಗೂ ಮರೆಯಲಾರೆ. ಇದೇ ಭರವಸೆ ವಿಶ್ವಾಸಗಳನ್ನು ಭಾರತೀಯ ಸಂಸ್ಥಾನಗಳ ವಿಷಯಗಳಲ್ಲಿ ವ್ಯವಹರಿಸುವಾಗ ಮಧುರವಾದ ಯುಕ್ತಿ ಯುಕ್ತತೆಯನ್ನು ಕಾಯ್ದುಕೊಳ್ಳಬೇಕೆಂದು ನನ್ನ ಆಸೆ. ಯಾರದೇ ವಿಷಯಕ್ಕೆ ತಪ್ಪು ಕಲ್ಪನೆ ಉಂಟುಮಾಡಲು ನಾನು ಬಯಸಿಲ್ಲ. ಇತ್ತ ರಾಜರ ಸ್ಥಾನಮಾನವನ್ನೂ ಕಾಯಬೇಕು, ಅತ್ತ ಅವರ ಪ್ರಜೆಗಳ ಹಕ್ಕನ್ನೂ ಕಾಯಬೇಕು; ಇದು ನನ್ನ ಏಕೈಕ ಉದ್ದೇಶ. ಖಾದಿಯ ಪ್ರಚಾರ ಕಾರ್ಯದಲ್ಲಿ ರಾಟೆಯ ಪ್ರಚಾರಕಾರ್ಯದಲ್ಲಿ ರಾಜ ಮಹಾರಾಜರ ಸಹಾನುಭೂತಿಯನ್ನು ಗಳಿಸಬೇಕೆಂದು ನನ್ನ ಹುರುಪಿನ ಉದ್ದೇಶ. ನನ್ನ ಶ್ರದ್ಧೆಯನ್ನೆಲ್ಲ ರಾಟೆಯಲ್ಲಿ ಕೇಂದ್ರೀಕರಿಸಿದ್ದೇನೆ .

ಕಾಂಗ್ರೆಸ್ ಅಧಿವೇಶನ ಮುಗಿದಮೇಲೆ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಗಾಂಧೀಜಿ ಬೆಳಗಾಂವಿಯ ಈ ಕಾಂಗ್ರೆಸ್ಸಿನ ಬಗ್ಗೆ, ಅದರ ವ್ಯವಸ್ಥೆಯ ಬಗ್ಗೆ ತಮ್ಮ ಕೆಲವು ಅಭಿಪ್ರಾಯಗಳನ್ನು ಬರೆದರು. (ಬರಹಗಳ ಸಾರಾನುವಾದವನ್ನು ಇಲ್ಲಿ ಕೊಡಲಾಗಿದೆ) (ಜನವರಿ 1, ಮತ್ತು 8, 1925 .ವಿಜಯನಗರ)

ದೇಶಪಾಂಡೆ ಗಂಗಾಧರರಾಯರೂ ಅವರ ಕಾರ್ಯಕರ್ತರ ತಂಡವೂ ಅತ್ಯುನ್ನತ ಮಟ್ಟಕ್ಕೆ ಏರಿದರು. ಅವರ ವಿಜಯನಗರ (ಕರ್ನಾಟಕದ ಕಾಂಗ್ರೆಸ್ ನಗರಕ್ಕೆ ಈ ಐತಿಹಾಸಿಕ ಹೆಸರನ್ನಿಟ್ಟಿದ್ದರು) ಅತ್ಯುನ್ನತ ವಿಜಯ; ಇನ್ನೂ ಸ್ವರಾಜ್ಯ ವಿಜಯವಲ್ಲ, ಆದರೆ ಸಂಘಟನ ವಿಜಯ, ಪ್ರತಿಯೊಂದು ವಿವರವನ್ನೂ ಮೊದಲೇ ಆಲೋಚಿಸಿದ್ದರು. ಡಾ॥ ಹರ್ಡೀಕರರ ಸ್ವಯಂ ಸೇವಕರ ದಳ ಬಹಳ ಚುರುಕು ಆಗಿತ್ತು.ರಸ್ತೆಗಳೂ ಬಹಳ ಅಗಲ, ಬಹಳ ಸ್ವಚ್ಛವಾಗಿದ್ದವು. ತಾತ್ಕಾಲಿಕವಾಗಿ ಕೂಡಿದ ಅಂಗಡಿಗಳವರ ಅನುಕೂಲಕ್ಕಾಗಿ, ಪ್ರೇಕ್ಷಕರಾಗಿ ಬಂದ ಸಾವಿರಾರು ಜನರ ಓಡಾಟಕ್ಕಾಗಿ ಇನ್ನೂ ಹೆಚ್ಚು ಅಗಲ ಆಗಬಹುದಾಗಿತ್ತು. ದೀಪದ ವ್ಯವಸ್ಥೆ ಪರಿಪೂರ್ಣವಾಗಿತ್ತು. ಆ ವಿಶಾಲ ಮಂಟಪ, ಅದರ ಮುಂದೆ ಇದ್ದ ಕಾರಂಜಿಯು ನಗರದೊಳಕ್ಕೆ ಬರುವ ಎಲ್ಲರನ್ನೂ ಕೈಬೀಸಿ ಕರೆಯುವಂತಿದ್ದವು. ಮಂಟಪದೊಳಗೆ ಕನಿಷ್ಠ ಪಕ್ಷ 17,000 ಜನಕ್ಕೆ ಅವಕಾಶ ಇತ್ತು. ನಿರ್ಮಲೀಕರಣದ ವ್ಯವಸ್ಥೆ ತುಂಬ ಚೆನ್ನಾಗಿತ್ತು. ಇನ್ನೂ ಅಷ್ಟು ವೈಜ್ಞಾನಿಕ ಪದ್ಧತಿ ತರಬಹುದಿತ್ತು. ಬಳಸಿದ ನೀರನ್ನು ಹೊರಗೆ ಚೆಲ್ಲುವ ವಿಧಾನ ಬಹಳ ಹಳೆಯ ಕಾಲದ್ದು. ಮುಂದಿನ ವರ್ಷ (1925) ಕಾಂಗ್ರೆಸ್ ಅಧಿವೇಶನವನ್ನು ನಡೆಸುವ ಕಾನಪೂರದವರು ಶಿಬಿರ ನಿರ್ಮಲೀಕರಣದ



ಪರಿಣಾಮಕಾರೀ ಪದ್ಧತಿಗಳನ್ನು ಅಭ್ಯಾಸಮಾಡಲಿ. ಈ ಬಹು ಮುಖ್ಯವಾದ ಕೆಲಸವನ್ನು ಕೊನೆಯ ಗಳಿಗೆಯವರೆಗೆ ಮುಂದಕ್ಕೆ ತಳ್ಳದೇ ಇರಲಿ ಎಂದು ಸೂಚಿಸುತ್ತೇನೆ.

ಅಧ್ಯಕ್ಷ ಕುಟೀರ: ಸಂಘಟನೆ ಕಾಂಗ್ರೆಸ್ ಶಿಬಿರದಲ್ಲಿ ಹೆಚ್ಚು ಕಡಿಮೆ ಪರಿಪೂರ್ಣವಾಗಿತ್ತು. ಇದಕ್ಕೆ ನನ್ನ ಪೂರ್ಣ ಪ್ರಶಂಸೆ. ಆದರೂ ಹೊರಗೆ ಆಡಂಬರವಾಗಿ ಕಾಣಿಸುವಂತೆ ಮಾಡುವ ಹಳೆಯ ಪದ್ಧತಿಯನ್ನು ಗಂಗಾಧರರಾಯರು ಕೈಬಿಡಲಿಲ್ಲ ಎನ್ನದೇ ಇರಲಾರೆ. "ಮೇಲಿನ ಜನಕ್ಕೆ" ಎಲ್ಲ ವಿಶೇಷ ಸೌಕರ್ಯವನ್ನೂ ಒದಗಿಸಿಕೊಡಬೇಕೆನ್ನುವ ಚಪಲ ಅವರಿಗೆ. ಅದನ್ನು ಅವರು ಕೈ ಬಿಟ್ಟಿರಲಿಲ್ಲ. ಅಧ್ಯಕ್ಷರ ಕುಟೀರವನ್ನೇ ನೋಡಿರಿ. ನಾನು ಕೇಳಿದ್ದು ಒಂದು ಖಾದಿ ಗುಡಿಸಲು. ನನಗೆ ದೊರೆತದ್ದು ಒಂದು ಖಾದಿ ಅರಮನೆ. ಅದರಿಂದ ನನಗೆ ಅಗೌರವವಾದಂತಾಯಿತು. ಅಧ್ಯಕ್ಷರಿಗಾಗಿ ಕಾದಿರಿಸಿದ ನೆಲ, ಅಷ್ಟು ಬೇಕೇ ಬೇಕು.

ಈ ಅರಮನೆಯ ಸುತ್ತ ಹಾಕಿದ್ದ ಬೇಲಿ ಅತ್ಯಗತ್ಯವಾಗಿತ್ತು. ಇಲ್ಲದೇ ಇದ್ದರೆ ನನ್ನನ್ನು ಕಾಪಾಡಲು ಬೇರೆ ಯಾವ ಸಾಧನವೂ ಇರಲಿಲ್ಲ. ನನ್ನನ್ನು ಮೆಚ್ಚಿದ ಜನರ ಗುಂಪು ನನಗೆ ತೊಂದರೆ ಕೊಡದಂತೆ ಕಾಪಾಡಲು ಇದು ಅಗತ್ಯವಾಗಿತ್ತು . ನಾನೇ ಕಂಟ್ರಾಕ್ಟರ್ ಆಗಿದ್ದರೆ ಇಷ್ಟೇ ಸ್ಥಳದಲ್ಲಿ ಇಷ್ಟೇ ಸೌಕರ್ಯವನ್ನು ಇದರ ಅರ್ಧ ವೆಚ್ಚದಲ್ಲಿ ಅಧ್ಯಕ್ಷರಿಗೆ ಒದಗಿಸುತ್ತಿದ್ದೆ.

ಹಣವನ್ನು ನೀರಿನಂತೆ ವೆಚ್ಚ ಮಾಡಿದ ಅನೇಕ ಸಂದರ್ಭಗಳಲ್ಲಿ ಇದೂ ಒಂದು. ವಿಷಯ ನಿಯಾಮಕ ಸಭೆಯ ಸದಸ್ಯರಿಗೆ, ಇತರರಿಗೆ ಕೊಟ್ಟ ಉಪಹಾರ ಅಷ್ಟು ಶ್ರೀಮಂತವಾಗಿ ಇರಬೇಕಾಗಿರಲಿಲ್ಲ. ನಾನು ಯಾರಲ್ಲಿಯೂ ತಪ್ಪು ಕಂಡು ಹಿಡಿಯುತ್ತಿಲ್ಲ . ಈ ವಿಶೇಷ ವೆಚ್ಚ ಎಲ್ಲವೂ ಹೃದಯ ಔದಾರ್ಯದಿಂದ ಬಂದದ್ದು, ಸದುದ್ದೇಶದಿಂದ ಮಾಡಿದ್ದು. ನಲವತ್ತು ವರ್ಷದ ಪರಂಪರೆಯು ಒಂದು ದಿನದಲ್ಲಿ ಕಿತ್ತುಹಾಕಲು ಸಾಧ್ಯವೇ? ಅದರಲ್ಲಿಯೂ ಯಾರು ಮಾತಿಗೆ ಕೇಳುವವರೇ ಸಿಗುವದಿಲ್ಲವೋ ಅವರು ಪದೇ ಪದೇ ಟೀಕೆ ಮಾಡುತ್ತಾರೆ.

1921ರಲ್ಲಿ ನೀವು ಪ್ರಾರಂಭ ಮಾಡಿ (ಮಿತವ್ಯಯ) ಎಂದು ವಲ್ಲಭಭಾಯಿಗೆ ನಾನು ಹೇಳಿದಾಗ ಅವರು ಹೇಳಿದರು – ಅತಿವ್ಯಯ ಮಾಡದಂತೆ ಸರಳತೆ ತರಲು ನಾನು ಪ್ರಯತ್ನಿಸುತ್ತೇನೆ. ಆದರೆ ನನ್ನ ಗುಜರಾತಿಗೆ ಜಿಪುಣ ಎಂದು ಕೆಟ್ಟ ಹೆಸರು ಬರಬಾರದು. ತಾತ್ಕಾಲಿಕವಾಗಿ ಒಂದು ಕಾರಂಜಿ ಕಟ್ಟಿ, ಸಾವಿರಾರು ರೂಪಾಯಿ ವೆಚ್ಚ ಮಾಡದೇ ಹೋದರೆ, ಯಾರೂ ಜಿಪುಣ ಎನ್ನುವದಿಲ್ಲ ಎಂದು ನಾನು ಹೇಳಿದೆ. ನೀವು ಏನು ಮಾಡುತ್ತೀರೊ ಅದನ್ನು ಮುಂದಿನವರು ಅನುಸರಿಸುತ್ತಾರೆ ಎಂದು ಹೇಳಿದೆ. ಜಿಪುಣ ಎನಿಸಿಕೊಳ್ಳುವ ಅಪವಾದ ವಲ್ಲಭಭಾಯಿಗೆ ಇಷ್ಟವಿರಲಿಲ್ಲ. ಕಾನಪುರವಾದರೂ ಇವರಲ್ಲಿ ಮಾರ್ಗದರ್ಶನ ಮಾಡಲಿ ಎಂದು ಸೂಚಿಸುತ್ತೇನೆ. ಕಾನಪುರದ ಜಿಪುಣತನವೇ ನಾಳೆ ಬರುವವರೆಗೆ ಅತೀ ವ್ಯಯ ಎನಿಸೀತು. ವಲ್ಲಭಭಾಯಿ ಎಷ್ಟನ್ನೋ ತ್ಯಜಿಸಿದರು. ಯಾವುದು ಅಗತ್ಯವಿರಲಿಲ್ಲವೋ ಅದನ್ನು ತೆಗೆದು ಹಾಕಿದ್ದಕ್ಕಾಗಿ ಯಾರೂ ಏನೂ ಅನ್ನಲಿಲ್ಲ.

ಕಾಂಗ್ರೆಸ್ ಭಾರತದ ಮೂಲಾಧಾರವಾದ ಬಡರೈತರ ಪ್ರತಿನಿಧಿ ಆಗಬೇಕು. ನಮ್ಮ ವೆಚ್ಚದ ಪ್ರಮಾಣವು ಸಾಧ್ಯವಿದ್ದ ಮಟ್ಟಿಗೂ ಅವರ ಪ್ರಮಾಣಕ್ಕೆ ಹೊಂದಬೇಕು. ಅದ್ದರಿಂದ ಅಕ್ಷಮತೆಯೂ, ಜಿಪುಣತನವೂ ನಮ್ಮ ಪಾಲಿಗೆ ಸರಿ . ನಾವು ಮಿತವ್ಯಯದ ಕಡೆಗೆ ಹೋಗಬೇಕು. ನನ್ನ ಅಭಿಪ್ರಾಯದಲ್ಲಿ ವಸತಿಗೆ, ಊಟಕ್ಕೆ ತೆಗೆದುಕೊಂಡ ಶುಲ್ಕ ಸ್ವಲ್ಪ ಹೆಚ್ಚೇ.


ಈ ಕಾರ್ಯದಿಂದ ನಾವು ಒಂದು ಪಾಠ ಕಲಿಬೇಕು. ಅದಕ್ಕಿಂತಲೂ ಕಡಿಮೆ ಆದರೂ ಚಿಂತೆ ಇಲ್ಲ; 1916ರಲ್ಲಿ ಅವರ ಗುರುಕುಲದ ಸಮಾರಂಭಕ್ಕೆ ಬಂದ ಅತಿಥಿಗಳಿಗಾಗಿ ಅವರು ಗುಡಿಸಲುಗಳನ್ನು ಕಟ್ಟಿಸಿದ್ದರು. ಬಹುಶಃ 2 ಸಾವಿರ ರೂಪಾಯಿ ವೆಚ್ಚ ಆಗಿರಬೇಕು. ಆ ಕ್ಷೇತ್ರದಲ್ಲಿ ಉಪಹಾರದ ಅಂಗಡಿಗಳನ್ನು ತೆರೆಯಲು ಕಂಟ್ರ್ಯಾಕ್ಟರನ್ನು ಅವರು ಕರೆದರು. ಅವರಿಗೆ ಕೊಟ್ಟ ಸ್ಥಳಕ್ಕೆ ಬಾಡಿಗೆ ಹಾಕಲಿಲ್ಲ. ಯಾರೂ ಆ ವ್ಯವಸ್ಥೆಯ ಬಗ್ಗೆ ದೂರುವ ಹಾಗೆ ಇರಲಿಲ್ಲ. ತಮಗೆ ಏನು ಸಿಗಬಹುದೋ ಅದು ಅವರಿಗೆ ಗೊತ್ತಿತ್ತು. ಅನಾಯಾಸವಾಗಿ, ಗುರುಕುಲದ ಆವರಣದಲ್ಲಿ 40 ಸಾವಿರ ಜನಕ್ಕೆ ಬಿಡದಿ ಮಾಡಲಾಯಿತು. ವೆಚ್ಚವಂತೂ ಇರಲಿಲ್ಲ. ಬಂದ ಅತಿಥಿಗಳಿಗೆ ಪ್ರತಿಯೊಬ್ಬರಿಗೂ ಅವರವರಿಗೆ ಬೇಕಾದದ್ದು ದೊರೆಯಿತು. ಅಗ್ಗಬೇಕು ಎಂದವರಿಗೆ ಅಗ್ಗ, ತುಟ್ಟಿಬೇಕು ಎಂದವರಿಗೆ ತುಟ್ಟಿ. ಸ್ವಾಮಿಗಳವರು ಮಾಡಿದ್ದನ್ನು ಪೂರ್ಣವಾಗಿ ಅನುಕರಿಸಬೇಕು ಎಂದು ನಾನು ಹೇಳುವದಿಲ್ಲ. ಆದರೆ ಇದಕ್ಕಿಂತಲೂ ಅಗ್ಗ ಹಾಗೂ ಉತ್ತಮ ಯೋಜನೆಗಳು ಅನಿವಾರ್ಯವಾಗಿವೆ. ಪ್ರತಿನಿಧಿ ಶುಲ್ಕವನ್ನು 10 ರೂಪಾಯಿನಿಂದ 1 ರೂಪಾಯಿಗೆ ಇಳಿಸಿದ್ದು ಸಮಸ್ತರ ಪ್ರಶಂಸೆಗೆ ಪಾತ್ರವಾಯಿತು. ವಸತಿ ಊಟಗಳ ವೆಚ್ಚ ಕಡಿಮೆಯಾದರೆ ಎಲ್ಲರಿಗೂ ಪ್ರಿಯವೇ ಆಗುತ್ತದೆ . ವಾರ್ಷಿಕ ಜಾತ್ರೆ ನೋಡಲು ಬರುವ ಎಲ್ಲ ಪ್ರೇಕ್ಷಕರಿಂದಲೂ ಒಂದು ಅಲ್ಪ ಪ್ರವೇಶ ಧನವನ್ನು ತೆಗೆದುಕೊಂಡು, ಹಣದ ವರಮಾನವನ್ನು ಹೆಚ್ಚಿಸಿಕೊಳ್ಳಬಹುದು. ಕಾಂಗ್ರೆಸ್ ಅಧಿವೇಶನ ಎಂದರೆ ಬೇಕಾದಾಗ ಬಂದು, ಮನರಂಜನೆಯನ್ನೂ ಅದರ ಜೊತೆಗೆ ಬೋಧನೆಯನ್ನೂ ಪಡೆಯುವ ವಾರ್ಷಿಕ ಜಾತ್ರೆಯಂತೆ ಇರಬೇಕು. ವಿಚಾರ ಕಾರ್ಯಕ್ರಮ ಮುಖ್ಯವಾಗಿದ್ದು ಅದರ ಸುತ್ತ ಪ್ರದರ್ಶನದ ಕಾರ್ಯಕ್ರಮಗಳು ನಡೆಯುವಂತಾಗಬೇಕು. ಆದ್ದರಿಂದ ಎಲ್ಲವೂ ಕಾಲೋಚಿತವಾಗಿರಬೇಕು. ಕಾರ್ಯಕ್ರಮಗಳನ್ನು ಹೊತ್ತಿಗೆ ಸರಿಯಾಗಿ ನಡೆಸಬೇಕು. ಕಾಂಗ್ರೆಸ್ಸಿನ ಹೊತ್ತಿಗೆ ಎಲ್ಲ ಸಮ್ಮೇಲನಗಳನ್ನೂ ಕೂಡಿಸುವುದರಿಂದ ರಾಷ್ಟ್ರೀಯ ಉದ್ದೇಶ

ಏನೂ ಸಫಲವಾಗುವುದಿಲ್ಲ. ಕಾಂಗ್ರೆಸ್ಸಿಗೆ ಅದಕ್ಕೆ ಪೋಷಕವಾದ ಸಮ್ಮೇಲನಗಳು ಮಾತ್ರವೇ ನಡೆಯಬೇಕೆಂದು ನನ್ನ ಅಭಿಪ್ರಾಯ. ಅಧ್ಯಕ್ಷ ಸಭ ಅವರ "ಸಚಿವ ಮಂಡಲವು ಕಾಂಗ್ರೆಸ್ ಅಲ್ಲದೆ ಬೇರೆ ಯಾವುದಕ್ಕೂ ಗಮನ ಕೊಡುವಂತೆ ಇರಬಾರದು. ನನ್ನ ವೇಳೆಯ ಮೇಲೆ ಬೇರೆ ಯಾವ ಭಾರವೂ ಬೀಳದೆ ಇದ್ದಿದ್ದರೆ, ನನ್ನ ಮೇಲೆ ಹೊರಿಸಿದ ಹೊಣೆಯನ್ನು ಮತ್ತಷ್ಟು ಗಮನಕೊಟ್ಟು ಮಾಡಬಹುದಾಗಿತ್ತು. ನನಗೆ ಧ್ಯಾನ, ಮನನ ಮಾಡಿಕೊಳ್ಳಲು ಒಂದು ಗಳಿಗೆಯೂ ಬಿಡುವು ಸಿಗಲಿಲ್ಲ. ಮತದಾನ ಸೂತ್ರವನ್ನು ಮತ್ತಿಷ್ಟು ಸಫಲಗೊಳಿಸಲು ನನಗೆ ಸಾಧ್ಯವಾಗಲಿಲ್ಲ. ಅದರ ಮನನವೇ ಆಗಲಿಲ್ಲ. ಇತರ ಸಮ್ಮೇಳನಗಳ ವ್ಯವಸ್ಥಾಪಕರು ತಮಗೆ ಸಂಬಂಧಿಸಿದ ಕಾರ್ಯಭಾರವನ್ನು ಬಹಳ ಹಗುರವಾಗಿ ನೋಡುತ್ತಾರೆ. ಇದು

ಒಂದು ಸಂಪ್ರದಾಯವಾಗಿಬಿಟ್ಟಿದೆ. ಆದ್ದರಿಂದ ಈಗ ಸಮ್ಮೇಳನಗಳನ್ನು ನಡೆಸುವುದು ರೂಢಿಯಾಗಿದೆ, ವರ್ಷ ವರ್ಷವೂ ತಮ್ಮ ಸಾಮರ್ಥ್ಯವನ್ನು ಹೀಗೆ ಪೋಲು ಮಾಡಬಾರದೆಂದು ಬೇರೆ ಬೇರೆ ಸಂಸ್ಥೆಗಳ ಕೆಲಸಗಾರರನ್ನು ನಾನು ಆಗ್ರಹಪೂರ್ವಕವಾಗಿ ಬೇಡುತ್ತೇನೆ.

ಸ್ಥಳೀಯ ಕಲೆ ಕೈಗಾರಿಕೆಗಳ ಪ್ರದರ್ಶನ. ವರ್ಷ ವರ್ಷವೂ ಅಭಿವೃದ್ಧಿ ಹೊಂದುತ್ತ ಹೋಗಬೇಕು; ಸಾವಿರಾರು ಜನ ಸಂತೋಷ ಪಟ್ಟಿರಬೇಕು. ಸಂಗೀತ ಸಮ್ಮೇಲನ, ನಮ್ಮ ರಾಷ್ಟ್ರೀಯ ಕೈಗಾರಿಕೆಯ ವಿನಾಶ, ಅದನ್ನು ಪುನರಜ್ಜೀವನಗೊಳಿಸುವ ಮಾರ್ಗಗಳು, ಈ ಗ್ಗೆ ತೋರಿಸಿದ ಯಕ್ಷಿಣಿ ದೀಪದ ಪ್ರದರ್ಶನ ತುಂಬಾ ಚೆನ್ನಾಗಿತ್ತು, ಬೋಧಪ್ರದ , ಯೋಗ್ಯ ಮನೋರಂಜಕವಾಗಿತ್ತು. ಈ ವ್ಯವಸ್ಥೆಯನ್ನು ವಿಚಾರಪೂರ್ವಕ ಪದ್ಧತಿಯ ಪ್ರಕಾರ ಮಾಡಿದ ಶ್ರೀ ಸತೀಶಬಾಬುವಿಗೆ ನನ್ನ ಅಭಿನಂದನೆ. ನೂಲುವ ಸ್ಪರ್ಧೆಯೂ ವಾರ್ಷಿಕ ಕಾರ್ಯಕ್ರಮ ವಾಗಬೇಕು, ಸ್ಪರ್ಧೆಗೆ ಬಂದ ಸ್ಪರ್ಧಾಳುಗಳ ಸಂಖ್ಯೆ, ಫಲಿತಾಂಶದ ಮಹತ್ವ, ದಾನಿಗಳ ಸಂಖ್ಯೆ ಇವೆಲ್ಲವೂ ಇದರ ಜನಪ್ರಿಯತೆಯ ದ್ಯೋತಕ. ಈ ನೂಲುವ ಚಳವಳಿಯೂ ಹೆಂಗಸರನ್ನು ತಮ್ಮ ಏಕಾಂತವಾಸದಿಂದ ಹೊರಬರುವಂತೆ ಮಾಡಿದೆ. ಬೇರೆ ಯಾವುದೂ ಹೀಗೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. 11 ಮಂದಿ ಗೆದ್ದವರಲ್ಲಿ 4 ಜನ ಮಹಿಳೆಯರು, ವಿಶ್ವವಿದ್ಯಾನಿಲಯದ ಯಾವ ಪದವಿಯೂ ಕೊಡಲಾರದ ಗೌರವ, ಆತ್ಮವಿಶ್ವಾಸಗಳನ್ನು

ಇದು ಅವರಿಗೆ ಕೊಟ್ಟಿದೆ. ಗಂಡಸರು ಹೇಗೋ ತಾವೂ ಹಾಗೆಯೇ. ಅವರ ಸಕ್ರಿಯ ಸಹಾಯವೂ ಅಷ್ಟೇ ಅನಿವಾರ್ಯ





ಎಂಬುದನ್ನು ಅರಿತುಕೊಳ್ಳುತ್ತಿದ್ದಾರೆ. ಗಂಡಸರಿಗಿಂತ ಹೆಚ್ಚಲ್ಲದಿದ್ದರೂ, ಅವರಷ್ಟೇ ಸಹಾಯ ತಮ್ಮಿಂದ ಆಗಬಲ್ಲದು ಎಂದು ಅರಿತುಕೊಳ್ಳುತ್ತಿದ್ದಾರೆ.

ಬ್ರಾಹ್ಮಣ ಹುಡುಗರ ಭಂಗೀ ಕೆಲಸ:

ಇದನ್ನು ಮುಗಿಸುವ ಮೊದಲು ಒಂದು ಮಾತನ್ನು ಹೇಳದೇ ಬಿಡಬಾರದು. ಹೆಚ್ಚಾಗಿ ಬ್ರಾಹ್ಮಣ ಸ್ವಯಂ ಸೇವಕರು – ಸುಮಾರು 75 ಜನ – ಕಾಂಗ್ರೆಸ್ ಶಿಬಿರದಲ್ಲಿ ಸ್ವಚ್ಛತೆಯ ಕೆಲಸವನ್ನು ಮಾಡಿದರು. ಪೌರಸಭೆಯ ಭಂಗಿಗಳನ್ನೂ ಕರೆಸಿದ್ದರು. ಅವರ ಜೊತೆಗೆ ಈ ಸ್ವಯಂ ಸೇವಕರೂ ಬೇಕೆನಿಸಿತು. ಈ ತಂಡಕ್ಕೆ ನಾಯಕರು ಕಾಕಾ ಕಾಲೇಲ್ಕರರು. ಈ ತಂಡವನ್ನು ಏರ್ಪಡಿಸದೇ ಇದ್ದಿದ್ದರೆ ಈ ಕೆಲಸ ಇಷ್ಟು ಸಮರ್ಪಕವಾಗಿ ಆಗುತ್ತಿರಲಿಲ್ಲ ಎಂದು ಕಾಕಾ ನನಗೆ ಹೇಳಿದರು. ಸ್ವಯಂ ಸೇವಕರೆಲ್ಲರೂ ಬಹಳ ಅಕ್ಕರೆಯಿಂದ ಕೆಲಸ ಮಾಡಿದರೆಂದು ಅವರು ನನಗೆ ಹೇಳಿದರು. ಸಾಮಾನ್ಯವಾಗಿ ಯಾರೂ ಒಪ್ಪಿಕೊಳ್ಳದೇ ಇರುವ ಈ ಕೆಲಸಕ್ಕೆ ಅವರಲ್ಲಿ ಒಬ್ಬರೂ ಸಹ ಸ್ವಲ್ಪವೂ ಹಿಂದೆಗೆಯಲಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಇದು ಅತಿ ಶ್ರೇಷ್ಠ ಕಾರ್ಯ. ಸ್ವಚ್ಛತೆಯ ಕಾರ್ಯವೇ ಎಲ್ಲ ಸ್ವಯಂ ಸೇವಕ ತರಬೇತಿಗೂ ತಳಹದಿಯೆಂದು ಭಾವಿಸಬೇಕು.

ಗಾಂಧೀಜಿ 8–1–1925ರ ಯಂಗ್ ಇಂಡಿಯಾದಲ್ಲಿ, ಬೆಳಗಾಂವಿಯ ಬಗ್ಗೆ ಬರೆದ ಎರಡನೆಯ ಲೇಖನ ಈ ಮುಂದಿನಂತಿದೆ.

ನಾಮಧಾರಿಗಳು: ಎಲ್ಲರನ್ನೂ ಅಂದರೆ ದೊಡ್ಡವರನ್ನೂ, ಚಿಕ್ಕವರನ್ನೂ ಕೂಡಿಯೇ ಕಂಡು ಅವರಿಗೆ ಸಮಾಧಾನ ಕೊಡುವುದು ತುಂಬಾ ಕಷ್ಟವಾಯಿತು. ನಾಮಧಾರಿ ಸೀಖರು ಒಂದು ಕಂತೆ ಕಾಗದಗಳನ್ನು ತಂದು ಅಕಾಲಿಗಳ ವಿರುದ್ಧ ತಮ್ಮ ದೂರನ್ನು ನಾನು ಗಮನಿಸಬೇಕು ಎಂದು ಬಯಸಿದರು. ಅವರು ತೋರಿಸಿದ ಮರ್ಯಾದೆ, ಅವರಿಗಿದ್ದ ಸಹನೆ, ನನ್ನ ಅನಿಚ್ಛೆಯನ್ನು ಹೊಡದೋಡಿಸಿತು. ಅವರ ವಿಷಯಕ್ಕೆ ಗಮನ ಕೊಡುವುದು ಅನಿಚ್ಛೆಗಿ0ತಲೂ ನನ್ನ ಅಸಾಮರ್ಥ್ಯಕ್ಕೆ ಸೇರಿತ್ತು. ಅವರು ತೋರಿದ ಮಾನ ಮರ್ಯಾದೆಗೆ ತಕ್ಕಂತೆ ಸಮಯಕೊಡಲು ನನ್ನಿಂದಾಗಲಿಲ್ಲ. ನಾನು ಪೂರ್ಣ ಅಸಹಾಯ ಸ್ಥಿತಿಯಲ್ಲಿ ಇದ್ದುದನ್ನು ಅವರೇ ನೋಡಿದರು. ಅವರಿಗೆ ನಾನು ಕೊಟ್ಟ ಸಮಾಧಾನ ಒಂದೇ. ಮುಂದೆ ಲಾಹೋರಕ್ಕೆ ಬಂದಾಗ ಅವರ ಕಾಗದ ಪತ್ರಗಳನ್ನೆಲ್ಲ ನೋಡಿ ಕಾಂಗ್ರೆಸ್ ಅವರಿಗೆ ಏನೂ ಅನ್ಯಾಯ ಮಾಡದಂತೆ ನೋಡುತ್ತೇನೆ ಎಂದೆ. ಅಕಾಲಿಗಳ ವಾದಸರಣಿ ಮತ್ತು ಧೈರ್ಯ ನನಗೆ ಮೆಚ್ಚುಗೆ ಆದರೂ, ಅವರು ಯಾವುದೇ ಬಗೆಯ ಅನ್ಯಾಯವನ್ನೂ ದಬ್ಬಾಳಿಕೆಯನ್ನೂ ಮಾಡಿದರೆ ಅದನ್ನು ಎತ್ತಿ ಹಿಡಿಯಲಾರೆ ಎಂದೆ. ಸರದಾರ ಮಂಗಳಸಿಂಗರು ನನ್ನ ಭಾವನೆಗಳನ್ನು ಪ್ರತಿಧ್ವನಿಸಿ, ಅಕಾಲಿಗಳಿಗೆ ಕೇವಲ ನೈತಿಕ ಆಧಾರದ ಮೇಲೆ ಗುರುದ್ವಾರಗಳನ್ನು ಸುಧಾರಣೆ ಮಾಡುವುದೊಂದೇ ಉದ್ದೇಶ ಎಂದರು.

ಬೌದ್ಧರ ಪರವಾಗಿ:

ಸಿಲೋನಿನ ಶ್ರೀ ಪೆರೆರಾ, ಬುದ್ಧಗಯಾ ದೇವಾಲಯದ ಬಗ್ಗೆ ಕಾಂಗ್ರೆಸ್ ಆಸಕ್ತಿ ತೋರಿಸುವಂತೆ ಮಾಡಿರಿ ಎಂದರು. ಈಗ ಕೆಲವು ವರ್ಷಗಳಿಂದ ಬುದ್ಧ ಗಯಾದಲ್ಲಿರುವ ಐತಿಹಾಸಿಕ ಮಹಾದೇವಾಲಯವು ಪುನಃ ಬೌದ್ಧರಿಗೆ ಸೇರಬೇಕೆಂಬ ಚಳವಳಿ ನಡೆಯುತ್ತಿದೆ ಎಂಬುದು ವಾಚಕರ ನೆನಪಿಗೆ ಬರಬಹುದು. ಆದರೆ ಅದು ಪ್ರಬಲವಾಗಿಲ್ಲ.

ಕಾಕಿನಾಡದ ಕಾಂಗ್ರೆಸ್ ಅಧಿವೇಶನದಲ್ಲಿ ಈ ವಿಷಯದ ಬಗೆ ವಿಚಾರಿಸಿ ವರದಿ ಮಾಡುವಂತೆ ಬಾಬೂ ರಾಜೇಂದ್ರ ಪ್ರಸಾದರನ್ನು ನೇಮಿಸಲಾಯಿತು. ಇಲ್ಲಿಯವರೆಗೆ ಅವರು ಹಾಗೆ ಮಾಡಲು ಆಗಿಲ್ಲ. ಕಾಂಗ್ರೆಸ್ ಸಪ್ತಾಹದಲ್ಲಿ ಬೆಳಗಾಂವಿಗೆ ಸಿಲೋನಿನ ಬೌದ್ಧನಿಯೋಗ ಒಂದು ಕಾಂಗ್ರೆಸ್ಸಿನ ಮುಂದೆ ಈ ವಿಷಯವನ್ನು ನಿವೇದಿಸಿ ಅನೇಕ ಕಾಂಗ್ರೆಸ್ ನಾಯಕರನ್ನು ನೋಡಿ. ಆಮೇಲೆ ಶ್ರೀ ಪೆರೆರಾ ನನ್ನನ್ನು ನೋಡಿದರು. ಈ ವಿಷಯದ ಬಗ್ಗೆ ನನಗೆ ಆಗಲೇ ಮನವರಿಕೆ ಆಗಿದ್ದುದರಿಂದ ಅವರು ಇದನ್ನೆಲ್ಲ ನನ್ನ ಮುಂದೆ ತಿಳಿಸಿಹೇಳಬೇಕಾದ ಅಗತ್ಯವೂ ಇರಲಿಲ್ಲ. ಇಲ್ಲೂ ನಾನೇನು ಮಾಡಲು ಸಾಧ್ಯ? ನಾನು ಮೊದಲೇ ಒಪ್ಪಿಕೊಂಡದ್ದಕ್ಕಿಂತ ಹೆಚ್ಚು ಯಾವುದಕ್ಕೂ ನನಗೆ ಸಮಯ ಇರಲಿಲ್ಲ. ಆದರೆ ಶ್ರೀ ಪೆರೆರಾ ಇಲ್ಲ ಎನಿಸಿಕೊಳ್ಳುವವರಲ್ಲ.

ಈ ವಿಷಯದಲ್ಲಿ ಅವರಿಗಿದ್ದಷ್ಟು ಶ್ರದ್ಧೆ ನನಗೂ ಇದೆ ಎಂದು ಅವರಿಗೆ ಹೇಳಿದೆ. ಈ ದಿಶೆಯಲ್ಲಿ ಕಾಂಗ್ರೆಸ್ ಅವರಿಗೆ ಹೆಚ್ಚು ಪ್ರಯೋಜನಕಾರಿ ಆಗಲಿಕ್ಕಿಲ್ಲ ಎಂದೆ.

ಅವರು ಬಹಳ ಒತ್ತಾಯ ಮಾಡಿದರು. ಆದ್ದರಿಂದ ವಿಷಯ ನಿಯಾಮಕ ಸಮಿತಿಯಲ್ಲಿ ಅವರನ್ನು ಮಾತನಾಡಗೊಡಬೇಕು, ಅಲ್ಲಿ ನನ್ನ ವಾದವನ್ನು ಅವರು ತಿರಸ್ಕರಿಸಿದರೂ ಅಡ್ಡಿ ಇಲ್ಲ ಎಂದು ಹೇಳಿದೆ .

ಈ ಬಗ್ಗೆ ನನ್ನಿಂದ ಮಾತು .ಬೋಧ ಶ್ರೀ ಪೆರೆರಾಗೆ ಅಷ್ಟು ಆತ್ಮವಿಶ್ವಾಸ ಇತ್ತು. ಅವರ ಮಧುರ ವರ್ತನೆಯು, ಅವರ ಸಂಕ್ಷಿಪ್ತ ಮಧುರ ಭಾಷಣವೂ ಸಮಿತಿಯಲ್ಲಿ ಒಳ್ಳೆಯ ಪ್ರಭಾವ ಬೀರಿ, ಆಗಲೇ ಅಲ್ಲೇ ಆ ವಿಷಯವನ್ನು ತೀರ್ಮಾನಿಸುವಂತೆ ಮಾಡಿತು. ಆದರೆ ಸ್ವಲ್ಪ ಚರ್ಚೆಮಾಡಿದ ಮೇಲೆ ಶ್ರೀ ಪೆರೆರಾಗೆ ಕಾಂಗ್ರೆಸ್ ಸಮಿತಿ ಏನೂ ಸಹಾಯ ಮಾಡಲಾರದೆಂದು ಕಂಡುಬಂದಿತು. ಕಾರಣ ತಮ್ಮ ಪ್ರತಿನಿಧಿಯ ವರದಿ ಅದಕ್ಕಿನ್ನೂ ಬಂದಿರಲಿಲ್ಲ. ಹಿಂದಿನ ಅಧಿವೇಶನದಲ್ಲಿ ವಿಸ್ತಾರವಾಗಿ ಈ ವಿಷಯವನ್ನು ಚರ್ಚೆ ಮಾಡಿ, ಮತಭೇದ ಕಂಡು ಬಂದದ್ದರಿಂದ ಅಲ್ಲಿಗೇ ಕೈಬಿಟ್ಟಿತ್ತು. ಆದ್ದರಿಂದ ಸಮಿತಿ ಮಾಡಬಹುದಾಗಿದ್ದದ್ದು, ರಾಜೇಂದ್ರಬಾಬು ತಮ್ಮ ವಿಚಾರಣೆಯನ್ನು ಬೇಗ ಮುಗಿಸಿ ಈ ತಿಂಗಳ ಕೊನೆಯೊಳಗಾಗಿ ವರ್ಕಿಂಗ್ ಕಮಿಟಿಗೆ ತಮ್ಮ ವರದಿಯನ್ನು ಒಪ್ಪಿಸಬೇಕು ಎಂಬ ತೀರ್ಮಾನ. ಈ ದೇವಾಲಯ ಬೌದ್ಧರ ಕೈಯಲ್ಲೇ ಇರಬೇಕು ಎಂಬುದಕ್ಕೆ ಸಂದೇಹ ಇಲ್ಲ. ಕಾನೂನಿನ ತೊಡಕುಗಳು ಬೇಕಾದಷ್ಟು ಬರಬಹುದು. ಅವನ್ನು ನಿವಾರಿಸಿಕೊಳ್ಳಲೇ ಬೇಕು. ಅಲ್ಲಿ ಪ್ರಾಣಿಬಲಿ ನಡೆಯುತ್ತಿದೆ ಎಂಬ ಮಾತು ನಿಜವಾದರೆ, ನಿಜಕ್ಕೂ ಅದು ಅಧಾರ್ಮಿಕವೇ. ಬೌದ್ಧರ ಮನಸಿಗೆ ನೋವಾಗುವಂತೆ ಅಲ್ಲಿ ಪೂಜೆ ನಡೆಯುತ್ತಿದ್ದರೆ ಅದು ಕೂಡ ಸರಾಗ. ನ್ಯಾಯವಾದ ಧರ್ಮದರ್ಶಿಗಳಿಗೆ ದೇವಾಲಯ ಹೀರುವಂತೆ ಸಹಾಯ ಮಾಡುವುದು ನಮಗೆ ಹೆಮ್ಮೆ ಎನಿಸಬೇಕು. ರಾಜೇಂದ್ರಬಾಬು ಈ ವಿಷಯದ ಬಗ್ಗೆ ಇರುವ ಎಲ್ಲ ಸಾಹಿತ್ಯವನ್ನೂ ಶೇಖರಿಸಿ, ಬೌದ್ಧ ವಾರಸುದಾರರಿಗೆ ಪರವಾಗಿ ವಾದಿಸುವ ಎಲ್ಲರಿಗೂ ಮಾರ್ಗದರ್ಶಕ ಆಗುವಂಥ ಒಂದು ವರದಿಯನ್ನು ಸಿದ್ಧಮಾಡುತ್ತಾರೆಂದು ನಂಬಿದ್ದೇನೆ. ಶ್ರೀ ಪೆರೆರಾ ಕೂಡ ಭಾರತದಲ್ಲೇ ಇದ್ದು ರಾಜೇಂದ್ರಬಾಬುಗೆ ನೆರವಾಗಲಿ ಎಂದು ಬಯಸುತ್ತೇನೆ.

ಖಾದೀ ಅರಮನೆ:

ಸ್ವಾಗತ ಸಮಿತಿಯ ಅಧ್ಯಕ್ಷರಾದ ಗಂಗಾಧರರಾಯರು ಖಾದಿಯ ಅರಮನೆಯ ಬಗ್ಗೆ ಒಂದು ವಿವರಣೆ ಕೊಟ್ಟರು. ಗಾಂಧೀಜಿಗಾಗಿ ನಿರ್ಮಿಸಿದ ಗುಡಿಸಲಿಗೆ 350 ರೂಪಾಯಿ ವೆಚ್ಚ ಆಯಿತಂತೆ. ಗುಡಿಸಲು ಸಾದಾ ರೀತಿಯದು. ಆದರೆ ಅದು ಸುಂದರವಾಗಿಯೂ ಇರುವಂತೆ ಸ್ವಲ್ಪ ಅಲಂಕಾರ ಮಾಡಿತ್ತು. ಗಾಂಧೀಜಿಗೆ ಈ ಅಲಂಕಾರ ಸರಿ ಬೀಳಲಿಲ್ಲ. ಗುಡಿಸಲಿಗೆ ಉಪಯೋಗಿಸಿದ್ದ ಸಾಮಾನು ಎಲ್ಲವೂ ಮತ್ತೆ ಮಾರಾಟಮಾಡಲು ಬರುವಂಥದು.

ಆದರೂ ವಲ್ಲಭಭಾಯಿ ಹಾಗೆಯೆ ಗಂಗಾಧರರಾಯರೂ ಆಡಂಬರದ ಚಪಲಕ್ಕೆ ಬಲಿಬಿದ್ದರು ಎಂದು ಗಾಂಧೀಜಿ ಹೇಳಿದರು. ಈ ಅರಮನೆಗೆ ವೆಚ್ಚವಾದ 350 ರೂಪಾಯಿನಲ್ಲಿ 250 ರೂಪಾಯಿನ ಸಾಮಾನು ಮಾರಾಟವಾಯಿತು. ಇದನ್ನು ಮುಂದೆ ಅಭಿಮಾನಪೂರ್ವಕವಾಗಿ ಗಂಗಾಧರರಾಯರು ಗಾಂಧೀಜಿಗೆ ತಿಳಿಸಿ, ಅವರ ಟೀಕೆ ತಪ್ಪೆಂದು ಮನಗಾಣಿಸಿಕೊಟ್ಟರು. ದೀಪದ ವ್ಯವಸ್ಥೆ ಅತ್ಯುತ್ತಮವಾಗಿತ್ತು ಎಂದು ಗಾಂಧೀಜಿ ಬರೆದರಲ್ಲ. ಅದಕ್ಕೆ ಕಾರಣ

ವಿದ್ಯುದ್ದೀಪದ ಜೊತೆಗೆ ಅವಶ್ಯವಿದ್ದಲ್ಲಿ ಕಿಟ್ಸನ್ ಮತ್ತು ಮೆಟ್ರೋಮ್ಯಾಕ್ಸ್ ದೀಪಗಳನ್ನು ಹಚ್ಚಿದ್ದರು. ಅಧಿವೇಶನ ಮುಗಿದಮೇಲೆ ಅವನ್ನೂ ಮಾರಿದರು. ನೂರಕ್ಕೆ 90ರಷ್ಟು ಹಣ ಹಿಂತಿರುಗಿ ಬಂತು . ವಿದ್ಯುತ್ತನ್ನೇ ಅವಲಂಬಿಸಬಾರದು, ನಡುವೆ ಕೆಟ್ಟರೆ ಏನು ಗತಿ ಎಂದು ಈ ಏರ್ಪಾಟು ಮಾಡಿತ್ತು. ಅತ್ಯಗತ್ಯ ಸ್ಥಾನಗಳಲ್ಲಿ ಮಾತ್ರ ವಿದ್ಯುದ್ದೀಪ. ಈ ಕೆಲಸವನ್ನು ಯಾಣಗಿ ಜೀವಣರಾಯರಿಗೆ ಒಪ್ಪಿಸಲಾಗಿತ್ತು . ಮಂಟಪಗಳನ್ನೂ , ಗುಡಿಸಲುಗಳನ್ನೂ ಕಟ್ಟುವ ಕೆಲಸ ಅಗ್ಗದಲ್ಲಾಯಿತು. ಆದರೂ ಹೊರಗೆ ನೋಡಲು ಬಹಳ ಅಲಂಕಾರ ಆಗಿದ್ದವು. ಸ್ವಯಂ ಸೇವಕರ ವಿಭಾಗವೂ ಒಂದು ಮುಖ್ಯ ವಿಭಾಗ. ಡಾ. ಹರ್ಡೀಕರರ ಹಿಂದೂಸ್ತಾನೀ ಸೇವಾದಳ ಈ ಕೆಲಸವನ್ನು ಬಹಳ ಸಮರ್ಪಕವಾಗಿ ಮಾಡಿ ಗಾಂಧೀಜಿಯ ಮೆಚ್ಚುಗೆಗೆ ಪಾತ್ರವಾಯಿತು. ಶೌಚಕೂಪ, ಮೂತ್ರದಮನೆ, ನೀರಿನ ಬಚ್ಚಲುಗಳ ಸ್ವಚ್ಛತೆಯ ಹೊಣೆಗಾರಿಕೆ ಸೇವಾದಲದ ಒಂದು

ಗುಂಪಿಗೆ ವಹಿಸಿತ್ತು. ಕಾಕಾ ಕಾಲೇಲ್ಕರರ ಸತ್ಯಾಗ್ರಹ ಆಶ್ರಮದ ಅನುಭವ ಲಾಭ ಈ ಗುಂಪಿಗೆ ಸಿಕ್ಕಿದ್ದರಿಂದ ಈ ಕೆಲಸ ಬಹಳ ಚೊಕ್ಕಟ್ಟವಾಯಿತು. ಇದ್ದ ಕೆಲಸವನ್ನು ಪರಿಶೀಲಿಸಲು ಗಾ0ಧೀಜಿ ನಿತ್ಯವೂ ಬೆಳಗ್ಗೆ ಸ್ವಯಂ ಹೋಗುತ್ತಿದ್ದರು. ಶಿಬಿರದಲ್ಲಿ ಒಂದು ಹಂಗಾಮಿ ಆಸ್ಪತ್ರೆಯೂ ಇತ್ತು. ಒಬ್ಬ ರೋಗಿಯೂ ಈ ಆಸ್ಪತ್ರೆ ಸೇರಲಿಲ್ಲ. ಅಷ್ಟರಮಟ್ಟಿಗೆ ಅಧಿವೇಶನ ಆರೋಗ್ಯಪೂರ್ಣವಾಗಿತ್ತು. ಉತ್ಕಲದ ನಾಯಕರು ಗೋಪಬಂಧುದಾಸ ಬರುವಾಗಲೇ ಜ್ವರದಿಂದ ಬಂದರು. ಬೆಳಗಾಂವಿಗೆ ಬಂದ ಮರುದಿನವೇ ಅವರಿಗೆ ಗುಣವಾಯಿತು.

ಅಡಿಗೆ ಊಟದ ವ್ಯವಸ್ಥೆಯನ್ನೂ ಗುತ್ತಿಗೆ ಕೊಡದೆ ಸ್ವಾಗತ ಸಮಿತಿಯೇ ವಹಿಸಿಕೊಂಡಿತು. ಹೈದರಾಬಾದಿನ ಪಿ ವಾಮನ ನಾಯಕರು ಒಳ್ಳೆಯ ಅಡಿಗೆಯವರನ್ನು ಕಳಿಸಿಕೊಟ್ಟಿದ್ದರು. ಬೆಳಗಾಂವಿ ಜಿಲ್ಲೆಯಲ್ಲಿ ಬೇಕಾದಷ್ಟು ಬೆಣ್ಣೆ. ಬೆಳಗಾಂವಿಯಲ್ಲಿ ತುಪ್ಪದ ವ್ಯಾಪಾರ ಹೆಚ್ಚು. ಸಾಕಷ್ಟು ಬೆಣ್ಣೆ ಕೊಂಡು, ತುಪ್ಪ ಕಾಸಿ ಇಟ್ಟದ್ದರಿಂದ ವೆಚ್ಚ ಸ್ವಲ್ಪ; ಕೆಲಸ ಚೆನ್ನಾಯಿತು. ಬೆಳಗಾವಿಯಲ್ಲಿ ತೋಟಗಾರಿಕೆಯೂ ಹೆಚ್ಚು. ಉತ್ತಮವಾದ ಹೊಸ ಹೊಸ ಕಾಯಿ ಪಲ್ಲೆಗಳನ್ನೂ ಆ ತೋಟಗಾರರುಅಭಿಮಾನಪೂರ್ವಕವಾಗಿ ಕೊಟ್ಟರು. ಸಾಂಗಲಿಯಿಂದ ಹಾಲು ಕೊಂಡು ಅಲ್ಲಿಯೇ ಹೆಪ್ಪು ಹಾಕಿ, ಮೊಸರನ್ನು ತರುವ ವ್ಯವಸ್ಥೆ ಮಾಡಿತ್ತು. ಆ ಮೊಸರೂ ತುಂಬ ಒಳ್ಳೆಯದು ಮತ್ತು ಗಟ್ಟಿ ಸಾಕಷ್ಟು ಸಿಗುತ್ತಿತ್ತು. ಶ್ರೀಖಂಡದ ಭೋಜನಕ್ಕಂತೂ ಕೊರತೆಯೇ ಇರಲಿಲ್ಲ. ಆ ವಿಭಾಗದಲ್ಲಿ ಸುಮಾರು 200 ಜನ ಮಹಿಳಾ ಸ್ವಯಂ ಸೇವಿಕೆಯರು ಕೆಲಸ ಮಾಡಿದ್ದರಿಂದ ಚಟ್ನಿ , ಕೋಸಂಬರಿ, ಪಳದ್ಯ, ಉಪ್ಪಿನಕಾಯಿ ಮುಂತಾದವನ್ನೂ ಮಾಡಿಸಿದರು. ಈ ಊಟಕ್ಕೆ ಸ್ವಚ್ಛ ಸುಂದರ ಎಲೆ ಮತ್ತು ದೊನ್ನೆ, ಬಾಡು ಕಲಾಮಯ ಆಸನ, ಅದರ ಸುತ್ತ ತೆಂಗೋತೆ .

ಅಡಿಗೆ ಎಷ್ಟೇ ಚೆನ್ನಾಗಿದ್ದರೂ ಬಡಿಸುವವರು ಚೆನ್ನಾಗಿರದೇ ಹೋದರೆ ಎಲ್ಲವೂ ಕೆಟ್ಟು ಹೋಗುತ್ತದೆ. ಇದಕ್ಕಾಗಿ ಹಿಂದೆ ಆದ ಕಾಂಗ್ರೆಸ್ ಅಧಿವೇಶನಗಳಲ್ಲಿ ಅಡಿಗೆ ಚೆನ್ನಾಗಿ ಇದ್ದರೂ ಸ್ವಚ್ಛತೆ ಕಡಿಮೆ. ಇದರಿಂದ ಊಟದ ಪಂಕ್ತಿಯಲ್ಲಿ ಗಲಾಟೆ ಹೆಚ್ಚು. ಬಡಿಸುವದೂ ಕೂಡ ಬಡಾ ಕಲೆ. ಈ ಕಲೆಯು ಈ ಅಧಿವೇಶನದಲ್ಲಿ ಚೆನ್ನಾಗಿ ಪ್ರದರ್ಶಿತವಾಯಿತು. ಊಟ ಎರಡೂ ಹೊತ್ತಿನದು ಸೇರಿ ಒಂದೂವರೆ ರೂಪಾಯಿ ಆಯಿತು. ಪಾತ್ರೆಗಳನ್ನು ಸಹ ಮತ್ತೆ ಹೊಸದಾಗಿ ಕಾಣುವಂತೆ ಮಾಡಿ ಮಾರಲಾಯಿತು. ಯಾವ ವಿಧದಲ್ಲಿಯೂ ನಷ್ಟವಾಯಿತು ಎನ್ನುವ ಹಾಗೆ ಇರಲಿಲ್ಲ.

"ಮೈಸೂರು ಸಂಸ್ಥಾನದಿಂದ ಸಾಕಷ್ಟು ಸಹಾಯ ದೊರೆಯಿತು. ಭಾರತದ ರಾಜಕಾರಣದಲ್ಲಿ ಅವರು ಪ್ರತ್ಯಕ್ಷವಾಗಿ ಭಾಗವಹಿಸಿದ ಪ್ರಸಂಗ ಇದೇ ಮೊದಲನೆಯದು. ಅದರಿಂದ ಅವರಿಗೆ ಬಹಳ ಉತ್ಸಾಹ ಉಂಟಾಯಿತು. ಈ ಕಾಂಗ್ರೆಸಿನ ಕಾರಣದಿಂದ ಬ್ರಿಟಿಷರು ಕರ್ನಾಟಕಕ್ಕೆ ಹೋಗಿಬರುವದು ಸಹ ಈಗಿನಿಂದಲೇ ಪ್ರಾರಂಭವಾಯಿತು. 1930ರ ಮತ್ತು ಅನಂತರದ ಚಳವಳಿಯಲ್ಲಿ ಅಲ್ಲಿಯ ಜನರು ಸಾಕಷ್ಟು ಭಾಗ ತೆಗೆದುಕೊಂಡರು. ಖಾದೀ ಕಾರ್ಯಕ್ಕೂ ತುಂಬಾ ಸಹಾಯಮಾಡಿದರು. ಅಂದಿನ ಮೈಸೂರು ಸಂಸ್ಥಾನದ ಸರಕಾರದವರೂ ಬೆಳಗಾಂವಿ ಕಾಂಗ್ರೆಸ್ಸಿನ ಪ್ರದರ್ಶನಕ್ಕೆಂದು ತಮ್ಮ ಸಂಗ್ರಹಾಲಯದಲ್ಲಿನ ಕೆಲವು ವಸ್ತುಗಳನ್ನು ತಮ್ಮ ವೆಚ್ಚದಿಂದ ಕಳಿಸಿದ್ದರು. ಅದರಲ್ಲಿ ಬೆಲೆಯುಳ್ಳ ಹಳೆಯ ಬಟ್ಟೆಯ ನಮೂನಿ ಇದ್ದವು . ಅದರಂತೆ ತಮ್ಮ ವೆಚ್ಚದಿಂದ ಸಂಗೀತಗಾರರ, ವಾದ್ಯಗಾರರ, ಭಜಂತ್ರಿಯವರ ಮೇಳವನ್ನೂ ಕಳಿಸಿದ್ದರು.

ಅದರಲ್ಲಿ ವೀಣೆ ನುಡಿಸುವುದರಲ್ಲಿ ಭಾರತದಲ್ಲಿಯೇ ಪ್ರಸಿದ್ದರಾದ ವೀಣೆ ಶೇಷಣ್ಣನವರೂ ಇದ್ದರು. ಅವರಿಗೆ ಸಾಕಷ್ಟು ವಯಸ್ಸು ಆಗಿತ್ತು. ಆದರೂ ಅವರ ವೀಣಾವಾದನ ಕೌಶಲ್ಯವನ್ನು ನೋಡಿ ಎಲ್ಲರೂ ಬೆರಗಾದರು. ಸ್ವತಃ ಗಾಂಧೀಜಿಯವರು ಒಂದೂವರೆ ಗಂಟೆಯ ಹೊತ್ತು ಅವರ ವಾದನವನ್ನು ಏಕಾಗ್ರತೆಯಿಂದ ಕೇಳುತ್ತಿದ್ದರು.

ಸ್ವಾಗತ ಸಮಿತಿಯ ಸಭೆಯಲ್ಲಿ ಕಾಂಗ್ರೆಸ್ ಅಧಿವೇಶನದ ಸ್ಥಳಕ್ಕೆ ಕರ್ನಾಟಕ ಸಾಮ್ರಾಜ್ಯದ ಮುಖ್ಯ ರಾಜಧಾನಿಯಾಗಿದ್ದ ವಿಜಯನಗರದ ಹೆಸರನ್ನೂ ಇಡಬೇಕೆಂದು ನಿರ್ಣಯವಾಯಿತು. ಅದರಂತೆಯೇ ಬೀದಿಗಳಿಗೆ ಆಧುನಿಕ ದೇಶಭಕ್ತರ ಹೆಸರನ್ನಿಡದೇ, ಕರ್ನಾಟಕದ ಇತಿಹಾಸ ಪ್ರಸಿದ್ಧ ಪುರುಷರ ಹೆಸರನ್ನಿಡಲಾಯಿತು. (ಉದಾಹರಣೆಗೆ ವಿದ್ಯಾರಣ್ಯ ಬೀದಿ). ವಿಜಯನಗರದ ವಿರುಪಾಕ್ಷ ಮಂದಿರದ ಪ್ರವೇಶದ್ವಾರದ ಮೇಲೆ ಒಂದು ಎತ್ತರವಾದ ಗೋಪುರ ಇದೆ. ಅದರ ನಿದರ್ಶನ ಎಂದು ಕಾಂಗ್ರೆಸ್ ಡೇರೆಯ ಮಹಾ ದ್ವಾರಕ್ಕೆ ಗೋಪುರವನ್ನು ಮಾಡಿಸುವುದೆಂದು ನಿರ್ಣಯವಾಗಿತ್ತು. ಒಟ್ಟಿನಲ್ಲಿ ಕರ್ನಾಟಕದ ವೈಶಿಷ್ಟವನ್ನು ತೋರಿಸಬೇಕಾಗಿತ್ತು ಎಂದು ಸ್ವಾಗತಾಧ್ಯಕ್ಷರಾದ ಶ್ರೀ ದೇಶಪಾಂಡೆ ಗಂಗಾಧರರಾಯರು ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ.

ಮಹಾದೇವ ದೇಸಾಯಿಯವರು ಬರೆದ ದಿನಚರಿಯಿಂದ ಬೆಳಗಾಂವಿಯ ಕರ್ನಾಟಕ ಕಾಂಗ್ರೆಸಿಗೆ ಸಂಬಂಧಿಸಿದ ಕೆಲವು ಮಾತುಗಳನ್ನು ಎತ್ತಿಕೊಡಲಾಗಿದೆ. "ಬೆಳಗಾಂವಿಯ ಪುಣ್ಯತೀರ್ಥದಲ್ಲಿ" ಎಂಬ ಲೇಖನದಿಂದ ಈ ಮುಂದಿನ ಭಾಗವನ್ನು ಆಯ್ದುಕೊಂಡಿದೆ.

ಬೆಳಗಾಂವಿಯ ನೆನಪು ಪುಣ್ಯತೀರ್ಥದ ರೂಪದಲ್ಲಿಯೇ ಆಗುತ್ತದೆ. ಗಂಗಾಧರ ರಾಯರ ಪ್ರೇಮದಿಂದ ತುಂಬಿದ ವಾತಾವರಣ, ಶಿಕ್ಷಣ ಹಾಗೂ ಆಜ್ಞಾಪಾಲನೆಯ ರಹಸ್ಯವನ್ನು ತಿಳಿದ ಸ್ವಯಂ ಸೇವಕರ ಭಕ್ತಿ, ಹೆಜ್ಜೆ ಹೆಜ್ಜೆಗೂ ಅಹಿಂಸೆಯ ನೆನಪನ್ನು ಕೊಡುವ ಸಾರ. ಹಿಂಸೆಯ ಪರಾಕಾಷ್ಠೆಯನ್ನು ಪ್ರಕಟಿಸುವ ಉದ್ದೇಶದಿಂದ ಸೇರಿದ ಮಹಾಸಮ್ಮೇಳನ.

ಇದೆಲ್ಲ ವಾತಾವರಣವನ್ನು ಪವಿತ್ರ ತೀರ್ಥ ಎನ್ನದೇ ಮತ್ತೇನೆನ್ನಬೇಕು? ಬೆಳಗಾಂವಿಯಲ್ಲಿ ಏನಾದೀತು ಏನು ಆಗಲಿಕ್ಕಿಲ್ಲ ಎಂಬುದಕ್ಕಿಂತ ಹೆಚ್ಚಾಗಿ ಗಾಂಧೀಜಿಯವರು ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಬರುವುದು ಕರ್ನಾಟಕದ ಭಾಗ್ಯ ಎನ್ನಬೇಕು. ಏಳೆಂಟು ದಿನ ಗಾಂಧೀಜಿಯವರ ವಿಚಾರ, ಕಾರ್ಯಗಳಿಂದ ಬೆಳಗಾಂವಿಯ ವಾತಾವರಣವು ಪುನೀತವಾಯಿತು. ಗಾಂಧೀಜಿಗಾಗಿ

ಒಂದು ಸುಂದರ ಖಾದಿ ಕುಟಿಯನ್ನು ಸಿದ್ಧಮಾಡಿದರು. ವಲ್ಲಭಭಾಯಿ, ರಾಜೇಂದ್ರ ಪ್ರಸಾದ,ಶಂಕರ್‌ಲಾಲ, ರೇವಾಶಂಕರ, ರಾಜಗೋಪಾಲಾಚಾರ್ಯರು, ಸರೋಜಿನಿ ನಾಯ್ಡು , ಮೌಲಾನಾ ಶೌಕತ್ ಆಲಿ. ಮೌಲನ ಮಹಮ್ಮದ ಆಲಿ , ಪಂಡಿತ್ ಮೋತೀಲಾಲ, ಚಿತ್ತರಂಜನ ದಾಸ, ಲಾಲಾ ಲಜಪತರಾಯ ಅವರಿವರು ಎನ್ನಲೇಕೆ ಎಲ್ಲ ದೇಶನಾಯಕರೂ ಬಂದಿದ್ದರು. ರಾಜಗೋಪಾಲಾಚಾರ್ಯರು ಶರೀರದಿಂದ ದುರ್ಬಲರು. ಅವರಿಗೂ ಸರೋಜಿನಿ ನಾಯ್ಡು ಅವರಿಗೂ ಬೇರೆ ಏರ್ಪಾಟು ಮಾಡಲಾಗಿತ್ತು."

ಪವಿತ್ರ ತೀರ್ಥದ ಬಾಹ್ಯ ಪಾವನತೆಯನ್ನು ಹೇಳುವದರಲ್ಲಿ ಆಂತರಿಕ ಪಾವನತೆಯನ್ನು ಮರೆಯಲಾಗದು. ಇಲ್ಲಿಗೆ ಬಂದು ನಾಲ್ಕು ದಿನ ಆಯಿತು. ಒಂದು ಗಂಟೆಯೂ ವ್ಯರ್ಥ ವಾಗಲಿಲ್ಲ. ಹಿಂದೆ ಯಾವ ಕಾಂಗ್ರೆಸ್ಸಿನಲ್ಲೂ ಹೀಗೆ ನಡೆದಿರಲಿಲ್ಲ. ಮೊದಲನೆಯ ದಿನ ಮಾತ್ರ ಮಧ್ಯಾಹ್ನ 3 ಗಂಟೆಗೆ ಸೇರಬೇಕಾಗಿದ್ದ ಸಭೆ 5 ನಿಮಿಷ ತಡವಾಗಿ ಸೇರಿತು. ಕಾರಣ ಮೌ.ಮಹಮ್ಮದ ಆಲಿ 5 ನಿಮಿಷ ತಡಮಾಡಿ ಬಂದರು. ಉಳಿದದ್ದೆಲ್ಲ ಎಂದರೆ ಅವರು ಅಧ್ಯಕ್ಷ ಪದವಿಯನ್ನು ಬಿಟ್ಟುಕೊಡುವದು, ಅವರಿಗೆ ಧನ್ಯವಾದ ಕೊಡುವದು ಎರಡೇ ಎರಡು ನಿಮಿಷ. ಕಾಂಗ್ರೆಸ್ಸಿನ ವ್ಯವಸ್ಥೆಯಂತೂ ಬಹಳ ಸೊಗಸಾಗಿತ್ತು. ಎಲ್ಲರಿಗೂ ತೃಪ್ತಿಯಾಯಿತು.

ಒಂದೇ – ಬೆಳಗಾಂವಿಯ ಕೆಂಪು ಮಣ್ಣು ಮಾತ್ರ ಎಲ್ಲರ ಬಟ್ಟೆಗೂ ಬಣ್ಣ ಬಳಿಯಿತು. ಇದೊಂದನ್ನು ಬಿಟ್ಟರೆ ಯಾವುದೂ ಯಾರದೂ ದೂರು ಇರಲಿಲ್ಲ. ದಾರಿಯಲ್ಲಿ ಎಡಗಡೆ ಬಲಗಡೆ ಓಡಾಡುವ ಅಚ್ಚು ಕಟ್ಟು ಸಾವಿರಾರು ಜನರ ಗುಂಪು ನೆರೆದ ದಿನವೂ ಮುರಿಯಲಿಲ್ಲ. ಭಂಗೀ ವಿಭಾಗದಲ್ಲಿ 80 ಜನ ಸ್ವಯಂ ಸೇವಕರು ನಗರಪಾಲಿಕೆಯ ಭಂಗಿಗಳ ಸಹಾಯ ಪಡೆದು ಕೆಲಸ ಮಾಡಿದರು. ಕಾಕಾ ಸಾಹೇಬರ ನೇತೃತ್ವ. ಇದರಲ್ಲಿ ವಿಶೇಷ ಉಲ್ಲೇಖನೀಯ ಮಾತು ಎಂದರೆ ಈ ಸ್ವಯಂ ಸೇವಕರಲ್ಲಿ ಹೆಚ್ಚು ಜನ ಬ್ರಾಹ್ಮಣರು. ನೂಲಬೇಕು ಎಂದು ಬಯಸುವವರಿಗೆ ಚರಖಾ ಮಂಟಪದಲ್ಲಿ ರಾಟೆ ಇದ್ದವು. ಎಲ್ಲಿ ನೋಡಿದರೂ ಖಾದಿಯೇ. ಖಿಲಾಫತ್ ಕಮಿಟಿಯವರೂ ಮುಸಲ್ಮಾನ ಸ್ವಯಂ ಸೇವಕರೇ ಬೇಕು ಎಂದು ಹಟಹಿಡಿಯದೇ ಇದ್ದಿದ್ದರೆ ಇನ್ನೂ ಚೆನ್ನಾಗಿತ್ತು. ಮುಸಲ್ಮಾನರಿದ್ದಲ್ಲಿ ಹಿಂದೂ ಸ್ವಯಂ ಸೇವಕರು ಕೆಲಸ ಮಾಡಿದ್ದರೆ ಎಷ್ಟು ಚನ್ನಾಗಿರುತ್ತಿತ್ತು. ಕಾಂಗ್ರೆಸ್ ಕ್ಷೇತ್ರವನ್ನು ಶೃಂಗಾರ ಮಾಡುವದರಲ್ಲಿ ಏನೂ ಲೋಪವಿರಲಿಲ್ಲ. ಸಭಾಮಂಟಪಕ್ಕೆ ಹೋಗುವಾಗಿನ ಗೋಪುರ ಅದರ ಮೇಲೆ ರಾತ್ರಿ ಬೆಳಗುವ ದೀಪಮಾಲೆ, ಒಳಗಡೆಯ ಸುಂದರ ವಾತಾವರಣ ಗಾಂಧೀಜಿಯ ಕಣ್ಣನ್ನು ತುಂಬಿದವು. ರಾಷ್ಟ ಕಾರ್ಯವನ್ನು ಸೌಂದರ್ಯಪೂರ್ಣವಾಗಿ ಹೇಗೆ ನಡೆಸಬಹುದೆಂಬುದನ್ನು ಕರ್ನಾಟಕ ಕಾಂಗ್ರೆಸ್ ತಿಳಿಸಿಕೊಟ್ಟಿತು.

ಆದರೆ ಗಾಂಧೀಜಿ ಛೇಡಿಸದೇ ಬಿಡಲಿಲ್ಲ, "ನಾನಂತೂ ಬನಿಯಾ. ಕಾಸುಕಾಸನ್ನೂ ಎಣಿಸುವವ.ನನಗೆ ಖಾದಿಕುಟಿಯನ್ನು ಮಾಡಿಸಿದ್ದೇವೆ ಎಂದು ಹೇಳುತ್ತಾರೆ. ಇದನ್ನು ನಿರ್ಮಿಸಲು ಎರಡು ಸಾವಿರ ರೂಪಾಯಿಗಿಂತ ಕಡಿಮೆ ವೆಚ್ಚ ಆಗಿರಲಾರದು. ಪ್ರತಿನಿಧಿಗಳು ಸಾಮಾನ್ಯ ಚಪ್ಪರಗಳಲ್ಲಿ ಇದ್ದಾರೆ. ಅವರ ಮೇಲೆ ಭಗವಾನ ಸೂರ್ಯನಾರಾಯಣನ ಸ್ಪರ್ಶವೂ ಆಗುತ್ತದೆ.

ರಾತ್ರಿ ಚಳಿಗಂತೂ ಮಿತಿಯೇ ಇಲ್ಲ. ಆದ್ದರಿಂದ ನನಗೆ ಖಾದಿಯ ಅರಮನೆಯನ್ನು ಕೊಟ್ಟಿದ್ದೀರಿ ಎಂದರೆ ತಪ್ಪೇನಲ್ಲ. ಭೋಜನಾಲಯದ ಸ್ವಚ್ಛತೆಯು ಕಣ್ಣಿಗೆ ಒತ್ತಿಕೊಳ್ಳುವ ಹಾಗಿತ್ತು. ಊಟಕ್ಕೆ ಕುಳಿತು ಕೊಳ್ಳುವ ಸ್ಥಾನ ಕನ್ನಡಿಯ ಹಾಗೆ ಸ್ವಚ್ಛ. ಮೂರೂ ಕುಟಿಯ ಮುಂದೆ ದಿನವೂ ಗುಡಿಸಿ ಸ್ವಚ್ಛಮಾಡಿ ರಂಗೋಲೆ ಹಾಕಲು ಬೆಳಗಾಂವಿ ನಗರದಿಂದ ಎರಡು ಮೈಲಿ ನಡೆದು ಬರುತ್ತಿದ್ದರು ಮಹಿಳೆಯರು. ಸುಂದರವಾದ ಕನ್ನಡ ಅಕ್ಷರಗಳಲ್ಲಿ ರಂಗೋಲೆ ಹಿಟ್ಟಿನಿಂದ "ಬನ್ನಿರಿ, ಬನ್ನಿರಿ, ರಾಟಿ ತಿರುಗಿಸಿರಿ, ಬಡತನ ಹೋಗಿಸಿರಿ" ಎಂದು ಬರೆದಿರುತ್ತಿತ್ತು. ಅಡಿಗೆ ಮಾಡುವವರು ಅಲ್ಲದೆ ಬಡಿಸುವುದಕ್ಕೆ ಮುನ್ನೂರು ಜನ ಸ್ವಯಂ ಸೇವಕರು. ಇವರೆಲ್ಲರೂ ದೊಡ್ಡ ದೊಡ್ಡ ಮನೆತನದವರು ಇಂಥ ಕೆಲಸವನ್ನು ಇವರು ಯಾವಾಗಲೂ ಮಾಡುತ್ತಾರೆ.

ಈ ರಾಷ್ಟ್ರೀಯ ಸಪ್ತಾಹದಲ್ಲಿ ಯಾವುದನ್ನು ವರ್ಣಿಸಬೇಕು? ಕಾಂಗ್ರೆಸ್ಸನ್ನು ನೋಡಬೇಕೆ ? ಅಥವಾ ಕಾಂಗ್ರೆಸ್ ಮರಕ್ಕೆ ಸುತ್ತಿಕೊಂಡಿರುವ ಅನೇಕ ಶಾಖಾ ಸಭೆ ಸಮ್ಮೇಲನಗಳನ್ನು ನೋಡಬೇಕೆ? ಈ ಸಪ್ತಾಹದಲ್ಲಿ ಕಾಂಗ್ರೆಸ್ ಅಲ್ಲದೇ ಬೇರೆ 16 ಸಮ್ಮೇಲನಗಳು ನಡೆದವು. ಸಮಾಜ ಸುಧಾರಣೆಯ ಸಮ್ಮೇಲನ ಯಾವಾಗ ನಡೆಯಿತೋ ಯಾವಾಗ ಮುಗಿಯಿತೋ ಯಾರಿಗೂ ಗೊತ್ತೇ ಆಗಲಿಲ್ಲ. ವಲ್ಲಭಭಾಯಿ ಹಿಂದೀ ಸಮ್ಮೇಲನದ ಅಧ್ಯಕ್ಷರಾಗಬೇಕಾಗಿದ್ದಿತು.

ಆದರೆ ಅವರ ಸಮ್ಮೇಲನಕ್ಕೆ ಬೇರೆ ಯಾವುದೂ ತೆರವಿರಲಿಲ್ಲ. ವಿದ್ಯಾರ್ಥಿ ಸಮ್ಮೇಲನವಂತೂ ಇದ್ದೇ ಇತ್ತು. ಅದರ ಜೊತೆಯಲ್ಲಿ ಶಿಕ್ಷಕರ ಸಮ್ಮೇಲನವೂ ಆಯಿತು. ವಿದ್ಯಾರ್ಥಿಗಳ ತಂದೆತಾಯಿ ಸಮ್ಮೇಲನ ಮಾಡಿಕೊಂಡರೆ ವಿದ್ಯಾರ್ಥಿಗಳೂ ಶಿಕ್ಷಕರೂ ಏಕೆ ಮಾಡಿಕೊಳ್ಳಬಾರದು? ಇದರ ಜೊತೆಗೆ ವಾಚನಾಲಯ ಸಮ್ಮೇಲನ, ರೈಲ್ವೆ ಪ್ರವಾಸಿಗಳ ಸಮ್ಮೇಲನ , ಆಯುರ್ವೇದ ಸಮ್ಮೇಲನ, ಪ್ರಕೃತಿ ಚಿಕಿತ್ಸಾ ಸಮ್ಮೇಲನ. ಈ ಹೆಸರುಗಳ ಪಟ್ಟಿಯನ್ನು ಕೇಳಿದರೆ ಸಾಕು. ಮನುಷ್ಯ ಹೆದರಿಕೊಳ್ಳಬೇಕಾಗುತ್ತದೆ. ಪ್ರಕೃತಿ ಚಿಕಿತ್ಸಾ ಸಮ್ಮೇಲನದ ಜನ ಒಂದು ದಿನ ಬೆಳಿಗ್ಗೆ ಗಾಂಧೀಜಿ ಬಳಿಗೆ ಬಂದು ಪ್ರಕೃತಿ ಚಿಕಿತ್ಸೆಯ ವಿಷಯವಾಗಿ ನಾವು ಒಂದು ಸಮ್ಮೇಲನ ನಡೆಸುವುದಿದೆ.

ತಾವು ಅಧ್ಯಕ್ಷರಾಗ ಬೇಕಲ್ಲ ಎಂದರು.



ಮೊದಲು ಗಾಂಧೀಜಿ ಅವರೊಂದಿಗೆ ನಾಲ್ಕು ಮಾತು ಆಡಿದರು. ಅವರನ್ನು ಕೊಡವಿದರು. ನೀವಂತೂ ಪ್ರಕೃತಿಯ ನಿಯಮ ಪಾಲನಕ್ಕೆ ಹೆಚ್ಚು ಮಹತ್ವ ಕೊಡುವವರು. ನಾನು ಇಲ್ಲಿಗೆ ಬಂದದ್ದು ಕಾಂಗ್ರೆಸ್ಸಿನ ಕೆಲಸಕ್ಕಾಗಿ . ನಿಮ್ಮ ಸಮ್ಮೇಲನಕ್ಕಾಗಿ ನಾನು ಬರಲಿಲ್ಲ. ನಿಮ್ಮಲ್ಲಿ ಬಂದು ಮಾತನಾಡುವದು ಎಂದರೆ ಪ್ರಕೃತಿ ನಿಯಮವನ್ನು ಭಂಗಗೊಳಿಸಿದಂತೆ ಆಗಲಿಕ್ಕಿಲ್ಲವೇ? ನಾನಂತೂ ನನ್ನ ಕೊಠಡಿಯಲ್ಲಿ ಕೂಡ ನಿಮ್ಮನ್ನು ತಿರುಗಾಡಲು ಬಿಡುವುದಿಲ್ಲ. "ನಿಮ್ಮನ್ನು ಬೀಳ್ಕೊಂಡೇ ಬಿಡುತ್ತೇನೆ ಈ ಎಲ್ಲ ವಿಷಯಗಳಲ್ಲಿ ನನ್ನ ಮನಸ್ಸನ್ನು ತೊಡಗಿಸುವದು ಎಂದರೆ ನನ್ನ ನಿಯಮಗಳನ್ನು ನಾನೇ ಭಂಗಗೊಳಿಸಿದಂತೆ. ನಿಮ್ಮನ್ನು ಹೊರಗೆ ದಬ್ಬುವದು ಮರ್ಯಾದೆಗೆ ಸಭ್ಯತೆಗೆ ಸರಿಯಲ್ಲ. ಆದ್ದರಿಂದ ಮೊದಲನೆಯ ನಿಯಮವನ್ನು ಸ್ವಲ್ಪ ಕೈಬಿಟ್ಟೆ. ನನ್ನ ಸಂಗಡ ಮಾತನಾಡಬೇಕು ಎಂದರೆ ಆಶ್ರಮಕ್ಕೆ ಬನ್ನಿ." ಎಂದು ಹೇಳಿದರು.

ಇನ್ನೊಬ್ಬರು ಬೇರೊಂದು ಸಮ್ಮೇಲನಕ್ಕೆ ಕರೆಯಲು ಬಂದರು. ಅವರನ್ನು ಬೀಳ್ಕೊಟ್ಟು ಸ್ವಲ್ಪ ಖಿನ್ನರಾಗಿ ಹೇಳಿದರು – " ಈ ತಮಾಷೆಗಳಿಂದ ನಾನು ದಣಿದು ಹೋಗಿದ್ದೇನೆ.

ದೇವದಾಸ ಮತ್ತು ಬಾ ಇಬ್ಬರೂ ಬರಲಿಲ್ಲ. ಅವರೆಷ್ಟು ಪುಣ್ಯವಂತರು? ಈ ಕೆಲಸ ಕಾರ್ಯಗಳ ರೀತಿ ನನಗೆ ಸರಿ ಹೋಗುವುದಿಲ್ಲ . ವ್ಯಭಿಚಾರದ ಹಾಗೆ ಅನಿಸುತ್ತಿದೆ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಕುದುರೆಯನ್ನು ಮುಂದೆ ದೂಡುವ ಆಶೆ. ಎಲ್ಲರ ಕುದುರೆಗಳ ಸ್ಪರ್ಧೆಯು ನಡೆಯುತ್ತಾ ಇದೆ. ಕಾಂಗ್ರೆಸ್ಸಿಗೆ ಪುಷ್ಠಿ ಕೊಡುವ ಸಮ್ಮೇಲನಗಳು ಹೊರತುಪಡಿಸಿ ಬೇರೆ ಯಾವುದೂ ನಡೆಯಬಾರದು ಎನಿಸುತ್ತದೆ."

ಅಸ್ಪೃಶ್ಯತಾ ನಿವಾರಣಾ ಸಮ್ಮೇಲನ, ಗೋಸಮ್ಮೇಲನಗಳೂ ಈ ಶ್ರೇಣಿಯವು. ಆದ್ದರಿಂದ ಗಾಂಧೀಜಿ ಅವಕ್ಕೆ ಹೋದರು. ಗೋಸಮ್ಮೇಲನಕ್ಕಂತೂ ಅವರೇ ಅಧ್ಯಕ್ಷರು. ಎರಡೂ ಸಮ್ಮೇಲನಗಳ ಭಾಷಣ ಅತ್ಯಂತ ಮಹತ್ವಪೂರ್ಣ. ಖಾದಿ ಪ್ರದರ್ಶನ, ಚರಖಾ ಸ್ಪರ್ಧೆಗಳ ವರ್ಣನೆ ನಾನೇನು ಮಾಡಲಿ? 26ನೇ ತಾರೀಖು ಕಾಂಗ್ರೆಸ್ ಅಧಿವೇಶನ. ಅಲ್ಲಿಗೆ ಹೋಗುವ ಮೊದಲು ಗಾಂಧೀಜಿ ನೂಲು ತೆಗೆಯುತ್ತಿದ್ದರು. ಎರಡು ಗಂಟೆಗೆ ನೂಲಲು ಕೂತರು. ಎರಡೂವರೆ ಗಂಟೆಗೆ ಎಲ್ಲರನ್ನು ಕರೆದು "ವೈಷ್ಣವ ಜನತೋ ತೇನೆ ಕಹೀಯೆ" ಮತ್ತು "ಜಾಕೆ ಪ್ರಿಯನ ರಾಮ ವೈದೇಹಿ' ಭಜನೆಗಳನ್ನು ಹಾಡಿಸಿದರು. ದಿನವೂ ಸಂಜೆ ಏಳುವರೆ ಗಂಟೆಗೆ, ಬೆಳಿಗ್ಗೆ ನಾಲ್ಕು ಗಂಟೆಗೆ ಪ್ರಾರ್ಥನೆ ನಡೆಯುತ್ತದೆ. ಆಮೇಲೆ ಸ್ಥಿತಪ್ರಜ್ಞ ಶ್ಲೋಕಗಳನ್ನು ಹೇಳಿಸಿದರು. ಅವರು ಪಕ್ಕದಲ್ಲಿ ಪೋರ್ಟನೋವೊದ ಕುಮಾರಿ ಪೀಟರ್‌ಸನ್ ಕುಳಿತಿದ್ದರು. ಆಕೆಯು ಪದ್ಮಜಾ ನಾಯ್ದು ಇಬ್ಬರೂ "Lead Kindly Light" ಹಾಡಿದರು. ಇದು ಮುಗಿಯುವ ವೇಳೆಗೆ ಪಂಡಿತ್ ಮೋತೀಲಾಲ ನೆಹರು, ದೇಶಬಂಧು ದಾಸರು ಬಂದರು. ಮೂರು ಗಂಟೆಗೆ ಸರಿಯಾಗಿ ಕಾಂಗ್ರೆಸ್ಸಿನ ಅಧಿವೇಶನ ಮೊದಲಾಯಿತು. ಏಳೇ ನಿಮಿಷದಲ್ಲಿ ಸ್ವಾಗತ ಭಾಷಣ. ಗಾಂಧೀಜಿಯ ಹಿಂದೀ,

ಇಂಗ್ಲಿಷ್ ಭಾಷಣ ಮೂವತ್ತು ನಿಮಿಷಗಳಲ್ಲಿ. ಈ ಭಾಷಣದಲ್ಲಿ ಇದ್ದದ್ದು ಒಂದೇ ಮಾತು – "ಏನೇ ಮಾಡಲಿ ಈಶ್ವರ ಸಾಕ್ಷಿಯಾಗಿ ಮಾಡಿ. ಮಾತು ಕೊಡಬೇಡಿ. ಗೊತ್ತುವಳಿಯನ್ನು ಹಾರಿಸಿಬಿಡಿ. ಅದು ನನಗೆ ಇಷ್ಟವಾದೀತು. ಆದರೆ ವಚನಭಂಗ ಮಾಡಿದರೆ ನನಗೆ ವಿಷ .ನನ್ನನ್ನು ಬೈದರೆ, ಹೊಡೆದರೆ, ನನ್ನ ಮೇಲೆ ಉಗುಳಿದರೆ ನಾನು ಸುಮ್ಮನೆ ಸದ್ದಿಲ್ಲದೆ ಇರುತ್ತೇನೆ. ಆದರೆ ಕೊಟ್ಟ ಮಾತಿಗೆ ತಪ್ಪಿ ನಡೆದರೆ ಸಹಿಸಲಾರೆ. ಗೋರಕ್ಷಣ ಪರಿಷತ್ತಿನಲ್ಲಿ ಗಾಂಧೀಜಿ ಹೇಳಿದ ಅನೇಕ ಮಾತು ರೂಢಿಗೆ ಭಿನ್ನ. ನಾಲ್ಕು ಗಂಟೆಗೆ ಪ್ರಾರಂಭ ಆಗಬೇಕಾಗಿದ್ದ ಆ ಸಭೆ ಆರು ಗಂಟೆಗೆ ಪ್ರಾರಂಭವಾಯಿತು. ಅದ್ದರಿಂದ ಸಮ್ಮೇಲನವನ್ನು ಬೇಗ ಮುಗಿಸಿದರು. ಅಧ್ಯಕ್ಷ ಭಾಷಣದಲ್ಲಿ ಅವರು ಹೇಳಿದ ಮಾತಿನ ಸಾರಾಂಶ ಇಷ್ಟು.

"ಸ್ವರಾಜ್ಯ ಪ್ರಶ್ನೆಗಿಂತಲೂ ಗೋರಕ್ಷಣ ಪ್ರಶ್ನೆ ಕಡಿಮೆ ಮಹತ್ವದ್ದಲ್ಲ. ಅದಕ್ಕಿಂತ ಹೆಚ್ಚು. ಅಸ್ಪಶ್ಯತೆಯನ್ನು ಹೋಗಲಾಡಿಸುವವರೆಗೆ ಹಿಂದೂ ಮುಸ್ಲಿಂ ಐಕ್ಯ ಆಗುವದಿಲ್ಲ. ಎಲ್ಲರೂ ಖಾದಿ ತೊಡುವವರೆಗೆ ಸ್ವರಾಜ್ಯ ಸಿಗುವದಿಲ್ಲ ಎಂದು ನಾನು ಹೇಗೆ ಹೇಳುತ್ತೇನೆಯೋ, ಹಾಗೆಯೇ ಗೋರಕ್ಷಣೆಯ ನೀತಿ ನಮಗೆ ತಿಳಿಯುವವರೆಗೆ ಸ್ವರಾಜ್ಯ ಬಂದರೂ ಪ್ರಯೋಜನವಿಲ್ಲ ಎನ್ನುತ್ತೇನೆ. ಚಿಕ್ಕ ಬಾಯಿಂದ ದೊಡ್ಡ ಮಾತು ಆಡುತ್ತೇನೆ. ನಾನು ಸಂಪ್ರದಾಯಕ್ಕೆ ಎಷ್ಟೇ ವಿರುದ್ಧವಾಗಿದ್ದರೂ ಸನಾತನೀಯೆ ಹೌದು. ನನಗೆ ಗೋರಕ್ಷಣೆ ಬಹಳ ಪ್ರಿಯ.

ಹಿಂದೂತ್ವದ ಬಗ್ಗೆ ನಾನು "ಯಂಗ್ ಇಂಡಿಯಾ " ದಲ್ಲಿ ಬರೆದಿದ್ದೇನೆ. ನನಗೆ ವೇದಾದಿಗಳೂ ಒಪ್ಪಿಗೆ. ಗಾಯತ್ರಿಯ ಬಗ್ಗೆಯೂ ಬರೆದಿದ್ದೇನೆ. ಆದರೆ ಸಾಮಾನ್ಯ ಹಿಂದೂವಿನ ಲಕ್ಷಣ ಎಂದರೆ ಗೋರಕ್ಷಣೆ. ವೇದದಲ್ಲಿ ಗೋಮೇಧದ ಮಾತು ಇದೆ ಎಂದು ಹೇಳುತ್ತಾರೆ. ಒಂದು ವೇಳೆ ಇದ್ದರೆ ಅದರ ಅರ್ಥವೇ ಬೇರೆ. ಗೋರಕ್ಷಣೆ ಮಾಡದವನು ಹಿಂದೂವೇ ಅಲ್ಲ ಎಂದು ನನ್ನ ಭಾವನೆ. ಆದರೆ ಈಗ ಮಾಡುತ್ತಿರುವ ಗೋ ರಕ್ಷಣೆ ನೀತಿ ನನಗೆ ಒಪ್ಪಿಗೆಯಿಲ್ಲ. ಏಕಾಂತದಲ್ಲಿ ನನ್ನ ಹೃದಯ ಅಳುತ್ತದೆ. ಅತ್ತು, ಏನು ಪ್ರಯೋಜನ? ಇದಕ್ಕೆ ಬಲು ದೊಡ್ಡ ಬಲಿದಾನ ಬೇಕು. ನನ್ನ ವಿಚಾರವನ್ನು ನಿಮ್ಮ ಮುಂದೆ ಇಡಲು ನನಗೆ ಹೆದರಿಕೆ ಆಗುತ್ತದೆ. ಗೋರಕ್ಷಣೆ ಕ್ರಿಸ್ತರಿಂದ , ಮುಸಲ್ಮಾನರಿಂದ ಆದೀತು ಎಂಬ ಮಾತನ್ನು ಮರೆತುಬಿಡಿ. ಇತರ ಮತಗಳವರು ಗೋಮಾಂಸ ತಿನ್ನುವದನ್ನು ಬಿಟ್ಟರೆ ಅಲ್ಲಿಗೆ ಗೋರಕ್ಷಣೆ ಮುಗಿಯಿತು ಎಂದು ನಾನು ತಿಳಿಯುತ್ತೇನೆ. ಇದು ಹುರುಳಿಲ್ಲದ ಮಾತು. ಹಸುವನ್ನು ಕಡಿದರೆ ನನಗಾಗುವಷ್ಟು ದುಃಖ ಬೇರೆ ಯಾವ ಹಿಂದೂವಿಗೂ ಆಗಲಿಕ್ಕಿಲ್ಲ. ಆದರೆ ನಾನು ಏನು ಮಾಡಲಿ? ನನ್ನ ಮಾತನ್ನು ನಾನೇ ನಡೆಸಲೊ. ಅಥವಾ ಬೇರೆಯವರು ನಡೆಸುವಂತೆ ಮಾಡಲೋ? ಬೇರೆಯವರಿಂದ ಬ್ರಹ್ಮಚರ್ಯಪಾಲನ ಮಾಡಿಸಿ ನಾನು ಮಾತ್ರ ಚ್ಯುತನಾದರೆ ಅದು ಶ್ರೇಯಸ್ಕರವೇ? ನಾನು ದಿನವೂ ಗೋಮಾಂಸ ತಿನ್ನುತ್ತ, ನೀವು ತಿನ್ನಬೇಡಿ ಎಂದು ಮುಸಲ್ಮಾನರಿಗೆ ಹೇಳುವದು ಉಚಿತವೇ? ಹಿಂದೂ ರಾಜ್ಯಗಳಲ್ಲಿ ಗೋವಧೆಗೆ ದಂಡನೆ ಇಲ್ಲ. ಗೋರಕ್ಷಣೆಯ ಪ್ರತಿಜ್ಞೆ ಮಾಡಿದರೆ ಕೇವಲ ಹಿಂದೂಗಳ ಹಸುಗಳನ್ನೇ ಕಾಪಾಡಬೇಕೇ? ಕರ್ಮಮಾಡಿ ಅದರಿಂದ ತೋರಿಸಬೇಕು ಎನ್ನುತ್ತದೆ ಧರ್ಮ.

ಈ ಕೆಲಸ ಕತ್ತಿಯಿಂದಾಗುವದಿಲ್ಲ. ಇಡೀ ಲೋಕದ ಜನ ಹಸುವನ್ನು ಕಾಪಾಡಬೇಕು ಎಂದು ನನ್ನ ಇಚ್ಛೆ. ಆದರೆ ಮೊದಲು ನನ್ನ ಮನೆ ಸ್ವಚ್ಛ ಆಗಿರಬೇಡವೇ? ಎತ್ತನ್ನು ಹಿಂಸಿಸಿದರೆ ಅದು ಗೋಹತ್ಯ ಅಲ್ಲವೇ? ಹಿಂಸೆ ಎಂದರೆ ಇತರರಿಗೆ ದುಃಖ ಕೊಡುವದು. ನಾವು ಎತ್ತಿಗೆ ಕೊಡುವ ಹಿಂಸೆಗಿಂತ ಅದನ್ನು ಕೊಲ್ಲುವದೇ ಲೇಸು. ಚಂಪಾರಣ್ಯದ ಹಿಂದೂಗಳು ಗೋಭಕ್ತರು.

ಆದರೆ ಎತ್ತಿನ ಮೇಲೆ ಹೇರುತ್ತಿದ್ದ ಸಾಮಾನನ್ನು ನೋಡಿದರೆ ಅದಕ್ಕೇನೆನ್ನಬೇಕು? ಹಾಲು ಹಿಂಡುವ ಸ್ಥಳದಲ್ಲಿ ಊದಿ ಊದಿ ಹಾಲು ತೆಗೆಯುತ್ತಾರಲ್ಲ, ಇದು ಕೊಲೆ ಅಲ್ಲದಿದ್ದರೆ ಮತ್ತೇನು? ಇದನ್ನೆಲ್ಲ ಮಾಡುವವರು ಹಿಂದೂಗಳೇ ಆಗಿದ್ದಾರೆ.

"ನಮ್ಮ ದನಕ್ಕೆ ಸುಖವಿಲ್ಲ. ಜಗತ್ತಿನಲ್ಲಿ ಎಲ್ಲಿಯೂ ಇಷ್ಟು ಕಷ್ಟ ಅದಕ್ಕಿಲ್ಲ. ಬರೀ ಮೂಳೆ, ಚರ್ಮ. ಬೇರೆ ಏನೇನೂ ಇಲ್ಲ. ಇಷ್ಟಿದ್ದರೂ ನಾವು ಅದರ ಮೇಲೆ ಹೊರಿಸುವ ಭಾರವೋ!

ನಾವು ಇದೆಲ್ಲವನ್ನು ಮಾಡುತ್ತಿರುವಾಗ ಗೋವಧೆ ಮಾಡಬೇಡಿರೆಂದು ಹೇಗೆ ಹೇಳುವದು?"

"ಹಿಂದೂಸ್ತಾನ ಏಕೆ ದುಃಖಿಯಾಗಿದೆ? ಗೋರಕ್ಷಣೆಯನ್ನು ಕೈ ಬಿಟ್ಟಿದ್ದರಿಂದ . ಹಿಂದುಸ್ತಾನದ ಜನ ಹಳಸಿದ ಅನ್ನ ತಿಂದು, ಹಿಟ್ಟು ಮೆಣಸಿನಕಾಯಿ ಉಪ್ಪು ತಿಂದು ಬದುಕುತ್ತಿದ್ದಾರೆ. ನಾವೇನೋ ಪಟ್ಟಣಗಳಲ್ಲಿ ಇರುವವರು. ನಮಗೆ ಸ್ವಲ್ಪ ಸುಖವಿದೆ. ಆದ್ದರಿಂದ ನಮಗೆ ಅವರ ದುಃಖ ಗೊತ್ತಾಗುವದಿಲ್ಲ.. ಹಿಂದೂ ಧರ್ಮದಲ್ಲಿ ಗೋರಕ್ಷಣೆ ಇಲ್ಲ. ಏಕೆಂದರೆ ಗೋಹತ್ಯ ನಡೆಯುತ್ತಿದೆ. ಪಿಂಜರಾ ಪೋಲುಗಳನ್ನು ಎಷ್ಟೋ ನೋಡಿದ್ದೇನೆ. ಜೈನರಿಗೆ ಅದರ ಸಂಬಂಧ ಬಹಳ. ಅವರೆಲ್ಲರೂ ಹಿಂದೂಗಳೇ . ಅವರ ಪಿಂಜರಾ ಪೋಲುಗಳಲ್ಲಿ ಯಾವ ಅನುಕೂಲವೂ ಇಲ್ಲ, ವ್ಯವಸ್ಥೆಯೂ ಇಲ್ಲ."

"ನಮ್ಮಲ್ಲಿ ಸೊಗಸಾದ ಕ್ಷೀರಕ್ಷೇತ್ರ ಇರಬೇಕು. ಬೊಂಬಾಯಿಯಲ್ಲಿ ಒಳ್ಳೆಯ ಹಾಲು ಸಿಗುವುದಿಲ್ಲ . ಮಕ್ಕಳಿಗೆ ಕುಡಿಯಲಿಕ್ಕೆ ಹಾಲು ಸಿಗುವುದಿಲ್ಲ . ಇಪ್ಪತ್ತು ವರ್ಷಗಳ ಕೆಳಗೆ ಅಹಮದಾಬಾದನಲ್ಲಿ ಹಾಲು ಯಥೇಚ್ಛ ಆಗಿತ್ತು. ಇವತ್ತು ತಾಯಂದಿರು ನೀರಲ್ಲಿ ಹಿಟ್ಟು ಕಲಸಿ, ಅದನ್ನೇ ಹಾಲು ಎಂದು ಮಕ್ಕಳಿಗೆ ಕುಡಿಸುತ್ತಾರೆ. ಹಿಂದೂಸ್ತಾನದಲ್ಲಿ ಹಾಲು ಸಿಗುವದಿಲ್ಲ ಎಂದರೆ ಗೋರಕ್ಷಣೆ ನಡೆಯುತ್ತಿಲ್ಲ ಎಂದ ಹಾಗೆ."

"ಇವತ್ತು ಮುಸಲ್ಮಾನರ ಕೈಯಲ್ಲಿ ನನ್ನ ಕೊರಳನ್ನು ಇಡುತ್ತಿದ್ದೇನೆ ಏಕೆ? ದನವನ್ನು ಕಾಪಾಡಲಿಕ್ಕೆ ನರವಧೆಯೂ ಗೋವಧೆಯೂ ಎರಡೂ ಒಂದೇ. ಇವೆರಡನ್ನೂ ನಿಲ್ಲಿಸಬೇಕೆಂದರೆ ಅಹಿಂಸೆಯೇ ಉಪಾಯ. ನಿಜವಾಗಿ ಸ್ವರಾಜ್ಯಕ್ಕಿಂತಲೂ ದನವನ್ನು ಕಾಪಾಡುವದೇ ದೊಡ್ಡ ಕೆಲಸ. ಇದು ಕಾನೂನಿಂದ ಆಗುವ ಕೆಲಸವಲ್ಲ. ಪ್ರೇಮದಿಂದ ಆಗಬೇಕು. ಗೋರಕ್ಷಣೆಯ ಸೂಕ್ಷ್ಮ ಅರ್ಥ, ಪ್ರಾಣಿ ಮಾತ್ರದ ರಕ್ಷಣೆ. ಅಹಿಂಸೆಯ ಪರಿಣಾಮ ಏನು ನಮಗಿನ್ನೂ ತಿಳಿಯದು. ಅದರಿಂದ ಮೋಕ್ಷ ಸಿಗುತ್ತದೆ ಎನ್ನುತ್ತಾರೆ. ಆದರೆ ಬರೀ ಗೋರಕ್ಷಣೆಯಿಂದಲೇ ಮುಕ್ತಿ ಸಿಗುವದಿಲ್ಲ. ರಾಗ ದ್ವೇಷವನ್ನು ಬಿಡಬೇಕು. ಯಾರಿಗಾದರೂ ದುಃಖ ಆಗುವಂತೆ ಮಾಡಿದರೆ ಕಠಿಣ ಮಾತಿನಿಂದ ಹೆಂಗಸರಿಗೆ, ಅಣ್ಣ ತಮ್ಮಂದಿರಿಗೆ ಯಾರಿಗಾದರೂ ನೋವು ಕೊಟ್ಟರೆ ಅದು ಗೋರಕ್ಷಣೆ ಅಲ್ಲ, ಗೋಭಕ್ಷಣೆಯೆಂದೇ ಅನ್ನಬೇಕು. ಗೋರಕ್ಷಣೆಯ ಅರ್ಥ ಬಹಳ ವಿಸ್ತಾರವಾದುದು. ಗೋಪೂಜೆ ಮಾಡಬೇಕೆಂದು ಹಿಂದೂ ಧರ್ಮ ಹೇಳುತ್ತದೆ. ಆದರೆ ಅಲ್ಲಿಗೆ ಗೋರಕ್ಷಣೆ ಮುಗಿಯಿತು ಎಂದು ಅಲ್ಲ. ದನಗಳನ್ನು ಮಾತ್ರವೇ ಅಲ್ಲ, ಕುರಿ ಮೇಕೆಗಳನ್ನೂ ಕಾಪಾಡಬೇಕು. ಎಲ್ಲ ಪ್ರಾಣಿಗಳನ್ನೂ ಕಾಪಾಡಬೇಕು. ಹಿಂದೂಗಳಲ್ಲಿ ಮಾಂಸಭಕ್ಷಕರಿದ್ದಾರೆ ಆದರೆ ಗೋಮಾಂಸವನ್ನು ಮುಟ್ಟುವದಿಲ್ಲ. ಇಷ್ಟು ಮಾತ್ರಕ್ಕೇ ನಾನು ಅವರನ್ನು ಸರಿ ಎನ್ನಲಾರೆ.


“ಹಸುವಿನಿಂದ ಕೆಲಸಮಾಡಿಸಿಕೊಳ್ಳಬಾರದು ಎನ್ನುತ್ತಾರೆ. ಹಿಂದೂಗಳೇ ಹಸುಗಳನ್ನು ಮಾರದಿದ್ದರೆ ಅವನ್ನು ಕಡಿಯುವವರು ಯಾರು? ಕಟುಕನಿಗೆ ಪ್ರಾಣಿಯನ್ನು ಕೊಟ್ಟರೆ ತಾನೇ ಕಡಿಯುತ್ತಾನೆ. ಇದು ಆರ್ಥಿಕ ಪ್ರಶ್ನೆ .ಗೋಮಾಳದ ಭೂಮಿ ಎಲ್ಲವೂ ಸರಕಾರದ ಪಾಲಾಗಿದೆ. ಇದೊಂದು ಕಾರಣ. ಹಾಲು ಕೊಡದಿರುವ ಹಸುವನ್ನು ಬ್ರಾಹ್ಮಣರು ಮಾರುತ್ತಾರೆ, ಇದು ಒಂದು ಕಾರಣ, ಹಸುವಿಗೂ ಸರಿಯಾದ ಆಹಾರ ಕೊಟ್ಟು, ದಿನವೂ ಬೆಳಿಗ್ಗೆ ಅದನ್ನು ಪೂಜಿಸಿ, ಅದರಿಂದ ಸ್ವಲ್ಪ ಕೆಲಸ ಮಾಡಿಕೊಂಡರೆ ಏನು ತಪ್ಪು ಎನ್ನುತ್ತಾರೆ. ಸ್ವಲ್ಪ ಕೆಲಸ ಮಾಡಿಸಿಕೊಂಡರೆ ಅದಕ್ಕೆ ಗರ್ಭನಿಂತು ಕರು ಆಗುತ್ತದಂತೆ. ಹೀಗಿದ್ದರೆ, ಅದಕ್ಕೆ ಸರಿಯಾದ ರಕ್ಷಣೆ ದೊರೆತರೆ ಏನು ತಪ್ಪು?

“ಈ ಸಮ್ಮೇಲನದಲ್ಲಿ ಗೊತ್ತುವಳಿಯನ್ನು ಇಡಲು ವೇಳೆ ಇಲ್ಲ. ಒಂದು ವೇಳೆ ಗೊತ್ತುವಳಿ ಇಟ್ಟು, ನೀವೆಲ್ಲರೂ ಅದಕ್ಕೆ ಸಮ್ಮತಿ ಕೊಟ್ಟರೆ ಏನು ಬಂತು? ಧರ್ಮಶಾಸ್ತ್ರಜ್ಞರ ಜೊತೆಯಲ್ಲಿ ಮಾತನಾಡಿ, ಒಂದು ಸಮಿತಿಯನ್ನು ರಚಿಸಿ. ಗೋರಕ್ಷಣೆಗೆ ಒಂದು ಸಂಸ್ಥೆ ಮಾಡಿ. ನೀವೊಂದು ಸಮಿತಿ ಮಾಡಿ ಪಂಡಿತ ಮಾಲವೀಯರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳಿ.” ಅಲ್ಲಿಂದ ಗಾಂಧೀಜಿ ಶಹಾಪುರಕ್ಕೆ ಹೋಗಿ ಪೌರಸಭೆಯಿಂದ ಮಾನಪತ್ರ ಪಡೆದರು.

ಶಿಕ್ಷಕರ ಪರಿಷತ್ತು:

ಕಾಂಗ್ರೆಸ್ಸಿನ ಸಮಯಕ್ಕೆ ಅನೇಕ ಬೇರೆ ಪರಿಷತ್ತುಗಳು ನಡೆದವು. ಅದರಲ್ಲಿ ಶಿಕ್ಷಣ ಪರಿಷತ್ತಿನ ಉಪಕ್ರಮ ಹೊಸದು. ಕಾಕಾಸಾಹೇಬ ಕಾಲೇಲ್ಕರ ಅವರು ಅದರ ಜೀವಾಳ. ಹಿಂದೂ ಮಹಾಸಭೆಯು ಪಂಡಿತ ಮಾಲವೀಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಮಾಜಿಕ ಪರಿಷತ್ತಿಗೆ ಶ್ರೀ ಶಂಕರನ್ ನಾಯರ್ ಅವರು ಅಧ್ಯಕ್ಷರು. ಶಿಕ್ಷಣ ಪರಿಷತ್ತು ಎಂದರೆ ರಾಷ್ಟ್ರೀಯ ಶಿಕ್ಷಕರ ಪರಿಷತ್ತು. ಅದರ ಬಗ್ಗೆ ಗಾಂಧೀಜಿ ಹೀಗೆ ಬರೆದಿದ್ದಾರೆ:

“ಚರ್ಚೆ ಬಲು ಸ್ವಾರಸ್ಯವಾಗಿತ್ತು. ರಾಟೆಯೇ ಅದರ ವಿಷಯ. ನಮ್ಮ ರಾಷ್ಟ್ರೀಯ ಜೀವನದ ದೌರ್ಬಲ್ಯವೆಂದರೆ ಠರಾವು ಮಾಡುತ್ತೇವೆ. ಅದರಂತೆ ನಡೆಯುವುದಿಲ್ಲ. ವ್ಯರ್ಥ ಪ್ರತಿಜ್ಞೆ ಮಾಡಲು ಶಿಕ್ಷಕರು ಎಲ್ಲರಿಗಿಂತ ಹಿಂದೆ ಇರಬೇಕು. ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡುವದು ಅವರ ಕರ್ತವ್ಯ . ಇವರು ಎಷ್ಟೇ ಉದ್ದೋಧಕ ಭಾಷಣ ಮಾಡಿದರೂ ಮಕ್ಕಳು ಇವರು ನಡೆದಂತೆ ನಡೆಯುತ್ತಾರೆ . ಶಿಕ್ಷಕರು ಮಾತಿಗೆ ತಪ್ಪಿ ನಡೆದರೆ ಮಕ್ಕಳೂ ತಪ್ಪಿ ನಡೆಯುತ್ತಾರೆ. ಈ ವರ್ಷ ರಾಷ್ಟವು ಖಾದಿಯ ಕೆಲಸವನ್ನು ಕೈಕೊಂಡಿದೆ. ಖಾದಿ ಉತ್ಪತ್ತಿಯ ಎಲ್ಲ ವಿಧಾನಗಳನ್ನೂ ವಿದ್ಯಾರ್ಥಿಗಳು ಕಲಿಯುವಂತೆ ಅವರು ಖಾದಿ ಧರಿಸಬೇಕು . ಇದರಿಂದ ಅವರ ಅಭ್ಯಾಸಕ್ಕೆ ತಡೆ ಆಗಬೇಕಾಗಿಲ್ಲ. ಶಿಕ್ಷಕರೆಲ್ಲರೂ ಬಹುಸಂಖ್ಯೆಯಲ್ಲಿ ಈ ಕಾರ್ಯಕ್ರಮ ಒಪ್ಪಿದ್ದು ಬಲು ಸಂತೋಷ.”



ವಿದ್ಯಾರ್ಥಿಗಳು:

ವಿದ್ಯಾರ್ಥಿಗಳು ಸಭೆ ಸೇರಿದ್ದರು. ಅವರ ಸಮ್ಮೇಲನದಲ್ಲಿ ಬರೀ ರಾಷ್ಟ್ರೀಯ ಶಾಲೆ ಕಾಲೇಜುಗಳ ಹುಡುಗರು ಮಾತ್ರ ಇರಲಿಲ್ಲ. ಸರಕಾರೀ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೇ ಹೆಚ್ಚು. ಅದರ ಅಧ್ಯಕ್ಷರಾದ ಶ್ರೀ ರೆಡ್ಡಿ ವಿದ್ಯಾರ್ಥಿಗಳ ಬಿಡುವಿನ ವೇಳೆಯನ್ನು ರಜಾ ದಿನಗಳನ್ನು ಉಪಯೋಗಿಸಿಕೊಳ್ಳುವ ಒಂದು ಯೋಜನೆ ಸಿದ್ಧಪಡಿಸಿದ್ದರು. ವರ್ಷಕ್ಕೆ 28 ಸಂಜೆಗಳನ್ನು ವಿದ್ಯಾರ್ಥಿಗಳು ದೇಶಕ್ಕೆ ನೀಡಬೇಕು ಎಂಬುದು ಅವರ ಯೋಜನೆ. ಒಬ್ಬೊಬ್ಬನು ನಾಲ್ಕು ಹಳ್ಳಿ ಆರಿಸಿಕೊಂಡು ಕೆಲಸ ಮಾಡಬೇಕು. ನಾನಾ ವಿಷಯಗಳ ಮೇಲೆ ಒಂದು ಭಾಷಣಮಾಲೆ ನಡೆಯಬೇಕು. ಇದು ಅವರ ಯೋಜನೆ. ಸದ್ಯ ಈ ವಿದ್ಯಾರ್ಥಿಗಳ ಬಿಡುವಿನ ವೇಳೆಯನ್ನು ಖಾದಿ ಪ್ರಚಾರಕ್ಕಾಗಿ ಉಪಯೋಗಿಸಬೇಕು. ಆದರೆ ಇದಕ್ಕಿಂತ ಹೆಚ್ಚಿನದು ಎಂದರೆ ವಿದ್ಯಾರ್ಥಿಗಳೂ ವಕೀಲರೂ ದಿನವೂ ಒಂದು ಗಂಟೆ ನೂಲಬೇಕು, ಖಾದಿ ಧರಿಸಬೇಕು.

ಗಾಂಧೀಜಿಯ ಇಷ್ಟದಂತೆ ಎರಡೇ ದಿನಗಳಲ್ಲಿ ಕಾಂಗ್ರೆಸ್ ಅಧಿವೇಶನ ಮುಗಿಯಿತು. ಇದು ಬೆಳಗಾಂವಿಯ ಕಾಂಗ್ರೆಸ್ಸಿನ ವೈಶಿಷ್ಟ ಎನ್ನಬಹುದು. ಆಮೇಲೆ ಒಂದು ದಿನ ಗಾಂಧೀಜಿ ವಿಜಯನಗರದಲ್ಲಿಯೇ ಇದ್ದರು. ಅಧಿವೇಶನಕ್ಕಾಗಿ ಪ್ರತಿನಿಧಿಗಳಿಂದ ಶುಲ್ಕವನ್ನು ತೆಗೆದುಕೊಳ್ಳಲಾಗುತ್ತದೆ. ಅದರಲ್ಲಿ ಸ್ವಲ್ಪ ಭಾಗವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕೊಡಬೇಕಾಗುತ್ತದೆ. ಅನೇಕ ಕಡೆ ಈ ಹಣವನ್ನು ಕೊಡುವುದೇ ಇಲ್ಲ. ಕೊಟ್ಟರೂ ಹೊತ್ತಿಗೆ ಸರಿಯಾಗಿ ಕೊಡುವುದಿಲ್ಲ.


ಕರ್ನಾಟಕದ ಕಾಂಗ್ರೆಸ್ಸಿನಲ್ಲಿ ಹಾಗೆ ನಡೆಯಲಿಲ್ಲ. ಬಹುಶಃ, ಇಷ್ಟು ವ್ಯವಸ್ಥಿತ ರೀತಿಯಿಂದ ಎಲ್ಲೂ ಕೆಲಸ ನಡೆದಿರಲಿಲ್ಲ. ಕಾಂಗ್ರೆಸ್ ಕೋಶಾಧಿಕಾರಿಗಳು ಶ್ರೀ ಸೇಟ್ ಜಮುನಾಲಾಲ ಬಜಾಜ ಅವರು ವಿಜಯನಗರವನ್ನು ಬಿಟ್ಟು ಹೋಗುವ ಮೊದಲೇ ಅವರ ಕೈಗೆ ಹಣ ಮುಟ್ಟಿತು .

(ಮುಂದುವರಿಯುವುದು)

ರಜನಿ ಭಕ್ಷಿ ಅವರ

'ಬಾಪು ಕುಟಿ'

ಪುಸ್ತಕದ ಪುಟಗಳಿಂದ



ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ನಮ್ಮನ್ನಗಲಿ ದಶಕಗಳು ಕಳೆದರೂ, ಭಾರತದಲ್ಲಿ ಮಾತ್ರವಲ್ಲ ವಿಶ್ವದೆಲ್ಲೆಡೆ ಅನೇಕ ಪ್ರಜ್ಞಾವಂತರಲ್ಲಿ ಇಂದಿಗೂ ಕಾಡುತ್ತಿರುವ ವಿಶಿಷ್ಟ ವ್ಯಕ್ತಿತ್ವ ಅವರದು.

ನಮ್ಮ ಬದುಕಿನಲ್ಲಾದ ಬದಲಾವಣೆ, ಆಲೋಚನಾ ಕ್ರಮ, ತಲೆಮಾರುಗಳ ದೃಷ್ಟಿಕೋನದಲ್ಲಿರುವ ಅಂತರ ಹಾಗೂ ಸ್ಮೃತಿಗೆ ತಂದುಕೊಳ್ಳಲಾರದಷ್ಟು ಅಸಹಾಯಕತೆಗೆ ದೂಡಲ್ಪಟ್ಟಿರುವ ಸ್ವಾತಂತ್ರ್ಯ ಹೋರಾಟದ ನೆನಪುಗಳು ಇವೆಲ್ಲವುಗಳ ನಡುವೆಯೂ ಗಾಂಧೀಜಿಯವರು ಇನ್ನೂ ಎಲ್ಲರೆದೆಯಲ್ಲಿ ಹಸಿರಾಗಿದ್ದಾರೆ.

ಬೆಂಕಿಯಷ್ಟೇ ಮನುಷ್ಯನನ್ನು ಕೊಲ್ಲಬಲ್ಲದು ಎಂದುಕೊಂಡಿದ್ದ ಜಗತ್ತಿಗೆ, ತಣ್ಣಗಿನ ಮಂಜುಗಡ್ಡೆಯೂ ಸಹ ಮನುಷ್ಯನನ್ನು ಕೊಲ್ಲಬಲ್ಲದು ಎಂಬುದನ್ನು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟವರು ಮಹಾತ್ಮ ಗಾಂಧೀಜಿಯವರು.

20ನೇ ಶತಮಾನದ ಅದ್ವಿತೀಯ ವ್ಯಕ್ತಿಯಾಗಿ ಲಂಡನ್ ನ ಟೈಮ್ಸ್ ಪತ್ರಿಕೆಯು ನಡೆಸಿದ ಸಮೀಕ್ಷೆಯಲ್ಲಿ ಗಾಂಧೀಜಿಯವರು ಆಯ್ಕೆಯಾದಾಗ ಯಾರಿಗೂ ಅಚ್ಚರಿಯಾಗಲಿಲ್ಲ.

ಅಷ್ಟೇ ಏಕೆ ? ಇಂಗ್ಲೀಷ್ ಪಾಕ್ಷಿಕ 'ದಿ ವೀಕ್'' ಪತ್ರಿಕೆಯ ಸಮೀಕ್ಷೆಯಲ್ಲಿ ಇಂದಿನ ಯುವ ಜನಾಂಗ ವಿಶೇಷವಾಗಿ ಉನ್ನತ ವ್ಯಾಸಂಗದಲ್ಲಿ ನಿರತರಾಗಿರುವ ವಿದ್ಯಾರ್ಥಿಗಳು ಗಾಂಧೀಜಿಯವರ ಬಗ್ಗೆ ಆಸಕ್ತಿ ತಳೆದಿರುವುದು ಕಂಡುಬಂದಿದೆ.

ಇಂದಿಗೂ ಅಂತರಾಷ್ಟ್ರೀಯ ಪ್ರಕಾಶನ ಸಂಸ್ಥೆಗಳಲ್ಲಿ ಪ್ರತಿ ವರ್ಷ ಗಾಂಧೀಜಿಯವರ ಬಗೆಗಿನ ಕೃತಿಗಳ ಲಕ್ಷಾಂತರ ಪ್ರತಿಗಳು ಮಾರಾಟವಾಗುತ್ತಿವೆ. ನಿಧಾನವಾಗಿಯಾದರೂ ಜಗತ್ತಿಗೆ ಗಾಂಧೀಜಿಯಂತಹ ವ್ಯಕ್ತಿತ್ವಗಳು ಅರ್ಥವಾಗುತ್ತಿರುವುದು ಸಮಾಧಾನಕರ ಸಂಗತಿ.

ಈ ದೇಶ, ಸಮುದಾಯ, ಸಮಾಜ ದಾರಿ ಕಾಣದೇ ದಿಕ್ಕೆಟ್ಟಾಗಲೆಲ್ಲಾ ನಮಗೆ ನೆನಪಾಗುವುದು ಗಾಂಧೀಜಿ ಮತ್ತು ಅವರ ಚಿಂತನೆಗಳು.

1948 ರ ಜನವರಿಯಲ್ಲಿ ಹಂತಕನ ಗುಂಡಿಗೆ ಬಲಿಯಾಗುವ ಮುನ್ನ 'ಗಾಂಧಿವಾದ' ಎಂಬುದು ತಲೆಯೆತ್ತಬಾರದು ಎಂದು ಗಾಂಧೀಜಿಯವರು ಅಪೇಕ್ಷಿಸಿದ್ದರು.

'ಯಾವುದೇ ತತ್ವ– ಸಿದ್ಧಾಂತಗಳನ್ನು ನಾನು ಹುಟ್ಟು ಹಾಕಿದೆನೆಂದು ಜಗತ್ತು ಹೇಳಬಾರದು. ಶಾಶ್ವತ ಸತ್ಯಗಳನ್ನು ನಮ್ಮ ದಿನ ನಿತ್ಯದ ಬದುಕು ಮತ್ತು ಸಮಸ್ಯೆಗಳಿಗೆ ನನ್ನದೇ ಆದ ರೀತಿಯಲ್ಲಿ ಅನ್ವಯಿಸಲು ನಾನು ಪ್ರಯತ್ನಿಸಿದೆ ಅಷ್ಟೆ' ಎಂಬುದು ಮಹಾತ್ಮನ ನಿಲುವಾಗಿತ್ತು.

ಮಾನವ ಸಹಜ ಪ್ರವೃತ್ತಿಗಳಾದ ಹಲವಾರು ದೌರ್ಬಲ್ಯಗಳನ್ನು ಹೊಂದಿದ್ದ ಗಾಂಧೀಜಿಯವರು 'ರಾಷ್ಟ್ರಪಿತ' ನೆಂದು ಎಲ್ಲರಿಂದ ಕರೆಯಿಸಿಕೊಂಡರೂ, ಅವರು ತಮ್ಮ ಕುಟುಂಬದ ಜೊತೆ ಪತಿಯಾಗಿ, ತಂದೆಯಾಗಿ ನಡೆದುಕೊಂಡ ರೀತಿ ಇಂದಿಗೂ ಚರ್ಚೆಗೆ ಒಳಪಟ್ಟಿದೆ.ದೇಶದ ಹಿತಾಸಕ್ತಿಗಾಗಿ ತಮ್ಮ ಕುಟುಂಬದ ಹಿತಾಸಕ್ತಿಯನ್ನು ಬಲಿಕೊಟ್ಟ

ಗಾಂಧೀಜಿಯವರ ಬದುಕೆಂದರೆ ಅದೊಂದು ರೀತಿ,

' ತನ್ನ ಗುಡಿಸಲಿಗೆ ಬೆಂಕಿ ಹಚ್ಚಿಕೊಂಡು ಊರಿಗೇ ಬೆಳಕಾಗುವ ಪರಿ'. ಅಲ್ಲಿ ಸ್ವಾರ್ಥಕ್ಕೆ ಎಡೆಯಿಲ್ಲ.

ಆಫ್ರಿಕಾದ ಡರ್ಬಾನ್ ರೈಲು ನಿಲ್ದಾಣದಲ್ಲಿ ವರ್ಣಬೇಧ ನೀತಿಯ ದೌರ್ಜನ್ಯಕ್ಕೆ ಸಿಲುಕಿ ರೈಲಿನ ಬೋಗಿಯಿಂದ ಹೊರಗೆ ಎಸೆಯಲ್ಪಟ್ಟಾಗ, ಗಾಂಧಿ ಅದರಲ್ಲೂ ಬ್ಯಾರಿಸ್ಟರ್ ಆಗಿದ್ದ ಗಾಂಧಿ ಅದೊಂದು ವೈಯಕ್ತಿಕ ನೋವು – ಅಪಮಾನ ಎಂದು ಭಾವಿಸಿದ್ದರೆ, ದಕ್ಷಿಣ ಆಫ್ರಿಕಾದ ಜನತೆಗೆ ಬಿಳಿಯರಿಂದ ಮೋಕ್ಷವೆಂಬುದು ಸಿಗುತ್ತಲೇ ಇರಲಿಲ್ಲ. ವೈಯಕ್ತಿಕ ನೋವಿಗಿಂತ ಸಮುದಾಯದ ನೋವು ಮುಖ್ಯವೆಂದು ಗಾಂಧಿ ಪರಿಗಣಿಸಿದರು. ಈ ಗುಣವೇ ಅವರನ್ನು ಜಗದ್ವಿಖ್ಯಾತರನ್ನಾಗಿ ಮಾಡಿತು.

ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿದ್ದ ನೆಲ್ಸನ್ ಮಂಡೇಲಾ ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ಥಳೀಯ ಪತ್ರಕರ್ತನೊಬ್ಬ,

ಗಾಂಧೀಜಿಯವರಿಂದಾಗಿ ದಕ್ಷಿಣ ಆಫ್ರಿಕಾದಲ್ಲಿ ಕರಿಯರಿಗೆ ಬಿಳಿಯರಿಂದ ಬಿಡುಗಡೆ ಸಿಕ್ಕಿತು ಎಂದಾಗ, ಮಂಡೇಲಾ ಅವರು ಹೌದು..

' ನೀವು ಆಫ್ರಿಕಾಕ್ಕೆ ವಕೀಲ ಮೋಹನ್ ದಾಸ್ ಕರಂಚಂದ್ ಗಾಂಧಿಯನ್ನು ನೀವು ಕಳುಹಿಸಿಕೊಟ್ಟಿರಿ,ದಶಕಗಳ ತರುವಾಯ ನಾವು ಅವರನ್ನು ಮಹಾತ್ಮ ಗಾಂಧಿಯನ್ನಾಗಿ ಕಳುಹಿಸಿಕೊಟ್ಟೆವು ' ಎಂದು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದರು.

'ಶಕ್ತಿಯೇ ಸರ್ವಸ್ವ' ಎಂದು ನಂಬಿರುವ ಆಧುನಿಕ ಜಗತ್ತಿಗೆ ಗಾಂಧೀಜಿಯವರ ತತ್ವ ಹಾಗೂ ಚಿಂತನೆಗಳನ್ನು ಅರಗಿಸಿಕೊಳ್ಳುವುದು ಕಷ್ಟ. ಸಮಾಜದಲ್ಲಿ ಎಲ್ಲರಿಗೂ ಸಮಾನತೆ, ಸಮೃದ್ಧಿ, ನ್ಯಾಯ ದೊರಕಿಸಿ ಕೊಡುವುದು ರಾಮರಾಜ್ಯದ ಕಲ್ಪನೆ. ವ್ಯಕ್ತಿಯೊಬ್ಬನ ಉನ್ನತಿಯ ಜೊತೆಗೆ ಸಮುದಾಯದ ಅಭಿವೃದ್ಧಿಗೆ ಜೀವನಾಂಶ ಒದಗಿಸಿ ಕೊಡುವುದು ಅಗತ್ಯ ಎಂದು ಗೌತಮ ಬುದ್ಧ ಪ್ರತಿಪಾದಿಸಿದ್ದ. ದಾರ್ಶನಿಕ ಜಾನ್ ರಸ್ಕಿನ್ ಸರಳ ಬದುಕು ಅಗತ್ಯವೆಂದು ಒತ್ತಿಹೇಳುತ್ತ, ಮನುಷ್ಯನನ್ನು ದುರ್ಬಲಗೊಳಿಸುವ, ಸ್ವಾರ್ಥಿಯನ್ನಾಗಿ ರೂಪಿಸುತ್ತಿರುವ ಆಧುನಿಕ ಅರ್ಥವ್ಯವಸ್ಥೆಯನ್ನು ಟೀಕಿಸಿದ್ದನು. ಇವೆಲ್ಲವುಗಳಿಂದ ಗಾಂಧೀಜಿಯವರು ಪ್ರಭಾವಿತರಾಗಿದ್ದರು.

ಈ ಕಾರಣಕ್ಕಾಗಿ ಶತಮಾನದ (1908) ಹಿಂದೆ ಮಹಾತ್ಮ ' ಹಿಂದ್ ಸ್ವರಾಜ್ ' ಕೃತಿ ಬರೆಯುವ ಮುನ್ನವೇ ಆಧುನಿಕ ಬದುಕಿನ ಎಲ್ಲಾ ಆಡಂಬರಕ್ಕೆ ಬೆನ್ನು ತಿರುಗಿಸಿ,ಪೂರ್ಣತೆಯ ಬದುಕಿನ ಹಾದಿಯ ಅನ್ವೇಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಬ್ರಿಟೀಷ್ ರ ಗುಲಾಮಗಿರಿಯಲ್ಲಿ ಸಿಲುಕಿ ನರಳುತ್ತಿರುವ ಭಾರತಕ್ಕೆ ಹಿಂಸೆ ಮಂತ್ರದಂಡವಲ್ಲ, ಅದಕ್ಕೆ ಪರ್ಯಾಯವಾಗಿ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಶ್ರೇಷ್ಠವಾದ ಅಸ್ತ್ರವೊಂದು ಭಾರತಕ್ಕೆ ಬೇಕಾಗಿದೆ ಎಂದು ನಂಬಿದ್ದ ಗಾಂಧೀಜಿಯವರು

ಅಣುಬಾಂಬ್ ಗಿಂತ ಪ್ರಬಲವಾದ 'ಅಹಿಂಸೆ' ಎಂಬ ಅಸ್ತ್ರವನ್ನು ಜಗತ್ತಿಗೆ ಕೊಟ್ಟರು.

ಯಾರನ್ನೂ ಹಿಂಸಿಸದೆ, ತನ್ನನ್ನು ತಾನು ಹಿಂಸಿಸಿ ಕೊಳ್ಳುವುದರ ಮೂಲಕ (ಉಪವಾಸ, ಧರಣಿ) ಎದುರಾಳಿಯ ಮನೋಸ್ಥೈರ್ಯವನ್ನು ಕುಗ್ಗಿಸುವ, ಮಣಿಸುವ ಈ ಅಹಿಂಸಾ ಸತ್ಯಾಗ್ರಹದ ಪರಿಕಲ್ಪನೆ ಮಹಾತ್ಮ ಗಾಂಧೀಜಿಯವರು ಇಡೀ ಮಾನವ ಜಗತ್ತಿಗೆ ನೀಡಿದ ಬಹುದೊಡ್ಡ ಕೊಡುಗೆಯಾಗಿದೆ.

ಸೌಜನ್ಯ : ರಜನಿ ಭಕ್ಷಿಯವರ 'ಬಾಪೂಕುಟಿ' ಪುಸ್ತಕದ ಕನ್ನಡ ಅನುವಾದ 'ಗಾಂಧಿ ಎಂಬ ಧ್ಯಾನ' ಪುಸ್ತಕದಿಂದ.

ಸಾಗರದಾಚೆ ಬಾಪು



ಕೆನಡ ದೇಶದ ಮ್ಯಾನಿಟೋಬಾ ರಾಜ್ಯದ ವಿನ್ನಿಪೆಂಗ್ ನಗರದ 'ಕೆನಡ ಮಾನವ ಹಕ್ಕುಗಳ ಮ್ಯೂಸಿಯಮ್' (CMHR) ಮುಂದೆ ಭಾರತದ ರಾಷ್ಟ್ರಪಿತ ಗಾಂಧೀಜಿಯವರ 500 ಕೆ.ಜಿ ತೂಕದ ಕಂಚಿನ ಪುತ್ಥಳಿಯನ್ನು 2010 ರಲ್ಲಿ ಅನಾವರಣಗೊಳಿಸಲಾಗಿದೆ.

ಶಿಲ್ಪಿ : ರಾಮ್ ವಾಂಜಿ ಸುತಾರ್.

ಪ್ರಕೃತಿ ಉಳಿದರೆ ಮಾತ್ರವೇ ಎಲ್ಲ ಜೀವಜಂತುಗಳು ಉಳಿಯುತ್ತವೆ



ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಮಂಡ್ಯ ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ಇತ್ತೀಚಿಗೆ ಗಾಂಧೀಜಿ ಮೌಲ್ಯಗಳ ವಿಷಯ ಕುರಿತ ವಿಚಾರ ವಿನಿಮಯ ಮಂಡ್ಯದಲ್ಲಿ ನಡೆಯಿತು.

ಈ. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲರು ಮತ್ತು ಗಾಂಧಿ ವಿಚಾರಗಳಲ್ಲಿ ನಂಬಿಕೆಯುಳ್ಳ

ಡಾ . ಲೀಲಾ ಅಪ್ಪಾಜಿಯವರು ತಮ್ಮ ವಿಚಾರಗಳನ್ನು ಹಂಚಿಕೊಂಡರು . ಕೇರಳದ ಬೀಕರ ಪ್ರವಾಹ , ಭೂಕುಸಿತ ಮುಂತಾದ ಪರಿಸ್ಥಿತಿಯನ್ನು ನೆನಪು ಮಾಡಿ ಭೂಮಿಯು ಪ್ರತಿಯೊಬ್ಬರ ಅಗತ್ಯತೆಯನ್ನು ಪೂರೈಸುತ್ತದೆ ಹೊರತು ದುರಾಸೆಯನ್ನಲ್ಲ ಎಂಬ ಗಾಂಧೀ ವ್ಯಾಖ್ಯಾನವನ್ನು ಉಲ್ಲೇಖಿಸಿ ಗಾಂಧೀಜಿ ಯವರ ಚಿಂತನೆ ಪ್ರಸ್ತುತವೇ ಇಲ್ಲವೇ ನೀವೇ ತೀರ್ಮಾನಿಸಿ, ಪ್ರಕೃತಿ ಉಳಿದರೆ ಮಾತ್ರವೇ ಎಲ್ಲ ಜೀವ ಜಂತುಗಳು ಉಳಿಯುತ್ತವೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಎಲ್ಲರಲ್ಲಿಯೂ ಪರಿಸರ ಪ್ರೇಮ ಮೂಡಬೇಕು .ಭೂಮಿಯ ಮೇಲಿರುವ ಪ್ರತಿಯೊಂದು ಜೀವ ಸಂಕುಲಕ್ಕೂ ಪ್ರಕೃತಿಯೇ ಆಶ್ರಯ ತಾಣವಾಗಿದೆ. ಪರಿಸರ ಪ್ರೇಮ ಒಂದು ಆಚರಣೆ , ಪ್ರಚಾರಕ್ಕೆ ಸೀಮಿತವಾಗಿರುವುದು ದುರಂತವೇ ಸರಿ.ಪ್ರಾಕೃತಿಕ ವಿಕೋಪಕ್ಕಿಂತ ಮಾನವನ ದುರಾಸೆಯ ನಡೆಗಳಿಂದಲೇ ಹೆಚ್ಚೆಚ್ಚು ಹಾನಿಉಂಟಾಗಿರುವುದು , ಪರಿಸರಕ್ಕೆ ಶಾಶ್ವತ ಹಾನಿ ಮಾಡಬಾರದು , ಅನೇಕ ಸುಂದರವಾದ ತಾಣಗಳನ್ನೇ ಇಂದು ಕಸದ ತಿಪ್ಪೆಯನ್ನಾಗಿ ಸೃಷ್ಟಿ ಸಿದ್ದೇವೆ.ಈ ಬಗ್ಗೆ ಚಿಂತನೆ ನಡೆಸ ಬೇಕಿದೆ ಸಣ್ಣ ಪ್ರಮಾಣದಲ್ಲಾದರೂ ನಾವು ಬದಲಾವಣೆ ಯಾಗಬೇಕಿದೆ. ನುಡಿದಂತೆ ನಡೆಯನ್ನೂ ಅನುಸರಿಸ ಬೇಕು, ಸರಳತೆ, ಸಭ್ಯತೆ, ಪ್ರೀತಿ, ವಿಶ್ವಾಸ ಮೌಲ್ಯ ಗಳು ನಮ್ಮ ವ್ಯಕ್ತಿತ್ವವಾಗಬೇಕು . ವಂದೇ ಮಾತರಂ ಎಂದು ಕೂಗುವುದಷ್ಟೇ ದೇಶ ಪ್ರೇಮವಲ್ಲ ಸಮಾನತೆ, ಸೌಹಾರ್ದತೆ ಯಿಂದ ಎಲ್ಲಾ ಧರ್ಮದ ಜನರು ಒಟ್ಟಾಗಿ , ಭ್ರಷ್ಟ ಮುಕ್ತವಾಗಿ ಸಮಸಮಾಜ ನಿರ್ಮಾಣ ಮಾಡುವಲ್ಲಿ ಪ್ರತಿಯೊಬ್ಬ ನಾಗರೀಕರೂ ಶ್ರಮಿಸುವದು ನಿಜವಾದ ದೇಶಪ್ರೇಮ. ಪಂಕ್ತಿ ಭೇದ ಮಾಡುವುದು, ಜಾತಿ , ಧರ್ಮದ ಹೆಸರಿನಲ್ಲಿ ಮತ್ತೊಬ್ಬರನ್ನು ಹಂಗಿಸುವುದಲ್ಲ ಈ ಅಂಶವು ಯುವಜನರ ಮನಸ್ಸಿನಲ್ಲಿ ಇಳಿತ ಬೇಕಿದೆ,ಮೌಢ್ಯವನ್ನು ಅರ್ಥ ಮಾಡಿಸ ಬೇಕಿದೆ, ಎಲ್ಲರಿಗೂ ಪ್ರೀತಿಯನ್ನು ಹಂಚ ಬೇಕಿದೆ, ಸರಳತೆ ಎಂದರೆ ಬಾಯಿಯಲ್ಲಿ ಬಡಬಡಿಸುವ ಮಂತ್ರವಲ್ಲ ಅದು ಬದುಕಿನ ಭಾಗವಾಗ ಬೇಕು,ದೊಡ್ಡವರೆನಿಸಿ ಕೊಂಡವರು , ಜನಪ್ರತಿನಿಧಿಗಳು ಮೊದಲು ಇದನ್ನು ಅನುಸರಿಸ ಬೇಕಾಗಿದೆ ,ಇಲ್ಲದಿದ್ದರೆ ಜನರೆದರೇ ಬೆತ್ತಲಾಗುತ್ತಾರೆ.


ಇಸ್ರೇಲ್ ಇರಾನ್ – ಗಾಜಾ ದ ಯುದ್ದಗಳನ್ನು ಪ್ರಸ್ತಾಪಿಸಿ ಯಾವುದೇ ಯುದ್ದವು ವಿಜಯೋತ್ಸವಾಗ ಬೇಕಿಲ್ಲ ವಿರೋಧಿ ಪಡೆಯ ಹಲವು ಜನರು ಅಸುನೀಗಿರುತ್ತಾರೆ ಅಹಿಂಸೆ , ಶಾಂತಿ ,ಸ್ನೇಹ , ಸೌಹಾರ್ದ ಭಾರತದ ಮಂತ್ರವಾಗ ಬೇಕು ಯಾರ ಪರ ವಿರೋಧದ ನಿಲುವಲ್ಲ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಭಾರತ ಒಂದು ಶಾಂತಿಯ ಮರ ಇಲ್ಲಿ ಎಲ್ಲ ಧರ್ಮ ಜಾತಿಯವರೂ ಒಂದೇ . ಶಿಕ್ಷಣದ ಗುರಿ ಸೇವೆ ಆದರ್ಶಗಳನ್ನು ಕಲಿಸುವುದಾಗಿರ ಬೇಕು ಹಣ ಮಾಡುವುದಲ್ಲ,ಪ್ರತಿಭಾಪಲಾಯನವು ಭಾರತಕ್ಕೆ ಶಾಪವಾಗಿದೆ. ಹಣದ ಹಿಂದೆ ಬಿದ್ದರೆ ಮೌಲ್ಯಗಳು ನಶಿಸುತ್ತವೆ, ಇದರಿಂದ ಸಮಾಜ ಅಸ್ತವ್ಯಸ್ತ ವಾಗುತ್ತದೆ.ಒಂದು ಕಡೆ ಒಂದು ಪತ್ಯ ಪುಸ್ತಕ ತೆಗೆದುಕೊಳ್ಳಲು ಪರದಾಡುತ್ತಿದ್ದರೆ ಮತ್ತೊಂದು ಕಡೆ ಐಶಾರಾಮಿ ಬದುಕು, ಮದುವೆ ಸಮಾರಂಭಗಳು ನಡೆಯುತ್ತಲಿವೆ. ನಾನಿಲ್ಲಿ ಶ್ರೀಮಂತರನ್ನು ದೂಷಿಸುತ್ತಿಲ್ಲ . ಅವರು ಆತ್ಮಾವಲೋಕನ ಮಾಡಿಕೊಳ್ಳ ಬೇಕಿದೆ , ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳ ಬೇಕಿದೆ . ಕೋಪ ತಾಪ ನೆರೆಹೊರೆಯವರನ್ನು ಗೌರವಿಸುವುದು, ಪ್ರೀತಿಸುವುದು, ಕ್ಷಮಿಸುವುದನ್ನು ಕಲಿಯ ಬೇಕು .ಸರಳತೆ, ಅಹಿಂಸೆ ನಮ್ಮ ವ್ಯಕ್ತಿತ್ವವಾಗ ಬೇಕು ದ್ವೇಷ ಕಾರುವ, ಮತ್ತೊಬ್ಬರ ಕೇಡನ್ನು ಸಂಭ್ರಮಿಸುವ ,ಭ್ರಷ್ಟ ಹಣಕ್ಕೆ ಕೈ ಹಾಕುವ ಮನಸ್ಥಿತಿ ಯುವಕರಲ್ಲಿ ಬರಕೂಡದು ಬದಲಾವಣೆ ನಮ್ಮಿಂದಲೇ ಆರಂಭ ವಾಗಲಿ ಎಂಬ ಅನೇಕ ಮಾತುಗಳನ್ನು ಯುವಮನಸ್ಸುಗಳೊಂದಿಗೆ ಹಂಚಿ ಕೊಂಡರು .

GANDHI गांधी
SMARAK स्मारक
NIDHI निधि
75 years
1948 - 2023

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ , ಬೆಂಗಳೂರು



ನವದೆಹಲಿಯ ಕೇಂದ್ರ ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷದ ಸಂಸ್ಮರಣೆಗಾಗಿ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ


21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ

ಭವಿಷ್ಯದ ಶಾಂತಿ, ನ್ಯಾಯ, ಸಹೋದರತ್ವ ಮತ್ತು ಸುಸ್ಥಿರ ಅಭಿವೃದ್ಧಿಯ ನಿರ್ಮಾಣಕ್ಕಾಗಿ

24 -25, ಆಗಸ್ಟ್ 2024

ಗಾಂಧಿ ಭವನ
ಕುಮಾರಪಾರ್ಕ್ ಪೂರ್ವ, ಬೆಂಗಳೂರು -560001

ಆಗಸ್ಟ್ 24 –25, 2024 ರಂದು ನಡೆಯಲಿರುವ ಎರಡು ದಿನಗಳ ಅಂತರ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ನಿಮ್ಮನ್ನು ಆಹ್ವಾನಿಸುತ್ತಿದೆ. ನವದೆಹಲಿಯಲ್ಲಿ 1949ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಖ್ಯಾತಿಯ ಕೇಂದ್ರ ಗಾಂಧಿ ಸ್ಮಾರಕ ನಿಧಿಯ 75 ನೇ ವರ್ಷದ ಸಂಸ್ಮರಣೆಗಾಗಿ ಈ ವಿಚಾರ ಸಂಕಿರಣವನ್ನು ಆಯೋಜಿಸಲಾಗುತ್ತಿದೆ .



ಇನ್ನಿನಿಸು ದಿನ ಮಹಾತ್ಮ ನೀ ಬದುಕಬೇಕಿತ್ತು

–ಜಿ.ಎನ್. ಮೋಹನ್.

'ಒಂದ್ನಿಮಿಷ ಬರ್ತೀನಿ ಇರಿ' ಎಂದು ಟೆಡ್ ಟರ್ನರ್ ತಮ್ಮ ಖಾಸಗಿ ಕೋಣೆ ಹೊಕ್ಕರು.

ಜಗತ್ತಿಗೆ ಜಗತ್ತೇ ನಿಬ್ಬೆರಗಾಗುವಂತೆ ಟೆಡ್ ಟರ್ನರ್ ಬೆಳೆದು ನಿಂತು ಬಿಟ್ಟಿದ್ದರು.

ಮನೆಯ ಮೂಲೆಯಲ್ಲಿ ಕಣ್ಣೀರು ಉಕ್ಕಿಸುವ,

ಹ ಹ ಹಾ ಎಂದು ಲಾಫರ್ ಕ್ಲಬ್ ಗಳಂತೆ ನಗಿಸುವ ವಸ್ತುವಾಗಿದ್ದ ದೂರದರ್ಶನ ಈಗ ಅಫೀಮಿನಂತೆ ಆಗಿ ಹೋಗಿತ್ತು.

ಟೆಡ್ ಟರ್ನರ್ ಕೊಲ್ಲಿ ಯುದ್ಧಕ್ಕೆ ಆಂಟೆನಾ ಜೋಡಿಸಿದ್ದೇ ತಡ ಜಗತ್ತು ಟೆಲಿವಿಷನ್ ಎಂಬ ಮಾಯಾ ಜಿಂಕೆಯ ಬೆನ್ನ ಹಿಂದೆ ಬಿತ್ತು.

ಮತ್ತೆ ಬಾಗಿಲು ತೆರೆದು ಟೆಡ್ ಟರ್ನರ್ ನಮ್ಮ ಮುಂದೆ ನಿಂತಾಗ ಅವರ ಕೈಯಲ್ಲಿ ಒಂದು ಪುಟ್ಟ ಪ್ರತಿಮೆ.

ಟೆಡ್ ಜೊತೆ ಲೋಕಾಭಿರಾಮವಾಗಿ ಹರಟೆ ಕೊಚ್ಚುತ್ತಾ 'ನಿಮಗೆ ತೀರಾ ಇಷ್ಟವಾದವರು ಯಾರು ?

ಜೇನ್ ಫಾಂಡಾಳನ್ನು ಬಿಟ್ಟರೆ..' ಅಂತ ಕೇಳಿದ್ದೆ.

ಅದಕ್ಕೆ ಉತ್ತರವಾಗಿ ಟೆಡ್ ಈ ಪ್ರತಿಮೆ ಹಿಡಿದು ನಿಂತಿದ್ದರು.

'ವಾಹ್, ಗಾಂಧಿ !' ಅಂತ ಆಶ್ಚರ್ಯದ ಉದ್ಗಾರ ಹೊರಟಿದ್ದು ನನ್ನಿಂದ ಮಾತ್ರವಲ್ಲ ಪಕ್ಕದಲ್ಲಿಯೇ ಚಿಲಿ, ದಕ್ಷಿಣ ಆಫ್ರಿಕಾ, ಸ್ಲೊವೇನಿಯಾ. ಜೆಕ್, ಜರ್ಮನಿ, ಕೀನ್ಯಾ, ಕೊರಿಯಾ, ಜಪಾನ್, ಆಸ್ಟ್ರೇಲಿಯಾ ದೇಶದ ಎಲ್ಲರ ಬಾಯಿಂದಲೂ ಈ ಉದ್ಗಾರ ಹೊರಬಿತ್ತು.

ಇನ್ನೇನು ಸಿ ಎನ್ ಎನ್ ಕಚೇರಿಯಿಂದ ಬೀಳ್ಕೊಳ್ಳಲು ಎರಡೇ ಎರಡು ದಿನ ಬಾಕಿ ಇತ್ತು.

ಅಟ್ಲಾಂಟಾದ ಮೂಲೆ ಮೂಲೆಯನ್ನೆಲ್ಲಾ ಜಾಲಾಡಿ ಬಿಡೋಣಾ ಎಂದು ದಂಡು ಕಟ್ಟಿ ಹೊರಟಿದ್ದು ಮಾರ್ಟಿನ್ ಲೂಥರ್ ಕಿಂಗ್ ನೆನಪಿನ ಮನೆಗೆ.

ಇನ್ನೂ ಕಾಂಪೌಂಡ್ ಒಳಗೆ ಕಾಲಿಟ್ಟಿರಲಿಲ್ಲ.

ಅಲ್ಲಿ ಆಳೆತ್ತರದ ಪ್ರತಿಮೆ – ಅದು ಗಾಂಧಿ.

ನನ್ನ ಜೊತೆಯಲ್ಲಿಯೇ ಹೆಜ್ಜೆ ಹಾಕುತ್ತಿದ್ದ ದಕ್ಷಿಣ ಆಫ್ರಿಕಾದ ನೋಕ್ವಾಸಿ ಶಬಲಾಲ ಓಡಿಹೋಗಿ

ಆ ಗಾಂಧಿಯ ಕೆನ್ನೆಗೊಂದು ಮುತ್ತು ತೂರಿದಳು.

ನನ್ನ ಕ್ಯಾಮೆರಾ 'ಕ್ಲಿಕ್' ಎಂದಿತು.

ಶಾಪ್ ಹಾಪಿಂಗ್ ಮಾಡುತ್ತಾ ಮಾಡುತ್ತಾ ಸಮಯ ರಾತ್ರಿ ಮೂರರ ಗಡಿ ದಾಟಿತ್ತು.

ಗೆಳೆಯರ ಜೊತೆ ಇನ್ನೂ ಸುತ್ತುವುದಕ್ಕೆ ನಾನು ಸಿದ್ದನಿರಲಿಲ್ಲ. ಎಲ್ಲರಿಗೂ ಒಳ್ಳೆಯ ಹಗ್ ಕೊಟ್ಟು 'ಗುಡ್ ಬೈ' ಹೇಳಿದೆ. 'ಹುಷಾರು, ಇದು ಅಮೇರಿಕಾ, ಒಬ್ಬನೇ ಹೋಗುತ್ತಿದ್ದೀಯಾ' ಎಂದು ಜೆಕ್ ಗೆಳೆಯ ಮೆರೆಕ್ ಬ್ರಾಷ್ಕಿ ಪಿಸುಗಟ್ಟಿದ.

ಭಾರತದಿಂದ ಹೊರಡುವಾಗಲೂ ಎಲ್ಲರದ್ದೂ ಇದೇ ಕಿವಿಮಾತು ಟ್ಯಾಕ್ಸಿ ಏರಿದೆ. ಜೇಬಿನಲ್ಲಿದ್ದ ಪಾಸ್ ಪೋರ್ಟ್, ಡಾಲರ್ ಗಳ ಮೇಲೆ ಎರಡಲ್ಲ, ಹತ್ತು ಕಣ್ಣಿಟ್ಟಿದ್ದೆ.

ರೊಯ್ಯಂನೆ ಬೀದಿ ಬೀದಿ ಸುತ್ತಿದ ಟ್ಯಾಕ್ಸಿ ನನ್ನ ಹೋಟಲ್ ಮುಂದೆ ನಿಂತಿತ್ತು. ಟ್ಯಾಕ್ಸಿ ಮೀಟರ್, ಅದಕ್ಕೆ ಹತ್ತು ಪರ್ಸೆಂಟ್

ಟಿಪ್ಸ್ ಸೇರಿಸಿ ಡ್ರೈವರ್ ಕೈಗಿಟ್ಟೆ.

ನಾನು ಟಿಪ್ಸ್ ಎಂದು ಕೊಟ್ಟ ಹತ್ತು ಡಾಲರ್ ನೋಟನ್ನು ಆತ ನನ್ನ ಕೈಗೇ ತುರುಕಿದ.

ಯಾಕೆ ಎಂದು ಕೇಳಿದೆ. 'ಗಾಂಧಿ?' ಅಂತ ಕೇಳಿದ .

ನಾನು 'ಯಸ್, ಇಂಡಿಯಾ' ಎಂದೆ. ಕೈ ಬೀಸುತ್ತಾ ಹೊರಟೇ ಬಿಟ್ಟ.

ಗೆಳತಿ ನೇಮಿಚಂದ್ರ ಪೆರುವಿನ ಪವಿತ್ರ ಕಣಿವೆಗಳನ್ನು ಹುಡುಕುತ್ತಾ ದಕ್ಷಿಣ ಅಮೆರಿಕಾ ಹೊಕ್ಕಿದ್ದರು.

ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ ? ಎಂಬಂತೆ ಸ್ಪಾನಿಷ್ ನೆಲದಲ್ಲಿ ಇಂಗ್ಲಿಷ್ ಗೇನು ಕೆಲಸ ?. ಹೇಗಪ್ಪಾ ಇಲ್ಲಿನವರ ಜೊತೆ ಮಾತಾಡುವುದು ಎಂದು ನೇಮಿ ಕಕ್ಕಾಬಿಕ್ಕಿಯಾಗಿದ್ದರು.

ಆದರೆ, ಅದು ಕೆಲವೇ ಕ್ಷಣ ಅಷ್ಟೆ. ಜನ ಅವರನ್ನು ಮುತ್ತಿಕೊಳ್ಳತೊಡಗಿದ್ದರು.

ಎಲ್ಲರ ಬಾಯಲ್ಲೂ 'ಗ್ಯಾಂಡಿ' ಪದ. ಗೊತ್ತಿಲ್ಲದ ದೇಶದಲ್ಲಿ ಗಾಂಧಿ ಮಾತು ಕೂಡಿಸುವ ಸೇತುವೆಯಾಗಿ ಹೋಗಿದ್ದರು.

ಅದೆಲ್ಲಾ ಬಿಡಿ, ಒಬ್ಬ ಪುಟ್ಟ ಹುಡುಗಿ ಬರಾಕ್ ಒಬಾಮಾಗೆ ಪ್ರಶ್ನೆ ಎಸೆದಳು. 'ನೀವು ಔತಣ ಕೂಟ ಏರ್ಪಡಿಸಿದರೆ ಅದಕ್ಕೆ ಆಹ್ವಾನಿಸಬೇಕೆಂದು ಬಯಸುವವರ ಪೈಕಿ ಮೊದಲು ಯಾರು ನಿಲ್ಲುತ್ತಾರೆ ?'.

ಒಬಾಮ ಒಂದು ಕ್ಷಣವೂ ತಡಮಾಡದೆ ಹೇಳಿದರು – ಗಾಂಧಿ.

ಅಮೇರಿಕಾದಿಂದ ಬೀಳ್ಕೊಡುವಾಗ ನೆನಪಿಗೆಂದು ನಾನು ಇಲ್ಲಿಂದ ಕೊಂಡೊಯ್ದಿದ್ದ ಗಣೇಶನನ್ನು ಕೈಗಿಡುತ್ತಿದ್ದೆ. ತಕ್ಷಣ ಅವರು ಇನ್ನೊಂದು ಕೈಯನ್ನೂ ಚಾಚುತ್ತಿದ್ದರು. 'One Gandhi please…' ಎನ್ನುತ್ತಿದ್ದರು.

ನನಗೆ 'ಡೆಕ್ಕನ್ ಹೆರಾಲ್ಡ್'ನಲ್ಲಿ ರಾಮಮೂರ್ತಿ ಬರೆದ ಕಾರ್ಟೂನ್ ನೆನಪಿಗೆ ಬಂತು. ಅಪ್ಪ, ಮಗ ಗಾಂಧಿ ಪ್ರತಿಮೆಯ ಮುಂದೆ ಹಾದು ಹೋಗುತ್ತಿದ್ದಾರೆ.

ಪ್ರತಿಮೆ ತೋರಿಸಿ ಮಗ ಅಪ್ಪನಿಗೆ ಕೂಗಿ ಹೇಳ್ತಿದಾನೆ– 'ಅಪ್ಪಾ ಬೆನ್ ಕಿಂಗ್ಲೆ' ರಿಚರ್ಡ್ ಆಟಿನ್ ಬರೋ ನಿರ್ದೇಶಿಸಿದ ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರ 'ಗಾಂಧಿ' ಸಿನಿಮಾದಲ್ಲಿ ಗಾಂಧಿ ಪಾತ್ರ ಮಾಡಿದ ನಟ ಬೆನ್ ಕಿಂಗ್ಲೆ.ಇವತ್ತು ಗಾಂಧಿಗೂ ಬೆನ್ ಕಿಂಗ್ಲೆಗೂ ಇರುವ ಗೆರೆಯೇ ಅಳಿಸಿಹೋಗುತ್ತಿದೆ.

ಎಚ್ ನಾಗವೇಣಿ ಬರೆದ 'ಗಾಂಧಿ ಬಂದ' ನನ್ನನ್ನು ಮತ್ತೆ ಮತ್ತೆ ಸೆಳೆದು ಕೊಳ್ಳುವ ಕೃತಿ. ಅಂದಿನ 'ಕನ್ನಡ' ಜಿಲ್ಲೆಗೆ ಗಾಂಧಿ ಬಂದ ಹಿನ್ನೆಲೆಯಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುವ ಕಥನ ಇದು.

ಗೊತ್ತಿಲ್ಲದ ಒಬ್ಬ ಗಾಂಧಿ ಎಲ್ಲಿಯೋ ಇರುವವರನ್ನು ಬದಲಿಸುತ್ತಾ ಹೋಗುತ್ತಾನೆ. 'ಗಾಂಧಿ ಬಂದ' ಎಂಬ ಹೆಸರಿಡುವ ಮುನ್ನ ಕಲಾವಿದ ಸುದೇಶ್ ಮಹಾನ್ ಕಾದಂಬರಿಗೆ 'ಮಾಯಿದ ಪುರುಷ' ಎನ್ನುವ ಹೆಸರಿಡ ಬೇಕು ಎಂದು ನಾಗವೇಣಿಯ ಜೊತೆ ವಾದ ಮಾಡುತ್ತಾ ಇದ್ದ.

ಮಾಧ್ಯಮ ಲೋಕದ ಬಹುದೊಡ್ಡ ಥಿಯರಿ "medium is the message " ಎನ್ನುವುದು ನೆನಪಿಗೆ ಬಂದಾಗ . ಹೌದಲ್ಲಾ ಗಾಂಧಿ ಎಂಬ ಗಾಂಧಿ ತಾವೇ ಒಂದು ಸಂದೇಶವಾಗಿ ಬದುಕಿಬಿಟ್ಟರು.

'ಲಂಕೇಶ್ ಪತ್ರಿಕೆ' ಮಾರುಕಟ್ಟೆಗೆ ಬಂದಾಗ ನಮಗೆಲ್ಲಾ ಆಶ್ಚರ್ಯವಾಗಿ ಹೋಗಿತ್ತು. ಜಾಹಿರಾತು ಇಲ್ಲದೆ ಬದುಕುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆ ಕುಣಿದಾಡುತ್ತಿತ್ತು. ಏನೇ ಬರಲಿ, ಜಾಹಿರಾತು ನನ್ನ ಪತ್ರಿಕೆಯಲ್ಲಿರುವುದಿಲ್ಲ ಎಂದು ಲಂಕೇಶ್ ಘೋಷಿಸಿ ಕುಳಿತಿದ್ದರು.

ಜಾಹಿರಾತಿಲ್ಲದೆ ಒಂದು ಪತ್ರಿಕೆ ನಡೆಸಲು ಸಾಧ್ಯ ಎಂಬುದನ್ನು ಗಾಂಧಿ ತೋರಿಸಿಕೊಟ್ಟಿದ್ದರು ಎಂಬುವುದು ಅರ್ಥವಾಗುತ್ತಿರುವುದು ಈಗ.

ಗಾಂಧೀಜಿಗೆ ವೈದ್ಯರೊಬ್ಬರು ಬೆಡ್ ರೆಸ್ಟ್ ಹೇಳಿದರು. ಮಲಗಿ ಸಾಕಾದ ಗಾಂಧೀಜಿ ಪತ್ರಿಕೆಯ ಪ್ರಬಂಧ, ಜಾಹಿರಾತು ತಿರುವಿಹಾಕುತ್ತಾ ಹೋದರು.

ಜಾಹಿರಾತಿನ ಬಗ್ಗೆ ಅವರ ಅಸಹನೆ ಎಷ್ಟು ಹೆಚ್ಚುತ್ತಾ ಹೋಯಿತೆಂದರೆ 'ಅಯೋಗ್ಯ ಜಾಹಿರಾತು' ಅನ್ನುವ ಸಂಪಾದಕೀಯವನ್ನೇ ಬರೆದರು.

ಗಾಂಧಿಯವರ ವಾದ ಇಷ್ಟೆ. ಯೋಗದ ಪುಸ್ತಕ ಅಂತ ಜಾಹಿರಾತು ಕೊಡುತ್ತಾರೆ, ಆದರೆ ಆ ಪುಸ್ತಕ ಪಟ್ಟಿ ನೋಡಿದರೆ ಅಲ್ಲಿರೋದು ಒಂದೇ ಒಂದು ಯೋಗದ ಪುಸ್ತಕ . ಇನ್ನುಳಿದದ್ದೆಲ್ಲಾ ಸೆಕ್ಸ್ ಬುಕ್ ಗಳು ಅನ್ನೋ ಆಕ್ರೋಶ ಅವರದ್ದು. ಇದನ್ನೆಲ್ಲಾ ನನ್ನ ಪತ್ರಿಕೆಗೆ ಹೇಗೆ ತರಲಿ ಅನ್ನೋ ತಲೆ ಬಿಸಿ ಅವರದ್ದು.

ಗಾಂಧಿಗೆ ಪತ್ರಿಕೋದ್ಯಮ ಅನ್ನೋದು ಬರಿ ಪತ್ರಿಕೋದ್ಯಮ ಆಗಿರಲಿಲ್ಲ. ಅವರೇ ಹೇಳಿಕೊಳ್ಳುವ ಪ್ರಕಾರ ಅದು ಅವರ ಆತ್ಮದ ತಳಮಳಕ್ಕೆ ನೀಡಿದ ಅಕ್ಷರ ರೂಪವಾಗಿತ್ತು.

ಗಾಂಧಿಗೆ ಗಾಂಧಿಯನ್ನು ನೋಡಿಕೊಳ್ಳುವ ಒಂದು ಕನ್ನಡಿಯಾಗಿ ಅದು ರೂಪುಗೊಳ್ಳುತ್ತಿತ್ತು. ಗಾಂಧಿ ಪತ್ರಿಕೆಗೆ ಬರೆಯುತ್ತಲೇ ತಮ್ಮ ದೌರ್ಬಲ್ಯಗಳನ್ನೂ ಕಂಡುಕೊಳ್ಳುತ್ತಾ ಹೋದರು.

ಪತ್ರಿಕೆ ಎನ್ನುವುದು ಒಂದು ಉದ್ಯಮ ಆಗುವುದೇ ಗಾಂಧಿಗೆ ಸರಿ ಬರದ ವಿಚಾರವಾಗಿತ್ತು.

Journalism should never be prostituted for selfish ends or for the sake of carrying livelihood ಅಂದಿದ್ದರು.

ಭಾರತದ ಪತ್ರಿಕೋದ್ಯಮ ಅಂದರೆ ಬ್ರಿಟಿಷರು ಕಿಸಕ್ಕನೆ ನಗುವ ಪರಿಸ್ಥಿತಿ ಇತ್ತು.

ಭಾರತದ ಪತ್ರಿಕೆ ಓದಿದರೆ ಅರೇಬಿಯನ್ ನೈಟ್ಸ್ ಕಥೆ ಓದಿದ ಹಾಗಿರುತ್ತದೆ ಅಂತ ಬ್ರಿಟನ್ನಿನ ಪ್ರಧಾನಿ ಬೆಂಜಮಿನ್ ಡಿಸ್ರೇಲಿ ನಗಾಡಿದ್ದ.

ಅಂತಹ ಕಾಲದಲ್ಲೇ ಗಾಂಧಿ ಪತ್ರಿಕೆಯ ಅಂಗಳ

ಪ್ರವೇಶಿಸಿದರು. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬರುವಾಗ ಗಾಂಧಿ ರೈಲು ಡಬ್ಬಿಯಿಂದ ಬಿಳಿಯರು ಎಸೆದ ಸೂಟ್ ಕೇಸನ್ನು ಮಾತ್ರ ಹೊತ್ತು ತರಲಿಲ್ಲ. ಪ್ರತಿಭಟನೆಯ ಕಿಚ್ಚನ್ನೂ, ಪತ್ರಿಕೆ ಎಂಬ ಕಂದೀಲನ್ನೂ ಹಿಡಿದುಕೊಂಡೇ ಬಂದರು.

ಯಂಗ್ ಇಂಡಿಯಾ ಕೈಗೆತ್ತಿಕೊಂಡರು.

ನವ ಜೀವನ, ಸತ್ಯಾಗ್ರಹಿ, ಹರಿಜನ, ಹರಿಜನ ಬಂಧು, ಹರಿಜನ ಸೇವಕ . ಹತ್ತು ಭಾಷೆಯನ್ನು ಆವರಿಸಿ ನಿಂತರು. ಅಷ್ಟೇ ಅಲ್ಲ, ಏನಿಲ್ಲೆಂದರೂ ಐದು ದಶಕ ಅವರಿಗೆ ಪತ್ರಿಕೆ ಇನ್ನೊಂದು ಊರುಗೋಲೇ ಆಗಿಹೋಗಿತ್ತು.

ಪತ್ರಿಕೆಗೆ ಒಂದು ಎಥಿಕ್ಸ್ ಇರ್ಬೇಕು ಅನ್ನೋದು ಗಾಂಧಿಯವರಿಗೆ ಗೊತ್ತಾಗಿತ್ತು. 'ಜಾಹೀರಾತಿಲ್ಲದೆ ಪತ್ರಿಕೆ ನಡೆಸೋದಕ್ಕಾಗಲ್ಲ ಅಂತ ಸುಳ್ಳು ಹೇಳೋ ಜಾಹೀರಾತೆಲ್ಲಾ ಹಾಕೋದಿಕ್ಕೆ ಆಗುತ್ತಾ.

ಒಂದಿಷ್ಟು ನೀತಿ ನಿಯಮ ಇರ್ಬೇಕು, ಪತ್ರಕರ್ತರ ಸಂಘಗಳು ನಿಬಂಧನೆ ಮಾಡ್ಬೇಕು' ಅಂತಿದ್ರು.

ಸಂತೋಷ್ ಕುಮಾರ್ ಗುಲ್ವಾಡಿ ಅವರ ಪುಸ್ತಕ ತೆಗೆದು ನೋಡಿ. ಗಾಂಧಿ ಹೇಳಿದರಂತೆ – 'ಪತ್ರಕರ್ತರು ನಡೆದಾಡೋ ಪ್ಲೇಗ್ ನಂತ ಮಹಾರೋಗಿಗಳು. ಪತ್ರಿಕೆಗಳು ಬೈಬಲ್, ಕುರಾನ್, ಗೀತೆ ಎಲ್ಲವನ್ನೂ ಒಂದರಲ್ಲೇ ಅಳವಡಿಸೋ ಕೃತಿಗಳಾಗಿವೆ. ಇಷ್ಟರಲ್ಲೇ ರಾಜಕೀಯ ದೊಂಬಿಯಾಗಲಿದೆ ಅಂತ ಪತ್ರಿಕೆಗಳಲ್ಲಿ ಪ್ರಕಟವಾದರೆ ದೆಹಲಿಯಲ್ಲಿರುವ ಎಲ್ಲಾ ಕತ್ತಿ, ಬಾರುಕೋಲುಗಳು ಕ್ಷಣ ಮಾತ್ರದೊಳಗೆ ಮಾರಾಟವಾಗುತ್ತವೆ. ಜನರು ಧೈರ್ಯಶಾಲಿಗಳಾಗಬೇಕೆಂದು ಪತ್ರಿಕೆಗಳು ಕಲಿಸಿಕೊಡಬೇಕೇ ಹೊರತು ಅವರಲ್ಲಿ ಭಯವನ್ನು ಹುಟ್ಟಿಸುವುದಲ್ಲ'.

ಕಾಲೇಜಿನಲ್ಲಿದ್ದಾಗ ನಮ್ಮ ನಡುವೆ ಒಂದು ಹಾಡು ಭಾರೀ ಪಾಪ್ಯುಲರ್ ಆಗಿತ್ತು.

'ಗಾಂಧಿ ಹೇಳಿಕೊಟ್ಟ ಪಾಠ, ಗುರುವಿಗೆ ತಿರುಮಂತ್ರ ಮಾಟ, ಸತ್ಯಾಗ್ರಹ– ಸ್ಟ್ರೈಕ್, ಸ್ಟ್ರೈಕ್, ಸ್ಟ್ರೈಕ್ '

ಅಂತ ಹೇಳಿ ಸ್ಟ್ರೈಕ್ ಗೆ ಇಳೀತಿದ್ವಿ.

ಈಗ 'ಗಾಂಧಿ ಜರ್ನಲಿಸಂ'ಗೆ ಬಂದಿರೋ ಸ್ಥಿತೀನೂ ಅದೇ.

ಇವತ್ತಿನ ಪತ್ರಿಕೋದ್ಯಮ ಗಾಂಧಿ ಎಂಬ ಗುರುವಿಗೇ ತಿರುಮಂತ್ರ ಹೇಳುತ್ತಿದೆ.

ಗಾಂಧಿಯ ನೆನಪಿನ ಓಣಿಯಲ್ಲಿ ನಡೆಯುತ್ತಾ ಇರುವಾಗ ಏಕೋ ಗೋವಿಂದ ಪೈ ಬರೆದ

'ಇನ್ನಿನಿಸು ದಿನ ಮಹಾತ್ಮ ನೀ ಬದುಕಬೇಕಿತ್ತು ' ಸಾಲುಗಳು ನೆನಪಿಗೆ ಬಂತು.

ಹೌದು, ನೀ ಇನ್ನಿನಿಸು ದಿನ..

■

ನಾನೇನು ಅರಸುತ್ತಿದ್ದೇನೆ ?

– ಅಕ್ಬರ್ ಅಹಮದ್

ಅಮೇರಿಕಾದ ಕವಿ ರಾಯಭಾರಿ ಅಕ್ಬರ್ ಅಹಮದ್ ಪ್ರಸ್ತುತ ವಾಷಿಂಗ್ಟನ್ ಡಿಸಿ ಯ ಅಮೇರಿಕಾ ವಿಶ್ವವಿದ್ಯಾಲಯದ ಅಂತರ ರಾಷ್ಟ್ರೀಯ ಶಾಲೆಯಲ್ಲಿನ ಇಸ್ಲಾಂ ಅಧ್ಯಯನ ಪೀಠದಲ್ಲಿರುವ ಪಾಕಿಸ್ತಾನದ ನಿವೃತ್ತ ರಾಯಭಾರಿ .ಅವರಿಗೆ ಮಹಾತ್ಮ ಗಾಂಧೀಜಿಯವರ ಬಗ್ಗೆ ಅಪರಿಮಿತ ಅಭಿಮಾನ . ಮಾನವೀಯತೆ ನಮ್ಮ ವಿಶ್ವ ಸಂದೇಶವಾಗಬೇಕು ಎನ್ನುವ ನಿಲುವು ಅವರದ್ದು . ಅವರ ಕವನ ಸಂಕಲನದಲ್ಲಿ ಮಾನವೀಯತೆ ಮಿಡಿಯುವ ಹಲವು ಕವಿತೆಗಳಿವೆ . ಪ್ರೀತಿಯ ಅಪರಿಮಿತ ಶಕ್ತಿಯನ್ನು ಬಣ್ಣಿಸುವ ಅಕ್ಬರ್ ಅಹಮದ್ ಅವರ ಈ ಕವಿತೆ ನಿಮ್ಮ ಓದಿಗಾಗಿ ..

ಆ ಅಂಥ ದೈತ್ಯ ಬಲವನು
ಅದು ಬಿಡುಗಡೆಗೊಳಿಸುತ್ತದೆ ನನ್ನನು
ಆ ಬೆಳಕು ಎಂಥ ಹೊಳಪು
ಅದು ಕುರುಡಾಗಿಸುತ್ತದೆ ನನ್ನನು

ಅದನ್ನು ನಾನು ನೈಟಿಂಗೇಲ್ ದನಿಯಲ್ಲಿ ಕೇಳಿದೆ
ನನಗೆ ಗೊತ್ತು ; ಅದು ಜಾಣರ ಹೃದಯದಲ್ಲಿತ್ತು
ಅದನ್ನು ನಾನು ಪ್ರೇಮಿಗಳ ಕಥೆಯಲ್ಲಿ ಓದಿದೆ
ಅದನ್ನು ನಾನು ನಿನ್ನ ಕಂಗಳಲ್ಲಿ ನೋಡಿದೆ

ಅದನ್ನು ನಾನು ರೂಮಿಯ ಕವಿತೆಯಲ್ಲಿ ಕೇಳಿದೆ
ನನಗೆ ಗೊತ್ತು ; ಅದು ಗಾಂಧಿಯ ನೋಟದಲ್ಲಿಯೂ ಇತ್ತು
ಅದನ್ನು ನಾನು ಮಂಡೇಲಾರ ವಾಗ್ಝರಿಯಲ್ಲಿ ಗ್ರಹಿಸಿದೆ
ಅದನ್ನು ನಾನು ಜೀಸಸ್ ರ ಹಾದಿಯಲ್ಲಿ ನೋಡಿದೆ

ಇದೇನು ಒಗಟು; ಅದರಲ್ಲಿ ಇರುವುದೇನು ?
ಇದೇನು ನಿಗೂಢ ; ವಿಸ್ಮಯ ?
ಹೃದಯದ ಗುಟ್ಟುಗಳ ರಟ್ಟು ಮಾಡುವ ಅದು ಯಾವುದು ?
ನನ್ನ ಬದಲಿಸುವ ಆ ಶಕ್ತಿ ಯಾವುದಿದೆ ?

ಅದು ದೇವರ ಉನ್ನತ ಕೊಡುಗೆ
ಅದು ನಮ್ಮನ್ನು ಎತ್ತರೆತ್ತರಕ್ಕೆ ಒಯ್ಯುತ್ತದೆ
ಅದು ಮನಸ್ತಾಪಕ್ಕೂ ಮೇಲಿರುವ ಪರ್ವತಶಿಖರ
ಅದು ಪ್ರೀತಿ , ಪ್ರೀತಿ , ಪ್ರೀತಿ
ಅದನ್ನು ಉದಾರವಾಗಿ ನೀಡು
ಅದನ್ನು ನಾಳೆಯೇ ಇಲ್ಲವೇನೋ ಎನ್ನುವಂತೆ ನೀಡು
ಈ ನಿಧಿಯನ್ನು ನೀನು ಭೇಟಿ ಮಾಡಿದವರೆಲ್ಲರಿಗೂ ನೀಡು
ಅದನ್ನು ನೀಡು.. ನೀಡು ಮತ್ತು ದುಃಖವನು ಗಡಿಪಾರು ಮಾಡು

ಮೂಲ ಕವಿತೆ : ಅಕ್ಬರ್ ಅಹ್ಮದ್
ಅನುವಾದ : ವಿಶುಕುಮಾರ್

WHAT IS IT THAT I SEEK?

Akbar Ahamed



What is it that I seek?
A force of such might
it sets me free
A light so bright
it blinds me

I heard it in the voice of the nightingale
I know it was in the hearts of the wise
I sensed it in the lover's tale
I saw it in your eyes

I heard it in Rumi's poetry
I know it was in Gandhi's gaze
I sensed it in Mandela's oratory
I saw it in Jesus' ways

What is this riddle and what is its part?
What is this enigma and mystery?
What can reveal the secrets of the heart
What has the power to change me?

It is God's greatest gift
It raises us high above
It is the ridge over the rift
It is love, love, love

Give it in generous measure
Give it as if there's no tomorrow
Give to all you meet this treasure
Give it and banish sorrow.

Ambassador Akbar Ahmed, "the world's leading authority on contemporary Islam," as declared by the BBC, had been asked to share his poetry on "The Poet and The Poem," a prestigious podcast published by the Library of Congress.

The symbolism was particularly striking when I considered the recent rhetoric I had been hearing from major media outlets concerning Islam in America today. And yet, here was Ahmed, Ibn Khaldun Chair of Islamic Studies at American University's School of International Service, entering America's monument for knowledge to read his poetry about love, about peace, and about Islam.

RELATED: The Library of Congress podcast is available at http://www.loc.gov/poetry/media/avfiles/poet-poem-akbarahmed.mp3 Audio Player.

As concerned U.S. and European citizens question the place of Islam in society, and as

presidential candidates spout generalisations and prohibitions on entire communities, many are left wondering how vastly different cultures can coexist in the wake of the Syrian migrant crisis. Ahmed's recently released documentary, Journey Into Europe explores this predicament through fieldwork researching Muslim identity in Europe.

But while Ahmed's ethnographic study presents a compelling academic argument detailing the steps Europe can take to ease religious tensions, his poetry reveals an even simpler explanation. "It is love, love, love", Ahmed writes in his poem, What is it that I seek? He includes names from Abrahamic and non-Abrahamic traditions. There can be no boundaries in the embrace of love.

Discussing and reading from his poetry on "The P(and The Poem" with Grac(Cavalieri recently, Ahmed employed the world's mos universal language to expr his views on the state of today's turbulent political a religious affairs. From Shakespeare to Whitman, Rumi to Maya Angelou, poetry has been utilised as tool for centuries to transcend generations and cultures to convey emotion and perspective.

Though many know him as a diplomat, a political commentator, a filmmaker and an academic, few are familiar with his poetry, though they should. Grace Cavalieri, host of "The Poet and The Poem" complimented the poet for his imagery, language and insights. She dubbed Ahmed "Ambassador of the Heart" as he shared his poems from his recently published collection Suspended Somewhere Between with the program's widespread audience across the United States.

Bringing an intensely personal dimension to Ahmed's career, he described his first memory as a child in his poem, Train to Pakistan. Depicting a bloody scene of the "killing fields of the Punjab" in 1947 Ahmed writes of the first of his many encounters with religious violence. Through the horror and the tragedy, however, Ahmed's perspective is unique as he recognized this violence as a "desperate need to love and be loved." It is this raw, compassionate and human interpretation that is so often lacking in today's attempt to understand one another in our current state of rapid globalisation. But perhaps, as Ahmed shows us, this can be changed through unconventional means such as poetry and the arts.



When asked why he writes poetry, Ahmed replied that since boyhood, poetry has been an escape. Grace noted how improved ur world might be today if ach of us reflected nwardly through poetry nd mindfulness before eacting outwardly. Among hmed's poems concerning is homeland of Pakistan, is love for his family, and lam are poems painting istinct moments in history. hese historical poems lustrate the vitality of earning from history to create a stronger future. ■



ಚವಡಿಹಾಳ ಕಾಲೇಜಿನಲ್ಲಿ ರಾಜ್ಯ ಮಟ್ಟದ ಗಾಂಧಿ ಉಪನ್ಯಾಸ..

ಮನುಕುಲದ ಮಹಾಪುರುಷ ಮಹಾತ್ಮ ಗಾಂಧೀಜಿ ಅವರ ಹಿರಿಮೆ – ಗರಿಮೆಗಳಿಗೆ ನೈತಿಕತೆಯಿಂದ ಕೂಡಿದ ಅವರ ಪವಿತ್ರಮಯ ಜೀವನವೇ ಕಾರಣ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರ ಪಾತ್ರ ಅದ್ವಿತೀಯವಾದುದು ಎಂದು ವಿಜಯಪುರದ ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಎಂ.ಬಿ. ರಜಪೂತ್ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಜ್ಯ ಸರ್ಕಾರ, ರಾಷ್ಟ್ರಪಿತ ಮಹಾತ್ಮ ಗಾಂಧಿ ಫೌಂಡೇಶನ್ ಬೇನಾಲ್ ಆರ್. ಎಸ್ ಹಾಗೂ ಶ್ರೀ ಭಾಗ್ಯವಂತಿ ಪದವಿ ಪೂರ್ವ ಕಾಲೇಜು ಚವಡಿಹಾಳ ಇವರ ಸಹಯೋಗದಲ್ಲಿ ಜರುಗಿದ ' ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಯುವ ಮನಸುಗಳು ' ವಿಷಯ ಕುರಿತು ರಾಜ್ಯ ಮಟ್ಟದ ವಿಶೇಷ ಉಪನ್ಯಾಸ ಕಾರ್ಯಕ್ರಮ, ರಸಪ್ರಶ್ನೆ ಹಾಗೂ ಸಂವಾದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಜಯಪುರದ ಇತಿಹಾಸ ಉಪನ್ಯಾಸಕ ಆರ್. ಸಿ. ಹಿರೇಮಠ ಮಾತನಾಡಿ, ಮಹಾತ್ಮ ಗಾಂಧೀಜಿಯವರು ಒಬ್ಬ ವ್ಯಕ್ತಿಯಲ್ಲ ಅವರೊಂದು ಶಕ್ತಿ ತಮ್ಮ ಸದ್ಭಾವನ, ದೂರದೃಷ್ಟಿ,ಮಾನವೀಯತೆಯ ಮಹಾರೂಪವೇ ಮೈದಳೆದ ಆದರ್ಶ ಪುರುಷ. ಅಂತಹ ಯುಗ ಪುರುಷನನ್ನು ಮತ್ತೊಮ್ಮೆ ನೋಡಬೇಕಾದರೆ ನಾವು ಸಾವಿರಾರು ವರುಷಗಳ ಇತಿಹಾಸದ ಪುಟಗಳನ್ನೊಮ್ಮೆ ತಿರುವಿ ಹಾಕಬೇಕಾಗುತ್ತದೆ ಎಂದರು.

ಆರ್.ಎಂ.ಜಿ.ಎಫ್.ಸಂಸ್ಥಾಪಕ ಅಧ್ಯಕ್ಷ ನೇತಾಜಿ ಗಾಂಧಿ ಮಾತನಾಡಿ,



ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮಾನವ ಪ್ರಪಂಚಕ್ಕೆ ದೀಪಧಾರಿಯೂ ಹೌದು ದಾರಿದೀಪವೂ ಹೌದು.

ಬಾಪೂ ಭಾರತಕ್ಕೆ ಅಷ್ಟೇ ಅಲ್ಲ, ಸೌತ್ ಆಫ್ರಿಕೆಯ ನೆಲ್ಸನ್ ಮಂಡೇಲಾ, ಅಮೇರಿಕೆಯ ಡಾ.ಮಾರ್ಟಿನ್ ಲೂಥರ್ ಕಿಂಗ್ ಜ್ಯುನಿಯರ್, ಬರ್ಮಾದ ಆಂಗ್ ಸಾನ್ ಸೂಕಿ, ಐನ್ ಸ್ಟಿನ್, ಲೆಜ್ ವೇಲೆಸಾ, ಪರ್ಲ್ಬಕ್, ಬರ್ಕ್ ವೈಟ್, ರೋಮಾ ರೋಲಾ, ಲೂಯಿಸ್ ಫಿಶರ್ ಹೀಗೆ ಜಗತ್ತಿನ ಅಸಂಖ್ಯಾತ ಜನನಾಯಕರಿಗೆ ಆದರ್ಶ ಪುರುಷ ರಾಗಿದ್ದಾರೆ ಎಂದರು.

ಶ್ರೀ ಭಾಗ್ಯವಂತಿ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಅಧ್ಯಕ್ಷ ಶಾಂತಪ್ಪ ದಶವಂತ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ನಿವೃತ್ತ ಶಿಕ್ಷಕ ರಾಮಣ್ಣ ದಶವಂತ, ಕಾರ್ಯದರ್ಶಿ ಶಿವಾನಂದ ದಶವಂತ, ಪ್ರಾಚಾರ್ಯ ಚಂದ್ರಶೇಖರ ದಶವಂತ ಉಪಸ್ಥಿತರಿದ್ದರು.

ಗೋಷ್ಠಿಗಳು :

- ' ಮಹಾತ್ಮ ಗಾಂಧೀಜಿಯವರ ಜೀವನ ಮೌಲ್ಯಗಳು',
- ' ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರ' ಹಾಗೂ ' ಜಗತ್ತಿನ ಗಣ್ಯರ ದೃಷ್ಟಿಯಲ್ಲಿ ಗಾಂಧೀಜಿ '

ಈ ವಿಷಯಗಳ ಕುರಿತು ವಿಚಾರಗೋಷ್ಠಿಗಳು ನಡೆದವು.

ರಸಪ್ರಶ್ನೆ :

ಬಾಪೂಜಿ ಕುರಿತು ಜರುಗಿದ ರಸಪ್ರಶ್ನೆಯಲ್ಲಿ ವಿಜೇತರಾದ ವಿದ್ಯಾರ್ಥಿ / ನಿಯರಿಗೆ ಗಾಂಧಿ ಪುಸ್ತಕ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಯಿತು.

ಅಪ್ಪಾರಾಯ ದಶವಂತ, ಬಸವರಾಜ ರೋಡಗಿ, ಪ್ರಾಚಾರ್ಯ, ಸಲಹಾ ಸಮಿತಿಯ ಅಧ್ಯಕ್ಷ, ಬೋಧಕ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ/ ನಿಯರು ಹಾಗೂ ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು. ■



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ ಹಿರಿಯ ಗಾಂಧಿವಾದಿಗಳೊಂದಿಗೆ ಭೇಟಿ ಕಾರ್ಯಕ್ರಮದಲ್ಲಿ ಕೇಂದ್ರ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಶ್ರೀ ರಾಮಚಂದ್ರ ರಾಹಿ , ಕಾರ್ಯದರ್ಶಿ ಸಂಜೋಯ್ ಸಿಂಘ್ ಮತ್ತು ಗಾಂಧಿ ರಾಷ್ಟ್ರೀಯ ಮ್ಯೂಸಿಯಂ ನಿರ್ದೇಶಕ ಅಣ್ಣಾಮಲೈ , ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ . ವೂಡೇ ಪಿ ಕೃಷ್ಣ , ಕಾರ್ಯಾಧ್ಯಕ್ಷ ಎನ್ ಆರ್ ವಿಶುಕುಮಾರ್ , ಕಾರ್ಯಕರ್ಮಗಳ ನಿರ್ದೇಶಕ ಪ್ರೊ ಜಿ ಬಿ ಶಿವರಾಜ್ ಶೇಷಾದ್ರಿ ಪುರಂ ಕಾಲೇಜಿನ ಪ್ರಿನಿಪಾಲ್ ಡಾ. ಬಿ ಜಿ ಭಾಸ್ಕರ್ , ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕಿ ಡಾ . ವಿ ಆರ್ ಭಾರ್ಗವಿ ಭಾಗವಹಿಸಿದ್ದರು .



ಕರ್ನಾಟಕ ಗಾಂಧಿ ಭವನಕ್ಕೆ ಆಗಮಿಸಿದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಶ್ರೀ ರಾಮಚಂದ್ರ ರಾಹಿ, ಕಾರ್ಯದರ್ಶಿ ಸಂಜೋಯ್ ಸಿಂಗ್ ಅವರನ್ನು ಸ್ವಾಗತಿಸಲಾಯಿತು. ಪ್ರಮೋದ್ ಹೆಗಡೆ ,ಡಿ ಆರ್ ಪಾಟೀಲ್, ಉಮೇಶ್ ಬಳಿಗಾರ್ , ವಿಶುಕುಮಾರ್, ಜಿ ಬಿ ಶಿವರಾಜು ಚಿತ್ರದಲ್ಲಿದ್ದಾರೆ .



ಗಾಂಧೀ ಭವನದೆಡೆಗೆ ನಮ್ಮ ನಡಿಗೆ ಕಾರ್ಯಕ್ರಮದ ಅಂಗವಾಗಿ ದಿನಾಂಕ 22/07/2024 ರಂದು ಗಾಂಧೀಭವನಕ್ಕೆ ವಿಬ್ ಗ್ಯೋರ್ ಶಾಲೆಯ ವಿದ್ಯಾರ್ಥಿಗಳು ಭೇಟಿ ನೀಡಿದರು



ಮಂಡ್ಯ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಗಾಂಧೀ ಭವನ, ಜನತಾ ಟ್ರಸ್ಟ್ ಮತ್ತು ರಾಸೇಯೋ ಯುವಜನ ಸೇವೆ-ಕ್ರೀಡಾ ಇಲಾಖೆಯು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕುಲಪತಿಗಳಾದ ಡಾ.ಪುಟ್ಟರಾಜು, ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಡಾ.ಲೀಲಾ ಅಪ್ಪಾಜಿ, ನಾಡೋಜ ಡಾ.ವೋಡೇ ಪಿ ಕೃಷ್ಣ ಅಧ್ಯಕ್ಷರು ಗಾಂಧೀಭವನ , ರಾಸೇಯೊ ರಾಜ್ಯ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ ಡಾ.ನೇತ್ರಾವತಿ, ಜಿ ಬಿ ಶಿವರಾಜು, ರಾಸೇಯೋನ ಅಧಿಕಾರಿಗಳು ಭಾಗವಹಿಸಿದ್ದರು.



ಕರ್ನಾಟಕ ಗಾಂಧೀ ಭವನದ ಮಹದೇವ ದೇಸಾಯಿ ಸಭಾಂಗಣದಲ್ಲಿ ಡಾ: ಹೋ. ಶ್ರೀನಿವಾಸಯ್ಯನವರ ಜನ್ಮ ಶತಮಾನೋತ್ಸವ ಸಮಾರಂಭವನ್ನು ಆಚರಿಸಲಾಯಿತು. ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾದ ಎಚ್ ಕೆ ಪಾಟೀಲ್, ಕೇಂದ್ರ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ರಾಮಚಂದ್ರ ರಾಹಿ, ಕೆ ಹೆಚ್ ಪಾಟೀಲ್ ಪ್ರತಿಷ್ಠಾನದ ಅಧ್ಯಕ್ಷ ಡಿ.ಆರ್ ಪಾಟೀಲ್ , ಹೋ ಶ್ರೀನಿವಾಸಯ್ಯನವರ ಪುತ್ರಿ ಶಶಿಕೃಷ್ಣ, ಸಾಹಿತಿಗಳಾದ ಎಸ್. ಜಿ. ಸಿದ್ದರಾಮಯ್ಯ, ಕರ್ನಾಟಕ ಗಾಂಧಿ ಭವನದ ಅಧ್ಯಕ್ಷರಾದ ವೂಡೇ ಪಿ ಕೃಷ್ಣ ಮುಂತಾದ ಗಣ್ಯರು ಪುಷ್ಪ ನಮನ ಸಲ್ಲಿಸಿದರು.



ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಶ್ರೀ ಮಹಾಂತ ಶಿವಯೋಗಿಗಳ ಜಯಂತಿ ಅಂಗವಾಗಿ ಗಾಂಧೀ ಭವನದಲ್ಲಿ ವ್ಯಸನ ಮುಕ್ತ ದಿನಾಚಾರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮನೋವೈದ್ಯ ಸಿ.ಆರ್.ಚಂದ್ರಶೇಖರ್, ಶಿರೂರು ಮಠದ ಬಸವಲಿಂಗ ಸ್ವಾಮೀಜಿ, ವಿಕ್ಟೋರಿಯಾ ಆಸ್ಪತ್ರೆಯ ಮುಖ್ಯ ವೈದ್ಯರಾದ ಡಾ.ಗುರುಪ್ರಸಾದ್,ವಾರ್ತಾ ಇಲಾಖೆಯ ರಾಮಲಿಂಗಪ್ಪ , ಡಾ.ವೂಡೆ ಪಿ ಕೃಷ್ಣ ಅಧ್ಯಕ್ಷ ಗಾಂಧೀಭವನ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮಹೇಶ್ ಮುಂತಾದವರು ಭಾಗವಹಿಸಿದ್ದರು.

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : **Printastic,** 272, 2nd Main Road, 6th Cross, Lavakushanagar, Laggere Bangalore-58